ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 20 ಬುಧವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 243 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಮಕ್ಕಳನ್ನು ಮಲಗುಂಡಿಗೆ ಇಳಿಸಿದ ಪ್ರಕರಣ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಡಿ. 19–ಕೋಲಾರ ಜಿಲ್ಲೆಯ ವಸತಿ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳನ್ನು ಮಲಗುಂಡಿಗೆ ಇಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಹಾಗೂ ಮತ್ತೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು ಎಂದು ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಕಾರ್ತಿಕ್ ಮರಿಯಪ್ಪ ಆಗ್ರಹಿಸಿದ್ದಾರೆ.

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಯಲವಳ್ಳಿ ಮೊರಾರ್ಜಿ ದೇಸಾಯಿ ವಸತಿನಿಲಯದ ಮಕ್ಕಳನ್ನು ಶೌಚಾಲಯದ ಮಲದ ಗುಂಡಿಗೆ ಇಳಿಸಿ ಸ್ವಚ್ಛಗೊಳಿಸಿರುವ ಪ್ರಕರಣ ತೀವ್ರ ಖಂಡನೀಯ. ಈ ಘಟನೆ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಪ್ರಕರಣದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಂತಹ ಘಟನೆಗಳು ಜರುಗಿದಾಗ ಕೂಡಲೇ ಸಂಬಂಧಿಸಿದ ಇಲಾಖೆ ಹಿರಿಯ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಎಂದು ತಿಳಿಸಿದ್ದಾರೆ.



ಶ್ರೀ ಸಿದ್ಧಗಂಗಾ ಮಠ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಸರ್ವಸದಸ್ಯರ 67ನೇ ಮಹಾಧಿವೇಶನದಲ್ಲಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಅವರಿಗೆ ಸಂಘಸಿರಿ ಪ್ರಶಸ್ತಿ ಪ್ರದಾನ ಮಾಡಿದರು. ಚಿತ್ರದಲ್ಲಿ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ಧೇಶ್ವರಸ್ವಾಮಿಗಳು, ಶ್ರೀ ಬಸವರಾಜೇಂದ್ರ ಸ್ವಾಮೀಜಿ, ಶ್ರೀ ಮಹಾಂತಸ್ವಾಮೀಜಿ, ಶ್ರೀ ಸದಾಶಿವಸ್ವಾಮೀಜಿ, ಶ್ರೀ ವಿಜಯಕುಮಾರಸ್ವಾಮೀಜಿ, ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್, ಮಂಡ್ಯ ಕಾಯಕಯೋಗಿ ಸಮೂಹ ಸಂಸ್ಥೆ ಸಂಸ್ಥಾಪಕ ಎಂ. ಶಿವಕುಮಾರ್, ಸಿದ್ಧಗಂಗಾಮಠದ ಹಳೆಯ ವಿದ್ಯಾರ್ಥಿಗಳ ಮತ್ತು ಹಿತೈಷಿಗಳ ಸಂಘದ ಕಾರ್ಯದರ್ಶಿ ಕೆ.ಎಚ್. ಶಿವರುದ್ರಯ್ಯ, ಮಂಡ್ಯ ಅಧ್ಯಕ್ಷ ಎಂ.ಎಸ್. ಮಂಜುನಾಥ್, ಜಸ್ಟಿನ್ ಡಿಸೋಜಾ, ಎಂ.ಜಿ ಸಿದ್ಧರಾಮಯ್ಯ, ರೂಪ ಕುಮಾರಸ್ವಾಮಿ, ನಳಿನ ಚಂದ್ರಶೇಖರ್, ವಿ.ಲಿಂಗಣ್ಣ, ಅರ್ಪಣ ಶಿವಕುಮಾರ್ ಮುಂತಾದವರು ಉಪಸ್ಥಿತರಿದ್ದರು.

ಸಂಗೀತ ಕಛೇರಿ ಆಧಾರಿತ ರಚನೆಗಳ ಕಾರ್ಯಾಗಾರ

ಮೈಸೂರು, ಡಿ. 19– ಮೈಸೂರಿನ ಶ್ರುತಿಮಂಜರಿ ಪ್ರತಿಷ್ಠಾನವು ತನ್ನ ವಾರ್ಷಿಕ ಸಂಗೀತೋತ್ಸವದ ಅಂಗವಾಗಿ ಪದ್ಮಶ್ರೀ ಪುರಸ್ಕೃತ, ಸಂಗೀತ ಕಲಾ ಆಚಾರ್ಯ ವಿದ್ವಾನ್ ಆರ್.ಎನ್.ತ್ಯಾಗರಾಜನ್ ಅವರು ಕಲಿಸುವ ಸಂಗೀತ ಕಛೇರಿ ಆಧಾರಿತ ರಚನೆಗಳು ಕುರಿತ ಕಾರ್ಯಾಗಾರವನ್ನು ಡಿ. 31 ಮತ್ತು ಜ.1ರಂದು ಸಂಜೆ 4.30ಕ್ಕೆ 580, ಪಿಅಂಡ್‌ಟಿ ಬ್ಲಾಕ್, ಅನಿಕೇತನ, 9ನೇ ಕ್ರಾಸ್, ಕುವೆಂಪುನಗರ ಇಲ್ಲಿ ಏರ್ಪಡಿಸಲಾಗಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಕೆ. ಸೀತಾರಾಮ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9945124825, 9446622466 ಸಂಪರ್ಕಿಸಬಹುದು.



ಮೈಸೂರು–ಚಾಮರಾಜನಗರ ಜಿಲ್ಲಾ ಪೊಲೀಸ್ ಸಹಕಾರ ಸಂಘ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಸೀಮಾ ಲಾಟ್ಕರ್ ಬಿಡುಗಡೆ ಮಾಡಿದರು. ಈ ವೇಳೆ ಡಿವೈಎಸ್ಪಿಗಳಾದ ಸುಮಿತ್, ಹೆಚ್.ವಿ. ವೀರಣ್ಣ, ದೇವಿಪ್ರಸಾದ್, ಶ್ರೀಮತಿ ಕೆ. ಲಕ್ಷ್ಮೀ, ಸಂಘದ ಉಪಾಧ್ಯಕ್ಷ ಕಾಳಪ್ಪನಾಯಕ, ನಿರ್ದೇಶಕರಾದ ಪ್ರಭುರಾಜೇ ಅರಸು, ಟಿ.ಆರ್. ರಘು, ಶ್ರೀಮತಿ ವಿದ್ಯಾರಾಣಿ ಕೆ.ಎನ್., ಮರಪ್ಪ, ಆರ್. ದಿನೇಶ್, ಪ್ರಶಾಂತ್ ಎನ್., ಜಿ.ಎನ್. ಪ್ರದೀಪ್, ಧನಂಜಯ, ಸಂಘದ ಸದಸ್ಯರಾದ ಕೆಂಪಸಿದ್ದಯ್ಯ, ವಿಜಯಕುಮಾರ್, ನಾಗರಾಜನಾಯಕ, ಸಂದೀಪ್ ಎಂ.ಕೆ., ಸಂಘದ ಸಲಹೆಗಾರ ಬಿ.ಎ. ಬಸವೇಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಟಿ.ಎಸ್. ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಸುತ್ತೂರಿನಲ್ಲಿ ಸ್ಪೇಸ್ ಆನ್ ವ್ಹೀಲ್ ಎಕ್ಸಿಬಿಷನ್



ಸುತ್ತೂರು, ಡಿ.19–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೆರವಿನೊಡನೆ ಸ್ಥಾಪಿಸಲ್ಪಟ್ಟಿರುವ 'ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಜ್ಞಾನಸಂಪನ್ಮೂಲ ಕೇಂದ್ರ' ISROನ U.R. Rao ಉಪಗ್ರಹ ಕೇಂದ್ರ, ಬೆಂಗಳೂರು ಸಹಯೋಗದೊಡನೆ `Space on Wheel Exhibition'' ಕಾರ್ಯಕ್ರಮವನ್ನು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಸಲುವಾಗಿ ಶ್ರೀ ಸುತ್ತೂರು ಕ್ಷೇತ್ರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಆಯೋಜಿಸಲಾಗಿತ್ತು.

ಸುತ್ತೂರು ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಪ್ರೌಢಶಾಲೆ ಹಾಗೂ ಪಿ.ಯು. ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಸಾರ್ವಜನಿಕರು ವಿಜ್ಞಾನ ವಸ್ತುಪ್ರದರ್ಶನವನ್ನು ವೀಕ್ಷಿಸಿ ಬಾಹ್ಯಾಕಾಶದ ಬಗ್ಗೆ ವಿವಿಧ ಉಪಗ್ರಹಗಳ ಬಗ್ಗೆ ಉಪಯುಕ್ತ ಜ್ಞಾನವನ್ನು ಪಡೆದರು. ಸದರಿ ಕಾರ್ಯಕ್ರಮಕ್ಕೆ ಇಸ್ರೋದ ವಿಜ್ಞಾನಿಗಳು ಹಾಗೂ ಸುತ್ತೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಾಯಕ ಸಂಯೋಜನಾಧಿಕಾರಿಗಳಾದ ವೀರಭದ್ರಯ್ಯನವರು, ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಜಿ. ಶಿವಮಲ್ಲು ಚಾಲನೆ ನೀಡಿದರು.

ವಿಜ್ಞಾನಿಗಳಾದ ಮಾಲತಿ, ಸುಮಾ, ಶ್ರೀನಿವಾಸ್, ಚಾರ್ಲ್ಸ್ ಹಾಗೂ ಸುಧಾಕರ್, ವಿಭಾ ಸಂಸ್ಥೆ ಮತ್ತು ಜೆಎಸ್‌ಎಸ್‌ನ ಸಾಸಲಾರಾಧ್ಯರವರು ಈ ವೇಳೆ ಉಪಸ್ಥಿತರಿದ್ದರು.

ವ್ಯಕ್ತಿ ನಾಪತ್ತೆ



ಮೈಸೂರು, ಡಿ. 19–ವ್ಯಕ್ತಿಯೊಬ್ಬ ನಾಪತ್ತೆಯಾಗಿರುವ ಬಗ್ಗೆ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಆಶ್ರಯ್ ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಡಿ.1ರಂದು ಸಂಜೆ 4.50 ಸಮಯದಲ್ಲಿ ಮನೆಯಿಂದ ಹೊರಗೆ ಹೋದವರು ಇದುವರೆಗೂ ಮನೆಗೆ ವಾಪಸ್ ಬಂದಿಲ್ಲ ಎಂದು ಅವರ ಪತ್ನಿ ಶ್ರೀಮತಿ ರಾಜೇಶ್ವರಿ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ದೂ. 2418122, ಪೊಲೀಸ್ ಕಂಟ್ರೋಲ್ ರೂಂ. ದೂ. 2418339ಗೆ ಸಂಪರ್ಕಿಸಲು ಕೋರಲಾಗಿದೆ.

ನಿಧನ



ಇಲಿಯಾಸ್ ಅಹಮದ್

ಮೈಸೂರು, ಡಿ. 19– ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ನಿವೃತ್ತ ನೌಕರರು, ಟೈಟಾನ್ ಮಾಂಟೆಸ್ಸರಿ ನಿರ್ದೇಶಕರೂ ಆದ ಸುಭಾಷ್‌ನಗರ ನಿವಾಸಿ ಇಲಿಯಾಸ್ ಅಹಮದ್ (74) ಮಂಗಳವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಸುಭಾಷ್‌ನಗರದಲ್ಲಿರುವ ಮಸೀದಿ–ಇ–ಮೀರಜ್‌ನಲ್ಲಿ ನಮಾಜ್–ಇ–ಜನಾಜ ನಡೆದ ನಂತರ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವನ್ಯಜೀವಿ ಅಂಗಾಂಗಗಳ ವಾಪಸ್ ಮಾಡಲು ಕಾನೂನಿನಡಿ ಅವಕಾಶ

- ಅರಣ್ಯ ಸಚಿವ ಈಶ್ವರ್ ಖಂಡ್ರೆ ಅಧಿಕಾರಿಗಳೊಂದಿಗೆ ಸಭೆ
- ಸದ್ಯದಲ್ಲೇ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಿ ಅಂತಿಮ ತೀರ್ಮಾನ



ಬೆಂಗಳೂರು, ಡಿ. 19(ಕೆಎಂಶಿ)– ಕಾನೂನು ಅರಿವಿಲ್ಲದೆ ವನ್ಯಜೀವಿಗಳ ಅಂಗಾಂಗದಿಂದ ಸಿದ್ಧಪಡಿಸಿದ ವಸ್ತುಗಳನ್ನು ನೋಂದಣಿ ಮಾಡಿಸದೆ ಇಟ್ಟುಕೊಂಡಿರುವ ಮುಗ್ಧ ಜನತೆಗೆ ಕಿರುಕುಳ ಆಗದಂತೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಕಾನೂನು ರೂಪಿಸಲಾಗುವುದು ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.

ಕಾನೂನು ಹಾಗೂ ಅರಣ್ಯ ಇಲಾಖಾ ಅಧಿಕಾರಿಗಳೊಂದಿಗಿನ ಸಭೆಯಲ್ಲಿ ಅವರು, ವನ್ಯಜೀವಿಗಳ ಅಂಗಾಂಗದ ವಸ್ತುಗಳನ್ನು ಇಟ್ಟುಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲ, ಇಂತಹ ವಸ್ತುಗಳನ್ನು ಸರ್ಕಾರಕ್ಕೆ ಮರಳಿಸಲು ಸಾರ್ವಜನಿಕರಿಗೆ ಅವಕಾಶ ನೀಡುವ ಸಂಬಂಧ ಕಡತವನ್ನು ಮುನರ್ ಮಂಡಿಸಲು ಸೂಚನೆ ನೀಡಿದರು. ಅರಣ್ಯವಾಸಿಗಳ ಹಕ್ಕು ರಕ್ಷಿಸುವ ಹಾಗೂ ಹುಲಿ ಉಗುರು ಸೇರಿದಂತೆ ವನ್ಯಜೀವಿಗಳ ಅಂಗಾಂಗದ ಫಲಕಗಳು, ಆಭರಣಗಳು ಸೇರಿದಂತೆ ವಿವಿಧ ವಸ್ತುಗಳನ್ನು ಸರ್ಕಾರಕ್ಕೆ ಮರಳಿಸಲು ಒಂದು ಬಾರಿಗೆ ಅವಕಾಶ ನೀಡುವ ಕಾನೂನಾತ್ಮಕ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಡಿ.23 ಕೊಡಗು ಗೌಡ ಸಮಾಜದ ನೂತನ ಸಭಾಂಗಣ ಉದ್ಘಾಟನೆ



ಮೈಸೂರು, ಡಿ.19(ಜಿಎ)–ವಿಜಯನಗರದ ರೈಲ್ವೆ ಬಡಾವಣೆಯ ಕೊಡಗು ಗೌಡ ಸಮಾಜದ ನೂತನ ಸಭಾಂಗಣವನ್ನು ಡಿ.23ರಂದು ಉದ್ಘಾಟಿಸಲಾಗುವುದು ಎಂದು ಸಂಘದ ಅಧ್ಯಕ್ಷ ತೋಂಟಬೈಲು ಈ.ಮನೋಹರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಹಾಲಿ ಇರುವ ಕಟ್ಟಡ ಮೇಲ್ಭಾಗದ ಮಹಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಸಭಾಂಗಣವನ್ನು ಅಂದು ಬೆಳಗ್ಗೆ 9.30ಕ್ಕೆ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಕೆ.ಹರೀಶ್‌ಗೌಡ, ಎಲ್.ನಾಗೇಂದ್ರ, ಮಾಜಿ ಶಾಸಕ ವಾಸು, ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಆರ್.ಸೋಮಣ್ಣ, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಅನೇಕರು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಗೌಡ ಸಮಾಜದ ಉಪಾಧ್ಯಕ್ಷ ಕುಯ್ಯಮುಡಿ ಬಿ.ರಾಮಪ್ಪ, ಗೌರವ ಕಾರ್ಯದರ್ಶಿ ಕುಂಟಿಕಾನ ಎಸ್.ಗಣಪತಿ, ಸಹ ಕಾರ್ಯದರ್ಶಿ ಕಾಳೇರಮ್ಮ ಎಂ. ನಾಣಯ್ಯ, ನಿರ್ದೇಶಕರಾದ ನಡುವಟ್ಟೀರ ಜಿ.ಲಕ್ಷ್ಮಣ್, ಕೊಂಬಾರನ ಯು. ಬಸಪ್ಪ ಉಪಸ್ಥಿತರಿದ್ದರು.

ಕೃಷಿ ಬೆಲೆ ಆಯೋಗಕ್ಕೆ ಕೃಷಿ ಪರಿಣತರನ್ನು ನೇಮಿಸಿ

ಶಾಸಕರು, ರಾಜಕೀಯ ಹಿನ್ನೆಲೆ ವ್ಯಕ್ತಿಗಳ ನೇಮಕದಿಂದ ಪ್ರಯೋಜನವಿಲ್ಲ



ಮೈಸೂರು, ಡಿ.19(ಜಿಎ)– ಕೃಷಿ ಬೆಲೆ ಆಯೋಗಕ್ಕೆ ಕೃಷಿ ಪರಿಣತರನ್ನು ನೇಮಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮನವಿ ಮಾಡಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಬೆಲೆ ಆಯೋಗಕ್ಕೆ ಶಾಸಕರನ್ನು ಅಥವಾ ರಾಜಕೀಯ ಉದ್ದೇಶದಿಂದ ರಾಜಕೀಯ ಹಿನ್ನೆಲೆ ಇರುವ ವ್ಯಕ್ತಿಗಳನ್ನು ನೇಮಕ ಮಾಡಿಕೊಂಡರೆ, ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳಿಗೆ ಈ ಕುರಿತು ಪತ್ರ ಬರೆಯಲಾಗಿದ್ದು, ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಕಾರ್ಯ ನಿರ್ವಹಿಸಿದ್ದ ಪರಿಣತರನ್ನು ನೇಮಕ ಮಾಡಿದರೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಸಮೀಕ್ಷೆಯಂತೆ ರಾಜ್ಯದ ಶೇ.90ರಷ್ಟು ಪ್ರದೇಶ ಬರಗಾಲ ಪೀಡಿತ ಪ್ರದೇಶವಾಗಿದೆ. ರೈತರು ಬೆಲೆ ಮೋಸದಿಂದ ಈಗಾಗಲೇ ಅತಂತ್ರ ಸ್ಥಿತಿಯಲ್ಲಿದ್ದು, ಆತ್ಮಹತ್ಯೆ ದಾರಿ ಹಿಡಿದಿದ್ದಾರೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಬೆಳೆ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಹಾಗೇ ಈ ಹಿಂದಿನ ಸರ್ಕಾರ ಕಬ್ಬಿನ ಉಪ ಉತ್ಪನ್ನ ಆಧಾರದ ಮೇಲೆ ಟನ್ ಕಬ್ಬಿಗೆ 150 ರೂ. ಪಾವತಿಸಲು ತೀರ್ಮಾನಿಸಿತು. ಕೂಡಲೇ ಸಭೆ ಕರೆದು ತಾಂತ್ರಿಕ ಸಮಸ್ಯೆ ಬಗೆಹರಿಸಿ, ಟನ್ ಕಬ್ಬಿಗೆ 150 ರೂ. ನೀಡಬೇಕೆಂದು ಒತ್ತಾಯಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಹೋರಾಟಗಾರ ಎನ್.ಡಿ.ಸುಂದರೇಶ್ ಅವರ 31ನೇ ನೆನಪಿನ ದಿನಾಚರಣೆಯನ್ನು ಡಿ.21ರಂದು ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ರೈತ ಮುಖಂಡ ಕೆ.ಪುಟ್ಟಣ್ಣಯ್ಯ ಮತ್ತು ಚೌದರಿ ಚರಣ್ ಸಿಂಗ್ ಜನ್ಮದಿನಾಚರಣೆಯನ್ನು ಡಿ.23ರಂದು ಬೆಳಗ್ಗೆ 10.30ಕ್ಕೆ ರಾಯಚೂರಿನ ವೀರಶೈವ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದರು.

ಅಂದಿನ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಸಣ್ಣ ನೀರಾವರಿ ಸಚಿವ ಬಿ.ಆರ್.ಪಾಟೀಲ್, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಸರ್ವೋದಯ ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಪ್ರಸನ್ನ ಎನ್.ಗೌಡ, ಜೆ.ಎಂ.ವೀರಸಂಗಯ್ಯ ಮತ್ತು ರಾಜ್ಯ ರೈತ ಸಂಘದ ಮಹಿಳಾ ವಿಭಾಗದ ರಾಜ್ಯಾಧ್ಯಕ್ಷೆ ನಾಗರತ್ನಮ್ಮ ಭಾಗವಹಿಸಲಿದ್ದಾರೆ. ದಿಕ್ಸೂಚಿ ಭಾಷಣವನ್ನು ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್ ಮಾಡಲಿದ್ದಾರೆ ಎಂದು ತಿಳಿಸಿದರು.

ನಿ.ನ್ಯಾ. ಕಾಂತರಾಜ್ ಆಯೋಗದ ವರದಿ ಜಾರಿಗೆ ದಲಿತ ಸಂಘರ್ಷ ಸಮಿತಿ(ಸಂಯೋಜಕ) ಆಗ್ರಹ



ಮೈಸೂರು, ಡಿ.19(ಜಿಎ)–ನಿವೃತ್ತ ನ್ಯಾಯಮೂರ್ತಿ ಕಾಂತರಾಜ್ ಆಯೋಗದ ಜಾತಿಗಣತಿ ವರದಿಯನ್ನು ಸರ್ಕಾರ ಈ ಕೂಡಲೇ ಜಾರಿಗೊಳಿಸಬೇಕೆಂದು ದಲಿತ ಸಂಘರ್ಷ ಸಮಿತಿಯ (ಸಂಯೋಜಕ) ಜಿಲ್ಲಾ ಘಟಕ ಒತ್ತಾಯಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಮಿತಿಯ ಜಿಲ್ಲಾ ಸಂಯೋಜಕ ಕಾರ್ಯ ಬಸವಣ್ಣ ಮಾತನಾಡಿ, ಹಿಂದುಳಿದ ಸಮುದಾಯದ ಬಹುಸಂಖ್ಯಾತ ಮಂದಿ ಅನೇಕ ಅವಕಾಶಗಳಿಂದ ವಂಚಿತರಾಗಿದ್ದಾರೆ. ಹೀಗಾಗಿ ಅವರೆಲ್ಲರಿಗೂ ಸಾಮಾಜಿಕ ನ್ಯಾಯ ಸಿಗಬೇಕಾದರೆ ಜಾತಿಗಣತಿ ವರದಿ ಜಾರಿಯಾಗಬೇಕು ಎಂದು ಆಗ್ರಹಿಸಿದರು.

ಲೋಕಸಭೆಯ ಭದ್ರತಾ ಲೋಪ ಬಿಜೆಪಿಯ ವ್ಯವಸ್ಥಿತ ಪಿತೂರಿಯಾಗಿದೆ. ಪ್ರತಿ ಚುನಾವಣೆ ಸಂದರ್ಭದಲ್ಲಿಯೂ ಬಿಜೆಪಿ ರಾಷ್ಟ್ರಾದ್ಯಂತ ಇಂತಹ ಅನೇಕ ಘಟನೆಗಳ ಮೂಲಕ ಮತದಾರರ ಸೆಳೆಯುವ ಪ್ರಯತ್ನ ನಡೆಸುತ್ತದೆ. ಇದಕ್ಕೆ ಕಾರಣರಾದ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಸಂಸದ ಪ್ರತಾಪ ಸಿಂಹ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು

ಇದೇ ವೇಳೆ ದಲಿತ ಸಂಘರ್ಷ ಸಮಿತಿಯಲ್ಲಿದ್ದ ದೇವಗಳ್ಳಿ ಸೋಮಶೇಖರ್ ತಮ್ಮ ದಸಂಸ ಸಂಯೋಜಕ ಬಣಕ್ಕೆ ಸೇರ್ಪಡೆಯಾಗಿರುವ ಬಗ್ಗೆ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯ ಸಂಯೋಜಕ ಹೆತ್ತೂರು ಅಣ್ಣಯ್ಯ, ರಾಜ್ಯ ಸಂಸ್ಥಾಪಕ ಸಂಯೋಜಕ ವಿ.ನಾಗರಾಜ್, ಜಿಲ್ಲಾ ಸಂಯೋಜಕ ರಾಜಶೇಖರ್, ಕೆ.ಎಂ. ನಾಗರಾಜು, ರಾಜ್ಯ ಸಮಿತಿ ಸದಸ್ಯ ಮುನಿರಾಜ್ ಉಪಸ್ಥಿತರಿದ್ದರು.

ರಾಗ–ತಾನ–ಪಲ್ಲವಿ ಗಾಯನ ಸ್ಪರ್ಧೆ


ಮೈಸೂರು, ಡಿ. 19– ಮೈಸೂರಿನ ಶ್ರುತಿಮಂಜರಿ ಪ್ರತಿಷ್ಠಾನವು ಕರ್ನಾಟಕ ಶಾಸ್ತ್ರೀಯ ಸಂಗೀತೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಮೊಸಳೆ ಕೃಷ್ಣಮೂರ್ತಿ ಸ್ಮಾರಕ ರಾಗ–ತಾನ–ಪಲ್ಲವಿ ಗಾಯನ ಸ್ಪರ್ಧೆಯನ್ನು ಜ. 7ರಂದು ಬೆಳಗ್ಗೆ 10 ಗಂಟೆಗೆ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಪಲ್ಲವಿ ಗಾಯನ ಸ್ಪರ್ಧೆ ವಿಜೇತರಿಗೆ ಪ್ರಥಮ ಬಹುಮಾನವಾಗಿ ರೂ. 5000 ನೀಡಲಾಗುವುದು. ಅರ್ಜಿ ಸಲ್ಲಿಸಲು ಜ. 3 ಕೊನೇ ದಿನಾಂಕ. ಹೆಚ್ಚಿನ ಮಾಹಿತಿಗೆ ಮೊ. 9945124825, 9449622466 ಸಂಪರ್ಕಿಸಬಹುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಕೆ. ಸೀತಾರಾಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರ

ಮೈಸೂರು, ಡಿ. 19– ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆ ಪ್ರಯುಕ್ತ ಮೈಸೂರು ಮಹಾನಗರಪಾಲಿಕೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತವಾಗಿ ಡಿ. 29 ರಂದು ಬೆಳಗ್ಗೆ 9ಗಂಟೆಗೆ ಗನ್‌ಹೌಸ್ ಎದುರು ಕುವೆಂಪು ಉದ್ಯಾನವನದಲ್ಲಿ ವಿದ್ಯಾರ್ಥಿಗಳಿಗೆ ನಾಕಂಡ ಕುವೆಂಪು ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆ ಹಾಗೂ ಕುವೆಂಪು ಭಾವಚಿತ್ರ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಇದೇ ಸಂದರ್ಭ ಮೈಸೂರು ನಗರ ಹಾಗೂ ತಾಲೂಕು ವಲಯದ ಸರ್ಕಾರಿ ಶಾಲೆ ಮತ್ತು ಕಾಲೇಜುಗಳ 2022–23ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಕನ್ನಡ ವಿಷಯದಲ್ಲಿ ಅತ್ಯಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಗುವುದು. ವಿದ್ಯಾರ್ಥಿಗಳು ತಮ್ಮ ಭಾವಚಿತ್ರ, ಮೊಬೈಲ್ ಸಂಖ್ಯೆ, ದೃಢೀಕೃತ ಅಂಕಪಟ್ಟಿಯ ನಕಲು ಹಾಗೂ ಪ್ರಬಂಧ ಇಲ್ಲವೇ ತಾವು ರಚಿಸಿರುವ ಕುವೆಂಪು ಅವರ ಭಾವಚಿತ್ರಗಳನ್ನು ಮುಖ್ಯೋಪಾಧ್ಯಾಯರು, ಶ್ರೀಲಲಿತ ಕಲಾಮಂದಿರ, 5ನೇಕ್ರಾಸ್, ತ್ಯಾಗರಾಜ ರಸ್ತೆ, ಅಗ್ರಹಾರ, ಇಲ್ಲಿಗೆ ತಲುಪಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೆಂಪಣ್ಣ 9980376620, 9743769403 ಸಂಪರ್ಕಿಸಬಹುದಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.12.2023 ಬುಧವಾರ, ಮಳೆ ನಕ್ಷತ್ರ: ಮೂಲ 16.12.2023 ರಿಂದ 28.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ– ಮೂಕನಹಳ್ಳಿ ರಂಗಸ್ವಾಮಿ, 6.40 ಪದ ಸಂಸ್ಕೃತಿ–ಡಾ.ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ–ಡಾ.ಬಿ.ಆರ್. ಅಂಬೇಡ್ಕರ್ ಸ್ಟಡೀಸ್ ಮತ್ತು ಬುದ್ದಿಸ್ಟ್ ಸ್ಟಡೀಸ್ ವಿಷಯದಲ್ಲಿ ಇರುವ ಅಧ್ಯಯನ ಅವಕಾಶಗಳು ಕುರಿತು ಪ್ರೊ. ಜೆ. ಸೋಮಶೇಖರ್ ಅವರೊಂದಿಗೆ ಮಾತುಕತೆ, 10.00 ಪಂಡಿತ್ ರಾಜೇಂದ್ರ ಪ್ರಸನ್ನ–ಬಾನ್ಸುರಿ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ–ತುಳಸಮ್ಮ ಮತ್ತು ಸಂಗಡಿಗರು, 1.20 ಭಾವಗೀತೆಗಳು–ಸಾವಿತ್ರಿ ಪ್ರಭಾಕರ್, 3.00 ಸಾಕೇತ ರಾಮನ್–ಹಾಡುಗಾರಿಕೆ, 4.00 ಮಹಿಳಾ ರಂಗ–ಸ್ತ್ರೀ ಚೇತನ– ಕವಯಿತ್ರಿ, ಗಾಯಕಿ ಹಾಗೂ ಸಮಾಜ ಸೇವಕಿ ಪ್ರೇಮಾ ಮಾದಪ್ಪ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸಾವಯವ ಕೃಷಿಯಲ್ಲಿ ಸಾಂಪ್ರದಾಯಿಕ ತಳಿಗಳ ಸಂರಕ್ಷಣೆ ಕುರಿತು ಕಾಳಪ್ಪ ಅವರೊಂದಿಗೆ ಸಂದರ್ಶನ, 9.30 ಹಿಂದೂಸ್ಥಾನಿ ಸಂಗೀತ–ಉಸ್ತಾದ್ ವಿಲಯತ್ ಹುಸೇನ್ ಖಾನ್–ಗಾಯನ

■ **ಮರಿಮಲ್ಲಪ್ಪ ಪ್ರೌಢಶಾಲೆ :** ಶಾಲಾ ವಾರ್ಷಿಕೋತ್ಸವ, ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಉಪಸ್ಥಿತರು : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಸದಾಶಿವಮೂರ್ತಿ, ಎಸ್.ಡಿ. ಪ್ರಜ್ವಲ್ ದೇವ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಚ್.ಕೆ. ಪಾಂಡು, ಬಿಇಒ ಸಿ.ಎನ್. ರಾಜು, ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವಿಶ್ರಾಂತಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಶ್ರೀ ಸ್ವಾಮಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು:** ನೂತನ ವಿದ್ಯಾರ್ಥಿಗಳಿಗೆ ಮೂರು ದಿನಗಳ ಪುನಶ್ಚೇತನ–ಕಾರ್ಯಕ್ರಮ–2023–24, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10 ರಿಂದ.

■ **ಅಸೆಂಡೆನ್ಸ್ :** ವಾಟರ್‌ಕಲರ್ ಸೋಲೋ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್:** ಡಾ.ಡಿ.ಎಸ್. ಜಯಪ್ಪಗೌಡರ ಆಂಗ್ಲ ಭಾಷೆಯ 'ಭಾರತರತ್ನ ಸರ್ ಎಂ.ವಿ' (ಸರ್‌ಎಂ.ವಿಶ್ವೇಶ್ವರಯ್ಯನವರ ಜೀವನ ಚರಿತ್ರೆ) ಕೃತಿ ಲೋಕಾರ್ಪಣೆ ಸಮಾರಂಭ, ಅನುವಾದಕರು: ದಿ.ಎನ್.ಪರಮೇಶ್ವರ್, ಕೃತಿ ಬಿಡುಗಡೆ: ಕಾದಂಬರಿಕಾರ ಪ್ರೊ.ಎಸ್.ಎಲ್.ಭೈರಪ್ಪ, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಕೃತಿ ಕುರಿತು: ಇತಿಹಾಸ ತಜ್ಞ ಡಾ.ಎನ್.ಎಸ್. ರಂಗರಾಜು, ಪ್ರಾಸ್ತಾವಿಕ ನುಡಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಮೈಸೂರು ಅರಮನೆ ಮಂಡಳಿ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮಾಜಿ ಅಧ್ಯಕ್ಷ ಎ.ಎಸ್.ಸತೀಶ್, ಕೃತಿಯ ಕರ್ತೃ ಡಾ.ಡಿ.ಎಸ್.ಜಯಪ್ಪಗೌಡ, ಶ್ರೀಮತಿ ಎನ್.ಅಮುದ ಪರಮೇಶ್ವರ್, ಸ್ಥಳ:ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ :** ಕೆ. ಮರೀಗೌಡ ಅವರಿಗೆ ಅಭಿನಂದನಾ ಕಾರ್ಯಕ್ರಮ, ಉದ್ಘಾಟನೆ: ಚಿಂತಕ ಪ್ರೊ.ಬಿ.ಪಿ.ಮಹೇಶ್‌ಚಂದ್ರ ಗುರು, ಅಭಿನಂದಿಸುವವರು: ಶಾಸಕ ಕೆ. ಹರೀಶ್‌ಗೌಡ, ಡಾ.ಡಿ.ತಿಮ್ಮಯ್ಯ, ಮರಿಸ್ವಾಮಿ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಉಪಸ್ಥಿತರು: ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್, ಎಂ.ಲಕ್ಷ್ಮಣ್, ಮಡ್ಡೀಕೆರೆ ಗೋಪಾಲ್, ಸ್ಥಳ: ಅಶ್ವಿನಿ ಕಲ್ಯಾಣ ಮಂಟಪ, ಶ್ರೀರಾಂಪುರ 2ನೇ ಹಂತ, ಮಧ್ಯಾಹ್ನ 12ಕ್ಕೆ.

■ **ಆದರ್ಶ ಸೇವಾ ಸಂಘ :** 77ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ರಾಷ್ಟ್ರ ಜಾಗೃತಿ ಅಭಿಯಾನ ಸಮಾರೋಪ ಸಮಾರಂಭ, ಮಧ್ಯಾಹ್ನ 3 ರಿಂದ ವಿದುಷಿ ನಾಗಲಕ್ಷ್ಮಿ ನಾಗರಾಜನ್ ಅವರಿಂದ ಸ್ವಾಗತ ನೃತ್ಯ, ಡಾ. ಪಾವಗಡ ಪ್ರಕಾಶ್‌ರಾವ್ ಅವರಿಂದ ಉದ್ಘಾಟನೆ ಮತ್ತು ಆಶಯ ನುಡಿ, ಸಾನ್ನಿಧ್ಯ : ಶ್ರೀ ಪರಮಾತ್ಮಜೀ ಮಹಾರಾಜ್ ಸ್ವಾಮೀಜಿ, ಸಂಜೆ 4 ರಿಂದ ವಿದುಷಿ ಪ್ರೀತಿ ಕುಮಾರ್ ಮತ್ತು ನೀತಿ ಕುಮಾರ್ ಅವರಿಂದ ಭರತನಾಟ್ಯ ಪ್ರದರ್ಶನ, ಸಂಜೆ 6 ರಿಂದ ರಾಜರಾಜೇಶ್ವರಿನಗರದ ನಾಟ್ಯ ಸಂಸ್ಕೃತಿ ಕಲಾನಿಕೇತನ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಕಲಾಮಂದಿರ.

■ **ಜಿಲ್ಲಾ ಸಮಾದೇಷ್ಟರು ಗೃಹರಕ್ಷಕ ದಳ :** ಗೃಹರಕ್ಷಕರ ವಾರ್ಷಿಕ ವಲಯ ಮಟ್ಟದ ವೃತ್ತಿಪರ ಹಾಗೂ ಕ್ರೀಡಾಕೂಟ, ಮುಖ್ಯ ಅತಿಥಿಗಳು : ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಲೋಕೇಶ್ ಬಿ. ಜಗಲಾಸರ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಶ್ರೀಮತಿ ಕವಿತಾ, ಅಧ್ಯಕ್ಷತೆ : ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರಾದ ಡಾ. ಎಂ. ಕಾಂತರಾಜು, ಸ್ಥಳ: ಡಿಎಆರ್ ಮೈದಾನ, ಜ್ಯೋತಿನಗರ, ಸಂಜೆ 4ಕ್ಕೆ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ (ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪ ದೇವಾಲಯ):** 63ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 5.30ರಿಂದ ಮಹಾ ಗಣಪತಿ ಹೋಮ, ಉಷಪೂಜಾ, ಶೀವೇಲಿ, ವಾದ್ಯದೊಂದಿಗೆ ದೇವರಿಗೆ ಉತ್ಸವ, ಮಧ್ಯಾಹ್ನ 12 ರಿಂದ ಶ್ರೀ ಅಯ್ಯಪ್ಪನಿಗೆ ನವಗಂ, ಪಂಚಗವ್ಯಂ ಅಭಿಷೇಕ, ಶ್ರೀ ಸುಬ್ರಹ್ಮಣ್ಯಸ್ವಾಮಿ ಮತ್ತು ಶ್ರೀ ಭುವನೇಶ್ವರಿ ದೇವರಿಗೆ ನವಗಂ, ಪಂಚಗವ್ಯಂ, ಉಚ್ಛಪೂಜಾ, ಮ. 12.30 ರಿಂದ ಮಹಾ ಅನ್ನದಾನ, ಸಂಜೆ 4ಕ್ಕೆ ದೀಪಾರಾಧನೆ, ಯಾತ್ರೆ ಬಲಿ, ಯಾತ್ರೆ ಹೋಮ, ದೀಪಾರಾಧನೆ, ತಲಪೊಲಿ, ರಾತ್ರಿ 9ಕ್ಕೆ ಅರಾಟ್ಟು ಉತ್ಸವ, ಅರಾಟ್ಟು ಪೂಜಾ, ಧ್ವಜಾವರೋಹಣ, ಬಾಣ ಬಿರುಸು ಕಾರ್ಯಕ್ರಮ, ಅತ್ತಾಳ ಪೂಜಾ, ಕಳಶಾಭಿಷೇಕಂ, ಶೀವೇಲಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಶ್ರೀ ಚಾಮುಂಡಿಬೆಟ್ಟದ ಪಾದ.

■ **ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು, ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನ, ಪಂಡಿತ್ ಶ್ರೀ ರಾಮಚಂದ್ರಾಚಾರ್ಯ ಉಮರ್ಜಿ ಅವರಿಂದ ಭಗವದ್ಗೀತೆ ಪ್ರವಚನ– ಅಧ್ಯಾಯ 13, ಸ್ಥಳ: ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಅಗ್ರಹಾರ, ಸಂಜೆ 6.30 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಡಾ.ಡಿ.ಜೆ.ಶಶಿಕುಮಾರ್ ಅವರಿಂದ ಭಾರತದ ಸಂವಿಧಾನದ ಆಶಯಗಳು ಮತ್ತು ಯುವ ಸಮುದಾಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ಸರ್ಕಾರಿ ವರ್ಗೀಕೃತ ಬಾಲಕರ ವಿದ್ಯಾರ್ಥಿ ನಿಲಯ ನಿಲಯಪಾಲಕ ಜಿ.ಶಿವಮಲ್ಲಯ್ಯ, ಸ್ಥಳ: ಸರ್ಕಾರಿ ವರ್ಗೀಕೃತ ಬಾಲಕರ ವಿದ್ಯಾರ್ಥಿ ನಿಲಯ, ಶಾಂತವೇರಿ ಗೋಪಾಲಗೌಡ ನಗರ, ಸಂಜೆ 7ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಡಿಸೆಂಬರ್ 20 ಬುಧವಾರ 2023
ಸಂಪುಟ: 44 | ಸಂಚಿಕೆ: 243 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹ 4



ಕ್ರಿಸ್‌ಮಸ್, ಹೊಸ ವರ್ಷಾಚರಣೆ ವೇಳೆ ಕಟ್ಟೆಚ್ಚರ; ಸರ್ಕಾರ ಸೂಚನೆ

60 ವರ್ಷ ಮೇಲ್ಪಟ್ಟವರು, ಆರೋಗ್ಯ ಸಮಸ್ಯೆ ಉಳ್ಳವರು ಹೊರ ಹೋಗುವಾಗ ಮಾಸ್ಕ್ ಕಡ್ಡಾಯ



ಬೆಂಗಳೂರು, ಡಿ. 19(ಕೆಎಂಶಿ)– ಗಡಿಯ ತಮಿಳು ನಾಡು ಮತ್ತು ಕೇರಳ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ಕ್ರಿಸ್‌ಮಸ್ ಮತ್ತು ಹೊಸ ವರ್ಷ ಆಚರಣೆ ಸಂದರ್ಭದಲ್ಲಿ ಎಚ್ಚರಿಕೆ ವಹಿಸಿ ಎಂದು ರಾಜ್ಯ ಸರ್ಕಾರ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಎಲ್ಲಾ ಹಿರಿಯ ನಾಗರಿಕರು, ಗರ್ಭಿಣಿಯರು ಹಾಗೂ ಇತರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಸೂಚಿಸಿದೆ. ಹೊಸ ವರ್ಷ ಆಚರಣೆ ಹಿನ್ನೆಲೆಯಲ್ಲಿ ಕೋವಿಡ್ ಹರಡುವಿಕೆ ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ●9ನೇ ಪುಟಕ್ಕೆ

ಕೆಮ್ಮು, ನೆಗಡಿ, ಜ್ವರ ಹೀಗೆ ಯಾವುದಾದರೂ ಆರೋಗ್ಯ ಸಮಸ್ಯೆ ಇದ್ದರೆ ಕೂಡಲೇ ಪರೀಕ್ಷೆಗೆ ಸಲಹೆ

ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ, ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ



ಬೆಂಗಳೂರು: ಕೇರಳದಲ್ಲಿ ಕೋವಿಡ್ ಜೆಎನ್.1 ರೂಪಾಂತರಿ ಪ್ರಕರಣ ವರದಿಯಾದ ನಂತರ ಕರ್ನಾಟಕದಲ್ಲಿ ಅದರಲ್ಲೂ ಗಡಿಭಾಗದಲ್ಲಿ ಹೈ ಅಲರ್ಟ್ ಆಗಿರುವ ಅಧಿಕಾರಿಗಳು ಚೆಕ್‌ಪೋಸ್ಟ್‌ಗಳಲ್ಲಿ ಪ್ರಯಾಣಿಕರ ಆರೋಗ್ಯ ತಪಾಸಣೆ ಮಾಡಿ ಬಿಡುತ್ತಿದ್ದಾರೆ. ಕೇರಳದಿಂದ ●9ನೇ ಪುಟಕ್ಕೆ

ತಮಿಳುನಾಡು, ಕೇರಳದಲ್ಲಿ ಕೋವಿಡ್ ಪ್ರಕರಣ ಹೆಚ್ಚಳ

ಎರಡು ಪ್ರತ್ಯೇಕ ಮಾರ್ಗಸೂಚಿ

ಕೋವಿಡ್ ಬಗ್ಗೆ ಎರಡು ಪ್ರತ್ಯೇಕ ಮಾರ್ಗಸೂಚಿಗಳನ್ನು ರಾಜ್ಯ ಆರೋಗ್ಯ ಇಲಾಖೆ ಬಿಡುಗಡೆ ಮಾಡಿದೆ. ಒಂದು ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿ, ಸಿಇಒ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಆಗಿದ್ದರೆ ಮತ್ತೊಂದು ಸಾರ್ವಜನಿಕ ಸಲಹಾ ಮಾರ್ಗಸೂಚಿಯಾಗಿದೆ ಜಿಲ್ಲಾಧಿಕಾರಿ, ಸಿಇಒ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಕೋವಿಡ್ ಸರ್ವೇಕ್ಷಣೆ ಹಾಗೂ ಮೇಲುಸ್ತುವಾರಿ ಕೈಗೊಳ್ಳುವ ನಿಟ್ಟಿನಲ್ಲಿ ಸುತ್ತೋಲೆ ಹೊರಡಿಸಲಾಗಿದೆ. ಮತ್ತೊಂದೆಡೆ, ಕೋವಿಡ್ ಹೆಚ್ಚಳ ಆಗುತ್ತಿರುವ ಕಾರಣ ಸಾರ್ವಜನಿಕರಿಗೆ ಪ್ರತ್ಯೇಕ ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ.



"ಆರೋಗ್ಯ ಇಲಾಖೆಯಿಂದ ಕೋವಿಡ್ ಮಾರ್ಗಸೂಚಿ ಬಿಡುಗಡೆ ಮಾಡಿದ್ದೇವೆ. ಔಷಧ, ಆಕ್ಸಿಜನ್, ಬೆಡ್ ವ್ಯವಸ್ಥೆ ಮಾಡಿಕೊಳ್ಳಲು ಸೂಚನೆ ನೀಡಿದ್ದೇವೆ. ಕೋವಿಡ್ ಟೆಸ್ಟ್ ಹೆಚ್ಚಿಸಲು ಅಧಿಕಾರಿಗಳು, ಸಿಬ್ಬಂದಿಗೆ ಸೂಚಿಸಲಾಗಿದೆ. ಕೋವಿಡ್ ಟೆಸ್ಟಿಂಗ್ ಕಿಟ್ ಖರೀದಿಗೂ ಸೂಚನೆ ನೀಡಲಾಗಿದೆ. ನಾಳೆಯಿಂದಲೇ ಕೋವಿಡ್ ಟೆಸ್ಟಿಂಗ್ ಹೆಚ್ಚಿಸಲಾಗುವುದು. ಆರಂಭದಲ್ಲಿ 500 ರಿಂದ 1000 ಕೋವಿಡ್ ಟೆಸ್ಟಿಂಗ್ ಮಾಡಲಾಗುತ್ತದೆ. ಒಂದು ವಾರದ ಬಳಿಕ 5000 ಕೋವಿಡ್ ಟೆಸ್ಟಿಂಗ್ ಮಾಡಲಾಗುತ್ತದೆ. ವಿಶ್ವದಲ್ಲಿ ಎಓ1 ವೈರಸ್ ನವೆಂಬರ್‌ನಲ್ಲಿ 10% ಹರಡುವಿಕೆ ಇತ್ತು. ಡಿಸೆಂಬರ್ ವೇಳೆಗೆ 30% ಆಗಿದೆ. ನಮ್ಮಲ್ಲಿಯೂ ಟೆಸ್ಟ್ ಮಾಡಿದಾಗ ಈ ಸ್ಟ್ರೇನ್ ಬರುವ ಸಾಧ್ಯತೆ ಇದೆ. ಟೆಸ್ಟಿಂಗ್ ಹೆಚ್ಚಳದ ಬಳಿಕ ಕೋವಿಡ್ ಸ್ಪಷ್ಟತೆ ಸಿಗಲಿದೆ. ಅಂತಾರಾಷ್ಟ್ರೀಯ ಪ್ರಯಾಣಿಕರ ಮೇಲೆ ತೀವ್ರ ನಿಗಾ ಇಡಲು ಸೂಚನೆ ನೀಡಲಾಗಿದ್ದು, ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ RTPCR ತಪಾಸಣೆ ಮಾಡಬೇಕು. ಒಂದು ವೇಳೆ ಟೆಸ್ಟ್‌ನಲ್ಲಿ ಪಾಸಿಟಿವ್ ಬಂದ್ರೆ ಜೆನೆಮಿಕ್ ಸೀಕ್ವೆನ್ಸ್‌ಗೆ ಸ್ಯಾಂಪಲ್ ಕಳಿಸಬೇಕು'. –ರಂದೀಪ್, ಆಯುಕ್ತ, ಆರೋಗ್ಯ ಇಲಾಖೆ



ಕರ್ನಾಟಕದಲ್ಲಿ ಭೀಕರ ಬರ; ಬೇಗ ಕೊಡಿ ಪರಿಹಾರ

- ಪ್ರಧಾನಿ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಗ್ರ ಮಾಹಿತಿ ಉಳ್ಳ ಮನವಿ ಸಲ್ಲಿಕೆ
- ಕುಡಿಯುವ ನೀರಿಗೆ ಅನಿವಾರ್ಯವಾಗಿರುವ ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ಅನುಮತಿ ಕೊಡಿಸಿ
- ಕಂದಾಯ ಸಚಿವ ಕೃಷ್ಣಭೈರೇಗೌಡರೊಂದಿಗೆ ಪ್ರಧಾನಿ ಭೇಟಿಯಾಗಿ ಸುದೀರ್ಘ ವಿವರಣೆ ನೀಡಿದ ಸಿಎಂ



ಮಂಗಳವಾರ ನವದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಬರ ಪರಿಸ್ಥಿತಿ ನಿರ್ವಹಣೆ ನೆರವಿಗೆ ಮನವಿ ಮಾಡಿದರು. ಕಂದಾಯ ಸಚಿವ ಕೃಷ್ಣಭೈರೇಗೌಡರು ಈ ವೇಳೆ ಉಪಸ್ಥಿತರಿದ್ದರು.


ನವದೆಹಲಿ, ಡಿ. 19(ಕೆಎಂಶಿ)– ಕರ್ನಾಟಕದಲ್ಲಿ ಭೀಕರ ಬರಗಾಲವಿದೆ. ಹಾಗಾಗಿ ರೈತರು ಸಂಕಷ್ಟದಲ್ಲಿದ್ದಾರೆ. ತಾವು ಕೂಡಲೇ ಅವರ ನೆರವಿಗೆ ಧಾವಿಸಿ ಎಂದು ಇಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ತಮಿಳುನಾಡು–ಕರ್ನಾಟಕ ಕಾವೇರಿ ನೀರಿನ ಶಾಶ್ವತ ಪರಿಹಾರಕ್ಕಾಗಿ ಮೇಕೆದಾಟು ಸಮೀಪ ಕುಡಿಯುವ ನೀರಿಗಾಗಿ ಸಮಾನಾಂತರ ಅಣೆಕಟ್ಟು ನಿರ್ಮಿಸುವುದೂ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರದ ನೆರವು ನೀಡುವಂತೆಯೂ ಕೋರಿದ್ದಾರೆ. ದೆಹಲಿಯಲ್ಲಿಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ಜೊತೆಗೂಡಿ ಪ್ರಧಾನಿ ಅವರನ್ನು ಭೇಟಿ ಮಾಡಿದರು. ಈ ವೇಳೆ ರಾಜ್ಯದ ಬಹುಭಾಗ ಬರಕ್ಕೆ ಸಿಲುಕಿ 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಮತ್ತು ತೋಟಗಾರಿಕಾ ಬೆಳೆಗಳು ನಷ್ಟವಾಗಿವೆ ಎಂದು ವಿವರಿಸಿದ್ದಾರೆ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ●9ನೇ ಪುಟಕ್ಕೆ

ಸಂಸತ್‌ನಲ್ಲಿ ಕಲರ್ ಸ್ಮೋಕ್ ಸಿಡಿಸಿದ ಪ್ರಕರಣ

ಮನೋರಂಜನ್ ಮನೆಯಲ್ಲಿ ಎರಡನೇ ದಿನವೂ ದೆಹಲಿ ಪೊಲೀಸರಿಂದ ತನಿಖೆ

- ಮತ್ತೊಂದು ತನಿಖಾ ತಂಡದಿಂದ ವಿಚಾರಣೆ; ಮನೋರಂಜನ್ ಸಾಮಾನ್ಯವಾಗಿ ಮೈಸೂರಲ್ಲಿ ಭೇಟಿ ನೀಡುತ್ತಿದ್ದ ಸ್ಥಳಗಳ ಬಗ್ಗೆ ಮಾಹಿತಿ ಸಂಗ್ರಹ



ಮೈಸೂರು,ಡಿ.19(ಪಿಎಂ)–ಸಂಸತ್‌ನಲ್ಲಿ ಕಲಾಪದ ವೇಳೆಯೇ ಕಲರ್ ಸ್ಮೋಕ್ ಸಿಡಿಸಿದ ಪ್ರಕರಣದ ಆರೋಪಿ ಮೈಸೂರಿನ ಮನೋರಂಜನ್ ಕುಟುಂಬವನ್ನು ಸೋಮವಾರ ಸುದೀರ್ಘ ವಿಚಾರಣೆ ನಡೆಸಿದ್ದ ದೆಹಲಿ ಪೊಲೀಸರು, ಮಂಗಳವಾರ ಮಧ್ಯಾಹ್ನವೂ ಸುಮಾರು 2 ಗಂಟೆ ಕಾಲ ವಿಚಾರಣೆ ನಡೆಸಿದರು.

ಈ ವೇಳೆ ಮನೋರಂಜನ್ ಮೈಸೂರಿನಲ್ಲಿ ಸಾಮಾನ್ಯವಾಗಿ ಭೇಟಿ ನೀಡುತ್ತಿದ್ದ ಸ್ಥಳಗಳು ಯಾವುವು ಎಂದು ಆತನ ಪೋಷಕರಿಂದ ಮಾಹಿತಿ ಕಲೆ ಹಾಕಿದ್ದಾರೆಂದು ಮೂಲಗಳು ತಿಳಿಸಿವೆ. ಮೈಸೂರಿನ ವಿಜಯನಗರದ 2ನೇ ಹಂತದಲ್ಲಿರುವ ಮನೋರಂಜನ್ ನಿವಾಸಕ್ಕೆ ಇಂದು ಮಧ್ಯಾಹ್ನ ಸುಮಾರು 1.45ರಲ್ಲಿ ಭೇಟಿ ನೀಡಿದ ದೆಹಲಿ ಪೊಲೀಸರು, ಮಧ್ಯಾಹ್ನ ಸುಮಾರು 3.35ರವರೆಗೂ ವಿವಿಧ ಆಯಾಮಗಳಲ್ಲಿ ತನಿಖೆಯ ಪ್ರಕ್ರಿಯೆ ನಡೆಸಿದರು. ನಾಲ್ವರು ಅಧಿಕಾರಿಗಳನ್ನು ಒಳಗೊಂಡ ತಂಡ ಇಂದು ವಿಚಾರಣೆ ನಡೆಸಿದ್ದು, ಈ ತಂಡದಲ್ಲಿದ್ದ ಓರ್ವ ಮಹಿಳಾ ಅಧಿಕಾರಿ ಹೊರತಾಗಿ ಉಳಿದವರು ನಿನ್ನೆ ತನಿಖಾ ಪ್ರಕ್ರಿಯೆ ನಡೆಸಿದ ಅಧಿಕಾರಿಗಳಲ್ಲ ಎನ್ನಲಾಗಿದೆ. ಇಂದು ಪ್ರಮುಖವಾಗಿ ಮನೋರಂಜನ್ ತಾಯಿ ಮತ್ತು ಸಹೋದರಿಯನ್ನು ವಿಚಾರಣೆಗೆ ಒಳಪಡಿಸಿದ್ದರು ಎಂದು ಹೇಳಲಾಗಿದೆ.



ಮನೋರಂಜನ್ ಹಣಕಾಸಿನ ಮೂಲ ಪತ್ತೆಹಚ್ಚುವ ನಿಟ್ಟಿನಲ್ಲಿ ಇಡೀ ಕುಟುಂಬದ ಬ್ಯಾಂಕ್ ಖಾತೆಗಳ ವಿವರ ಪಡೆದಿರುವ ತನಿಖಾಧಿಕಾರಿಗಳು, ಮನೋರಂಜನ್ ಸ್ನೇಹಿತರು ಯಾರಿದ್ದರು? ಅವರಲ್ಲಿ ಮನೆಗೆ ಬರುತ್ತಿದ್ದವರ್‍ಯಾರು? ●10ನೇ ಪುಟಕ್ಕೆ



ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಜ್ಯುಯಲ್ಲರಿ ಸಂಸ್ಥೆಗೆ ಮಹಿಳೆ ಮತ್ತು ಪುರುಷರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
ಪಿಕ್‌ಅಪ್ ಡ್ರಾಪ್ ಮತ್ತು ಉಳಿದುಕೊಳ್ಳಲು ಸೌಲಭ್ಯವಿರುತ್ತದೆ. ಮೈಸೂರಿನಲ್ಲಿ
ಸಂಬಳ:25,000
8884304444

DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 6600
8884171888

ತಮಿಳುನಾಡಿಗೆ ನಿತ್ಯ 3128 ಕ್ಯುಸೆಕ್ ಕಾವೇರಿ ನೀರು ಬಿಡಿ: ಸಿಡಬ್ಲ್ಯುಆರ್‌ಸಿ ಆದೇಶ



ನವದೆಹಲಿ, ಡಿ.19– ತಮಿಳುನಾಡಿಗೆ ಡಿಸೆಂಬರ್ ಅಂತ್ಯದವರೆಗೆ ಪ್ರತಿನಿತ್ಯ 3128 ಕ್ಯುಸೆಕ್ ನೀರು ಹರಿಸುವಂತೆ ಮತ್ತು ಮುಂದಿನ ವರ್ಷ ಜನವರಿಯಲ್ಲಿ ನಿತ್ಯ 1030 ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ(ಸಿಡಬ್ಲ್ಯುಆರ್‌ಸಿ) ಕರ್ನಾಟಕಕ್ಕೆ ನಿರ್ದೇಶನ ನೀಡಿದೆ. ರಾಜ್ಯದಲ್ಲಿ ತೀವ್ರ ಮಳೆ ಕೊರತೆಯಿಂದ ಬರ ಆವರಿಸಿದೆ. ಮುಂದೆ ಬರುವ ಬೇಸಿಗೆಗೆ ಜಲಾಶಯಗಳಲ್ಲಿ ಕುಡಿಯುವ ನೀರಿನ ಅಭಾವ ಎದುರಾಗುವ ಸಾಧ್ಯತೆಗಳಿವೆ. ಆದರೂ ತಮಿಳುನಾಡಿಗೆ ಮತ್ತೆ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣಾ ಸಮಿತಿ ಆದೇಶಿಸಿದ್ದು, ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಸಿಡಬ್ಲ್ಯುಆರ್‌ಸಿ ಮುಂದೆ ಕರ್ನಾಟಕದ ವಾದ..:. 18–12–2023ರವರೆಗೆ ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಒಳಹರಿವಿನ ಕೊರತೆ ಶೇ.52.84 ಇದೆ. ತಮಿಳುನಾಡಿನ ●10ನೇ ಪುಟಕ್ಕೆ

ಮತ್ತೆ 49 ಸಂಸದರು ಲೋಕಸಭೆಯಿಂದ ಅಮಾನತು; ಒಟ್ಟು ಸಂಖ್ಯೆ 173!

ಬೆಂಗಳೂರು, ಡಿ.19– ಸಂಸತ್ತಿನ ಉಭಯ ಸದನಗಳಲ್ಲಿ ಇಂದು ಮತ್ತೆ ಭದ್ರತಾ ಉಲ್ಲಂಘನೆ ಪ್ರಕರಣದ ಗದ್ದಲ, ಕೋಲಾಹಲ ಮುಂದುವರಿದಿದೆ.

ಈ ಹಿನ್ನೆಲೆಯಲ್ಲಿ ಲೋಕಸಭಾಧ್ಯಕ್ಷರು ಲೋಕಸಭೆಯಿಂದ ಫಾರೂಕ್ ಅಬ್ದುಲ್ಲಾ, ಶಶಿ ತರೂರ್, ಮನೀಶ್ ತಿವಾರಿ, ಸುಪ್ರಿಯಾ ಸುಳೆ, ಮೊಹಮ್ಮದ್ ಫೈಸಲ್, ಕಾರ್ತಿ ಚಿದಂಬರಂ, ಸುದೀಪ್ ಬಂಧೋಪಾಧ್ಯಾಯ, ಡಿಂಪಲ್ ಯಾದವ್ ಮತ್ತು ಡ್ಯಾನಿಶ್ ಅಲಿ ಸೇರಿದಂತೆ ಕನಿಷ್ಠ 49 ಲೋಕಸಭಾ ಸಂಸದರನ್ನು ಸಂಸತ್ತಿನ ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಳಿಸಿದ್ದಾರೆ. ನಿನ್ನೆ ಒಂದೇ ದಿನದಲ್ಲಿ ದಾಖಲೆಯ 79 ವಿರೋಧ ಪಕ್ಷದ ಸಂಸದರನ್ನು ಸಂಸತ್ತಿನಿಂದ ಅಮಾನತುಗೊಳಿಸಲಾಗಿತ್ತು. ಇಂದು ಸೇರಿ ರಾಜ್ಯಸಭೆ ಮತ್ತು ಲೋಕಸಭೆ ಎರಡರಲ್ಲೂ ಈ ಅಧಿವೇಶನವನ್ನು ಅಮಾನತುಗೊಳಿಸಿರುವ ಒಟ್ಟು ಸಂಸದರ ಸಂಖ್ಯೆ 173ಕ್ಕೆ ಏರಿದೆ. ಇದು ಸಂಸತ್ತಿನ ಇತಿಹಾಸದಲ್ಲಿ ಇದುವರೆಗೆ ಅತ್ಯಧಿಕವಾಗಿದೆ.

ಮೈಸೂರಿನ ರಾಮಕೃಷ್ಣ ವಿದ್ಯಾಶಾಲಾದಲ್ಲಿ ಕೊನೆಗೂ ಸೆರೆ ಸಿಕ್ಕ ಚಿರತೆ

- ನಿಟ್ಟುಸಿರು ಬಿಟ್ಟ ವಿದ್ಯಾಶಾಲಾ ಮಕ್ಕಳು, ಪೋಷಕರು, ಸಿಬ್ಬಂದಿ ವರ್ಗ, ಆಡಳಿತ ಮಂಡಳಿ
- ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಕುರಿ ತಿನ್ನಲು ಸೋಮವಾರ ರಾತ್ರಿ ಹೊಕ್ಕಿದೆ
- ಕಾರ್ಯಪಡೆಯ ಯಶಸ್ವಿ ಕಾರ್ಯಾಚರಣೆ; 4 ವರ್ಷದ ದೃಢಕಾಯ ಚಿರತೆ
- ಮೈಕ್ರೊ ಚಿಪ್ ಅಳವಡಿಸಿ ಅಭಯಾರಣ್ಯಕ್ಕೆ ಬಿಟ್ಟ ಅರಣ್ಯ ಇಲಾಖೆ ಚಿರತೆ ಕಾರ್ಯಪಡೆ


ಮೈಸೂರು, ಡಿ.19(ಬಿಎಲ್‌ಯು)– ಮೈಸೂರಿನ ಯಾದವಗಿರಿಯ ರಾಮಕೃಷ್ಣ ವಿದ್ಯಾಶಾಲಾದಲ್ಲಿ ವಾರಕ್ಕೂ ಅಧಿಕ ಕಾಲದಿಂದ ಭೀತಿ ಹುಟ್ಟಿಸಿದ್ದ ಚಿರತೆ ಕೊನೆಗೂ ಅರಣ್ಯ ಇಲಾಖೆಯವರು ಇಟ್ಟಿದ್ದ ಬೋನಿನಲ್ಲಿ ಸೆರೆಯಾಗಿದೆ. ಡಿಸೆಂಬರ್ 10ರಂದು ಚಿರತೆ ಕಾಣಿಸಿಕೊಂಡಿತ್ತು. ವಿದ್ಯಾಶಾಲಾದ ಸಿಸಿಟಿವಿ ಕ್ಯಾಮರಾದಲ್ಲಿ ಚಿರತೆ ಸುಳಿದಾಡುವ ದೃಶ್ಯ ಸೆರೆಯಾಗಿತ್ತು. ಇದರಿಂದ ವಿದ್ಯಾಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿ ಭಯಗೊಂಡಿದ್ದರು.

ವಿಷಯ ತಿಳಿದು, ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿದಾಗ ಚಿರತೆಯ ಹೆಜ್ಜೆ ಗುರುತು ಪತ್ತೆಯಾಯಿತು. ಚಿರತೆ ವಿದ್ಯಾಶಾಲಾದ ಕಾಂಪೌಂಡ್ ಒಳಗೇ ಓಡಾಡುವುದು ಅರಣ್ಯ ಇಲಾಖೆಯವರಿಗೆ ಮನವರಿಕೆಯಾಯಿತು. ರಾಮಕೃಷ್ಣ ವಿದ್ಯಾಶಾಲಾ ವಸತಿ ಶಾಲೆಯಾಗಿರುವ ●9ನೇ ಪುಟಕ್ಕೆ



ಬೋನಿನ ಸುತ್ತ ಸಗಣಿ ನೀರು ಸಿಂಪಡಣೆ

ಚಿರತೆಗೆ ಮನುಷ್ಯರ ವಾಸನೆಯನ್ನು ಗ್ರಹಿಸಬಲ್ಲ ಸೂಕ್ಷ್ಮತೆ ಇದೆ. ಹಾಗಾಗಿ, ಮನುಷ್ಯರು ಇರುವ ಕಡೆ ಅದು ಸುಳಿಯುವುದೇ ಇಲ್ಲ. ಈ ಕಾರಣದಿಂದ ಚಿರತೆ ಸೆರೆಗೆ ಇಟ್ಟಿದ್ದ ಬೋನಿನ ಸುತ್ತ ಸಗಣಿ ನೀರು ಸಿಂಪಡಿಸಲಾಗಿತ್ತು. ಇದರಿಂದ ಮನುಷ್ಯನ ವಾಸನೆ ಗ್ರಹಿಸಲು ಸಾಧ್ಯವಾಗುವುದಿಲ್ಲ. ಈ ವಿಧಾನ ಅನುಸರಿಸಿ ಸುಲಭವಾಗಿ ಚಿರತೆಯನ್ನು ಬಲೆಗೆ ಬೀಳಿಸಲು ಅರಣ್ಯ ಇಲಾಖೆ ಸಿಬ್ಬಂದಿ ಉಪಾಯ ಹೂಡಿದ್ದರು. ಆದರೆ ವಾರ ಕಳೆದರೂ ಚಾಲಾಕಿ ಚಿರತೆ ಬೋನಿನತ್ತ ಮುಖ ಮಾಡಲೇ ಇಲ್ಲ. ಕೊನೆಗೂ ಚಿರತೆ ನಿನ್ನೆ ರಾತ್ರಿ ಬೋನಿಗೆ ಬಿದ್ದಿದೆ. ಕೂರ್ಗಳ್ಳಿ ಸುತ್ತಮುತ್ತ ಇರುವ ಕಿರು ಅರಣ್ಯಗಳಿಂದ ರಾಮಕೃಷ್ಣ ವಿದ್ಯಾಶಾಲಾಗೆ ಚಿರತೆ ಬಂದಿರಬಹುದು ಎನ್ನಲಾಗುತ್ತಿದೆ. ದಿನ ಕಳೆದಂತೆ ಅರಣ್ಯಕ್ಕೆ ಹೊಂದಿಕೊಂಡಂತೆ ಜನ ವಸತಿ ಪ್ರದೇಶಗಳಲ್ಲಿ ಪ್ರಾಣಿ ಮತ್ತು ಮಾನವ ಸಂಘರ್ಷ ಹೆಚ್ಚಾಗುತ್ತಿದೆ. ಈ ಸಂದರ್ಭದಲ್ಲಿ ಮೈಸೂರಂತಹ ಮಹಾ ನಗರದ ಮಧ್ಯ ಭಾಗಕ್ಕೂ ಚಿರತೆ ಪ್ರವೇಶ ಮಾಡಿರುವುದು ಜನರಲ್ಲಿ ಭೀತಿ ಮೂಡಿಸಿದೆ.



ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿ ಶುಭ ಸೂಚನೆ! } ಜನವರಿಯಲ್ಲಿ 3 ದಿನ 'ಬ್ರ್ಯಾಂಡ್ ಮೈಸೂರು ಫೆಸ್ಟ್'

- ಸಾಂಸ್ಕೃತಿಕ ನಗರಿಯ ಸಂಸ್ಕೃತಿ, ಪರಂಪರೆ ಸಂಪತ್ತಿನ ಅನಾವರಣ
- ಬ್ರ್ಯಾಂಡಿಂಗ್ ಮೈಸೂರಿನ ಪದಾರ್ಥಗಳ ಪ್ರದರ್ಶನ, ಮಾರಾಟ
- ಭರಪೂರ ಮನರಂಜನೆ ಜೊತೆಗೆ ಮನಸೂರೆಗೊಳ್ಳುವ ಕಲಾ ವೈಭವ



ಮೈಸೂರು, ಡಿ.19(ಎಸ್‌ಬಿಡಿ)– ಬ್ರ್ಯಾಂಡ್ ಮೈಸೂರು ಲೋಗೊ ಬಿಡುಗಡೆ ಬೆನ್ನಲ್ಲೇ ಪ್ರವಾಸೋದ್ಯಮವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮುಂಬರುವ ಜನವರಿಯಲ್ಲಿ ಮೂರು ದಿನಗಳ ಕಾಲ 'ಬ್ರ್ಯಾಂಡ್ ಮೈಸೂರು ಫೆಸ್ಟ್' ಆಯೋಜಿಸಲು ತೀರ್ಮಾನಿಸಲಾಗಿದೆ.

ಮೈಸೂರು ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ 2024ರ ಜ. 26, 27 ಹಾಗೂ 28ರಂದು 'ಬ್ರ್ಯಾಂಡ್ ಮೈಸೂರು ಫೆಸ್ಟ್' ಏರ್ಪಡಿಸಲಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ಜಲದರ್ಶಿನಿ ಅತಿಥಿಗೃಹದಲ್ಲಿ ಮಂಗಳವಾರ ಪೂರ್ವಭಾವಿ ಸಭೆ ನಡೆಸಿ, ಚರ್ಚಿಸಲಾಯಿತು. ಬ್ರ್ಯಾಂಡ್ ಮೈಸೂರು ಫೆಸ್ಟ್‌ನಲ್ಲಿ ಆಯೋಜಿಸಲಾಗುವ ಎಲ್ಲಾ ಕಾರ್ಯಕ್ರಮಗಳ ಸಂಬಂಧ ಪರಿಪೂರ್ಣ ರೂಪುರೇಷೆ ಸಿದ್ಧಪಡಿಸಿದ ನಂತರ ಜನವರಿ ಮೊದಲ ವಾರದಲ್ಲಿ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಅಂತಿಮಗೊಳಿಸಲು ಇಂದಿನ ಪೂರ್ವಭಾವಿ ಸಭೆಯಲ್ಲಿ ನಿರ್ಣಯಿಸಲಾಯಿತು.

ವೈವಿಧ್ಯಮಯ ಉತ್ಸವ: ಜಿಲ್ಲಾಧಿಕಾರಿ ಡಾ.ಕೆವಿ.ರಾಜೇಂದ್ರ ಮಾತನಾಡಿ, ಬ್ರ್ಯಾಂಡ್ ಮೈಸೂರು ಫೆಸ್ಟ್–2023ರ ಅಂಗವಾಗಿ ಮೈಸೂರು ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಂಬಿಸುವ ನಿಟ್ಟಿನಲ್ಲಿ ಅತ್ಯುತ್ತಮ ಕಲಾ ತಂಡಗಳಿಂದ ನಗಾರಿ, ಡೊಳ್ಳು, ಭರತನಾಟ್ಯ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಕ್ಕಳು ಹಾಗೂ ದೊಡ್ಡವರಿಗಾಗಿ ಚಿತ್ರಸಂತೆ, ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ಮೈಸೂರು ಸ್ಥಳೀಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಒಂದೇ ಸೂರಿನಡಿ ಉತ್ತಮ ಗುಣಮಟ್ಟದ ವಸ್ತುಗಳ ರಿಯಾಯ್ತಿ ದರದಲ್ಲಿ ಮಾರಾಟ, ಆಹಾರಮೇಳ, ವಿವಿಧ ಬ್ರ್ಯಾಂಡಿಂಗ್ ವಸ್ತುಗಳ ವ್ಯಾಪಾರ ಉತ್ತೇಜನಕ್ಕಾಗಿ ಫ್ಯಾಷನ್ ಶೋ, ಗಾಳಿಪಟ ಉತ್ಸವ, ರಾಕ್ ಬ್ಯಾಂಡ್ ಮತ್ತಿತರ ಕಾರ್ಯಕ್ರಮ ಆಯೋಜನೆಗೆ ಯೋಜನೆ ರೂಪಿಸಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ●10ನೇ ಪುಟಕ್ಕೆ

ಅರಮನೆ ಅಂಗಳದಲ್ಲಿ ನಿರಂತರ ಸಂಸ್ಕೃತಿ ವೈಭವ



ಪ್ರತಿ ತಿಂಗಳು ವಾರದ ಎರಡನೇ ಮತ್ತು ನಾಲ್ಕನೇ ಶನಿವಾರ ಅರಮನೆ ಎದುರು ರಾಜ ಲಾಂಛನವಿರುವ ಪೋಷಾಕು ಧರಿಸಿ ಪ್ರದರ್ಶನ, ಪೊಲೀಸ್ ಬ್ಯಾಂಡ್ ಇನ್ನಿತರ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿಸಿದ ಜಿಲ್ಲಾಧಿಕಾರಿಗಳು, ಧ್ವನಿ ಮತ್ತು ಬೆಳಕು ಕಾರ್ಯಕ್ರಮಕ್ಕೆ 100 ರೂ. ಟಿಕೆಟ್ ದರವಿದೆ. ಕಾರ್ಯಕ್ರಮವನ್ನು ಮೂರು ಗಂಟೆಗೆ ವಿಸ್ತರಿಸಿ, 200 ರೂ. ಟಿಕೆಟ್ ಮಾಡಲಾಗುವುದು. ಈಗಾಗಲೇ 60 ಲಕ್ಷ ರೂ. ಖರ್ಚು ಮಾಡಿ ರಾಜಪೋಷಾಕು ವಸ್ತ್ರಗಳನ್ನು ಸಿದ್ಧಪಡಿಸಿದ್ದು, ಅವುಗಳನ್ನು ಸಮರ್ಪಕವಾಗಿ ಬಳಕೆ ಮಾಡಬೇಕಿದೆ ಎಂದರು. ಮೈಸೂರು ನಗರ ಸಂಘಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಬಕಿಂಗ್ ಹ್ಯಾಮ್ ಅರಮನೆ ಮಾದರಿಯಲ್ಲಿ ಗನ್‌ಹೌಸ್ ವೃತ್ತದಿಂದ ಅರಮನೆವರೆಗೆ ವಾರದಲ್ಲಿ ಒಂದು ದಿನ ರಾಜ ಪೋಷಾಕು, ಪೊಲೀಸ್ ಬ್ಯಾಂಡ್ ಸಹಿತ ಮೆರವಣಿಗೆ ಆಯೋಜಿಸಬೇಕೆಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅರಮನೆಯಲ್ಲಿ ಹಲವು ಕಾರ್ಯಕ್ರಮ ನಡೆಸಲು ಈಗಾಗಲೇ ಚರ್ಚೆ ನಡೆದಿದ್ದು, ಮುಂದಿನ ವಾರದಲ್ಲಿ ಮತ್ತೊಂದು ಸುತ್ತಿನ ಸಭೆ ನಡೆಸಿ ಯೋಜನೆಯನ್ನು ಅಂತಿಮಗೊಳಿಸೋಣ ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ವೈದ್ಯರು : "ನಿಮ್ಮ ನಾಡಿ ಒಂದೇ ಸಮನೆ ಬಡಿಯುತ್ತಿದೆ. ನಾಲಿಗೆ ಬಣ್ಣ ಕೊಂಚ ಬದಲಾಗಿದೆ. ಸರಿಯಾಗಿ ಹಸಿವಾಗುತ್ತದೆ ತಾನೇ?"

ರೋಗಿ : "ಕೆಲವೊಮ್ಮೆ ಆಗುತ್ತದೆ, ಕೆಲವೊಮ್ಮೆ ಇಲ್ಲ"

ವೈದ್ಯರು : "ಯಾವಾಗ ಹಸಿವಾಗುವುದಿಲ್ಲ?"

ರೋಗಿ : "ಹೊಟ್ಟೆ ತುಂಬಾ ಊಟ ಮಾಡಿದ ಮೇಲೆ!"

ಮೈಸೂರು ಮಿತ್ರ

ಬುಧವಾರ, 20 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜ್ಞಾನಕ್ಕಾಗಿ ಹೂಡಿದ ಬಂಡವಾಳವು
ಅತೀ ಹೆಚ್ಚಿನ ಬಡ್ಡಿಯನ್ನು ತರುತ್ತದೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾವಿರ ಚಿತ್ತಾರವನ್ನು ಒಂದು ಮಸಿ ನುಂಗಿತು

ನಿಮ್ಮ ಪತ್ರಗಳು

ಖಾತಾ ವರ್ಗಾವಣೆಗಾಗಿ ವರ್ಷಗಟ್ಟಲೇ ಅಲೆಸುತ್ತಿರುವ ಪಾಲಿಕೆ

ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆಯಲ್ಲಿ ಖಾತಾ ವರ್ಗಾಯಿಸಿಕೊಳ್ಳಬೇಕೆಂದರೆ ನಾಗರಿಕರು ವರ್ಷಾನುಗಟ್ಟಲೇ ಅಲೆಯಬೇಕು. ಸ್ಥಿರಾಸ್ತಿಗಳ ಸಂಪೂರ್ಣ ದಾಖಲೆಯ ನಕಲು ಪ್ರತಿಗಳನ್ನು ಸಲ್ಲಿಸಿದ್ದರೂ ಇಲ್ಲ ಸಲ್ಲದ ಕಾರಣಗಳನ್ನು ಹೇಳಿ ಅಲೆಸುತ್ತಾರೆ. ಮೈಸೂರು ನಗರದ ಶಾಸಕರಿಗೆ ವಿಷಯ ಗೊತ್ತಿದ್ದರೂ ಜಾಣ ಕುರುಡು ಪ್ರದರ್ಶಿಸಿ ಮೌನಕ್ಕೆ ಶರಣಾಗಿದ್ದಾರೆ. ನಮ್ಮ ಜನಗಳಿಗೆ ತೊಂದರೆಯಾಗುತ್ತಿದೆ ಎಂದು ಇವರಿಗೆ ತಿಳಿಯಬೇಕಾದರೆ ಚುನಾವಣೆಗಳು ಸಮೀಪಿಸಬೇಕು. ಆ ಸಮಯದಲ್ಲಿ ಜನಪರ ಕಾಳಜಿ ಉಕ್ಕಿ ಹರಿಯುತ್ತದೆ. ಆದರೆ ಅಲ್ಲಿಯವರೆಗೆ ಕಿಂಚಿತ್ತೂ ನಮ್ಮ ಪ್ರತಿನಿಧಿಗಳಿಗೆ ಕಾಳಜಿ ಇರುವುದಿಲ್ಲ. ಸಾರ್ವಜನಿಕರು ಸಾಲ–ಸೋಲ ಮಾಡಿಕೊಂಡು ಕಷ್ಟಪಟ್ಟು ಕಂದಾಯ ಪಾವತಿಸಿ ತಮ್ಮ ಹೆಸರಿಗೆ ಸ್ಥಿರಾಸ್ತಿಗಳನ್ನು ನೋಂದಣಿ ಮಾಡಿಸಿಕೊಂಡು ಖಾತಾ ವರ್ಗಾವಣೆ ಮಾಡಿಕೊಡುವಂತೆ ಮಹಾನಗರ ಪಾಲಿಕೆಯ ವಲಯ ಕಚೇರಿಯಲ್ಲಿ ಅರ್ಜಿ ಸಲ್ಲಿಸುತ್ತಾರೆ. ಆದರೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಸ್ವೀಕೃತಿ ಸ್ಥಳದಿಂದಲೇ ಕಿರಿಕಿರಿ ಪ್ರಾರಂಭವಾಗುತ್ತದೆ. ನಂತರ ಅರ್ಜಿದಾರರಿಗೆ 45 ದಿನಗಳ ಬಿಟ್ಟು ನಿಮ್ಮ ಕಂದಾಯ ಪರಿಶೀಲಕರನ್ನು ಭೇಟಿಯಾಗಿ ಎಂಬ ಸಲಹೆ ನೀಡುತ್ತಾರೆ. 45 ದಿನಗಳ ನಂತರ ಕಂದಾಯ ಪರಿಶೀಲಕರನ್ನು ಭೇಟಿಯಾದರೆ ಅವರಿಂದ ಬರುವ ಉತ್ತರ ನಿಮ್ಮ ಅರ್ಜಿ ಬಂದು 45 ದಿನಗಳು ಆಗಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರು ಅರ್ಜಿ ಸಲ್ಲಿಸಿ 45 ದಿನಗಳು ಆಗಿದೆ ಎಂದು ವಾದ ಪ್ರಾರಂಭಿಸುತ್ತಾರೆ. ನಮ್ಮ ಲಾಗಿನ್‌ನಲ್ಲಿ 45 ದಿನಗಳು ಆಗಿಲ್ಲ. ಇಲ್ಲಿಂದ ಎರಡನೇ ಕಿರಿ–ಕಿರಿ ಪ್ರಾರಂಭ ಈ ರೀತಿ ಕಾರಣಗಳನ್ನು ಹೇಳಿ ವರ್ಷಾನುಗಟ್ಟಲೆ ಅಲೆಸುತ್ತಾರೆ. ಕೆಲವು ಸಮಯ ಖಾತೆ ವರ್ಗಾಯಿಸಿ ಕೊಡಲು ಎರಡು ವರ್ಷಗಳು ಅಲೆಸಿ ನಂತರ ವರ್ಗಾಯಿಸಿಕೊಂಡಿರುತ್ತಾರೆ.

ಒಂದು ಅಂಶವನ್ನು ವಿಶೇಷವಾಗಿ ಗಮನಿಸಬೇಕು. ಕೆಲವು ಅರ್ಜಿದಾರರ ಖಾತೆಗಳು ಮಾತ್ರ ನಿಗದಿತ ದಿನದಲ್ಲಿ ವರ್ಗಾವಣೆಗೊಂಡಿರುತ್ತದೆ. ಕಾರಣ ಹಣ ಕೆಲಸ ಮಾಡಿಸಿರುತ್ತದೆ. ಅರ್ಜಿದಾರರ ಖಾತೆ ವರ್ಗಾಯಿಸಿಕೊಳ್ಳಬೇಕಾದರೆ 30 ದಿನಗಳ ಕಾಲಾವಕಾಶ ನೀಡಲಾಗಿದೆ. ಈ ಕಾಲಾವಕಾಶ ಕ್ರಯ ಪತ್ರಗಳಿಗೆ ಅನ್ವಯವಾಗುವುದಿಲ್ಲ. ಆದರೆ ನಗರಪಾಲಿಕೆ ಸಿಬ್ಬಂದಿಗಳು ಅರ್ಜಿದಾರರಿಗೆ ತಪ್ಪು ಮಾಹಿತಿ ನೀಡುತ್ತಾರೆ. ಒಟ್ಟಿನಲ್ಲಿ ಒಂದು ಖಾತೆ ವರ್ಗಾಯಿಸಿಕೊಳ್ಳಬೇಕಾದರೆ ಒಂದೆರಡು ವರ್ಷಗಳು ಕಾಯಲೇಬೇಕು. ಕೆಲವು ವೇಳೆ ತಂದೆಯಿಂದ ಮಗ–ಮಗಳು ದಾನ ಪತ್ರ ಪಡೆದು ಖಾತೆ ವರ್ಗಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದರೆ ಮಗಳ ಹೆಸರಿಗೆ ಖಾತೆ ವರ್ಗಾವಣೆ ಆಗುವಷ್ಟರಲ್ಲಿ ತಂದೆ ಕಾಲವಾದ ಘಟನೆಗಳ ಇರುತ್ತದೆ. ಒಟ್ಟಿನಲ್ಲಿ ಖಾತೆ ವರ್ಗಾಯಿಸಿಕೊಳ್ಳಲು ತಂದೆ ಅರ್ಜಿ ಸಲ್ಲಿದರೆ ಮಕ್ಕಳು ಬಂದು ನಮ್ಮ ತಂದೆ ಕಾಲವಾದ ವಿಷಯ ತಿಳಿಸಿ ನಮ್ಮ ಹೆಸರಿನಲ್ಲಿ ಖಾತೆ ವರ್ಗಾಯಿಸಿ ಕೊಡಿ ಎಂದು ಅರ್ಜಿ ಸಲ್ಲಿಸಿದರೂ ಯಾವುದೇ ರೀತಿಯ ಆಶ್ಚರ್ಯ ಪಡಬೇಕಾಗಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಅರ್ಜಿದಾರರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕೆಂದು ಮನವಿ.

–ಎಂ.ಎನ್.ಧರಣ ವೆಂಕಟೇಶ, ಸ್ಥಿರಾಸ್ತಿಗಳ ಜಿಲ್ಲಾ ಪತ್ರ ಬರಹಗಾರ, ಮೈಸೂರು

ಬಡಾವಣೆಗಳ ರಸ್ತೆಗಳ ದುಸ್ಥಿತಿ

ಮಾನ್ಯರೆ,

ಮೈಸೂರಿನ ಶ್ರೀರಾಂಪುರದ ಪ್ರಮುಖ ಬಡಾವಣೆಗಳಾದ ಪ್ರೀತಿ ಬಡಾವಣೆ, ಕಬಿನಿ ಬಡಾವಣೆ ಮತ್ತು ಕಂದಾಯ ಬಡಾವಣೆಗಳ ರಸ್ತೆಗಳು ಹಲವು ವರ್ಷಗಳಿಂದ ದುರಸ್ತಿ ಕಾಣದೆ ದುಸ್ಥಿತಿಯಲ್ಲಿವೆ.

ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆ ಸಮಯದಲ್ಲಿ ವಿವಿಧ ರಾಜಕೀಯ ಪಕ್ಷಗಳ ನಾಯಕರು ಆರಿಸಿ ಬಂದರೆ ಬಡಾವಣೆಗಳ ಅವಶ್ಯಕತೆಗಳಾದ ರಸ್ತೆ ದುರಸ್ತಿ, ನೀರು ಸರಬರಾಜು (ಕಬಿನಿ ನೀರು), ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿ ಜನರ ಓಟು ಪಡೆದು ಆರಿಸಿ ಬಂದರೂ ಈ ತನಕ ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸಿಲ್ಲ. ಅಧಿಕಾರಿಗಳೂ ಇತ್ತ ಕಡೆ ಗಮನ ಹರಿಸದಿರುವುದು ನಿಜಕ್ಕೂ ವಿಷಾದನೀಯ ಮತ್ತು ನಿಂದನಾರ್ಹ.

ಈಗಲಾದರೂ ಶಾಸಕರು ಮತ್ತು ಸಂಬಂಧಪಟ್ಟ ಪಾಲಿಕೆ, ಪಿಡಬ್ಲ್ಯುಡಿ ಅಧಿಕಾರಿಗಳು ಸೂಕ್ತ ಗಮನಹರಿಸಿ ಹದಗೆಟ್ಟ ಈ ಬಡಾವಣೆಗಳ ರಸ್ತೆಗಳ ರಿಪೇರಿ ಕಾರ್ಯ, ನೀರು ಸರಬರಾಜು ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಕೆಲಸ ಕಾರ್ಯ ನೆರವೇರಿಸುವರೇ ಕಾದು ನೋಡಬೇಕು.

– ಬಡಾವಣೆ ನಿವಾಸಿಗಳು, ಮೈಸೂರು.

ಮೈಸೂರಿಗೆ ನೂತನ ಬಸ್‌ಗಳ ಭಾಗ್ಯ ಎಂದು?

ಮಾನ್ಯರೆ,

ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್‌ಗಳು ತೀರಾ ಹಳೆಯದಾಗಿದ್ದು, ಸಂಚಾರಕ್ಕೆ ಯೋಗ್ಯವಾಗಿರುವುದಿಲ್ಲ. ಈ ಬಸ್‌ಗಳನ್ನು ಚಾಲನೆ ಮಾಡಲು ಪಾಪ ಚಾಲಕರು ಹರಸಾಹಸ ಪಡುತ್ತಿದ್ದಾರೆ. ಇದು ಸಾಲದು ಎಂಬಂತೆ ಬಿಎಂಟಿಸಿಯಿಂದ ಗುಜರಿಗೆ ಹೋಗಲು ಯೋಗ್ಯವಿರುವ ಬಸ್‌ಗಳನ್ನು ಮೈಸೂರು ನಗರ ಸಂಚಾರದಲ್ಲಿ ಬಳಸಲಾಗುತ್ತಿದೆ. ಪ್ರಸ್ತುತ ಶಕ್ತಿ ಯೋಜನೆಯಿಂದ ಜನ ಬಸ್‌ಗಳನ್ನು ಹೆಚ್ಚಾಗಿ ಅವಲಂಬಿತರಾಗಿದ್ದಾರೆ. ಇದಕ್ಕೆಲ್ಲಾ ಮುಕ್ತಿ ಹಾಡಿ ಮೈಸೂರಿಗೆ ನೂತನ ಬಸ್‌ಗಳನ್ನು ಒದಗಿಸಬೇಕೆಂದು ಮನವಿ.

– ನೊಂದ ನಾಗರಿಕರು, ಮೈಸೂರು.

'ರಾಗ' ಪ್ರಶಂಸೆ ಪತ್ರದಲ್ಲಿ

ಮಾನ್ಯರೆ,

ಡಾ. ಎಚ್.ವಿ. ನಾಗರಾಜರಾಯರ 'ರಾಗಭಾರತೀ : ಒಂದು ಅವಲೋಕನ' ಅಂಕಣ ಬರಹ (ನ. 29) ಕುರಿತು : ರಾ. ಗಣೇಶರ ಬಗೆಗಿನ ಒಂದೊಂದು ಮಾತೂ ಅಕ್ಷರಶಃ ಸತ್ಯ. "ಮಾತ್ಸರ್ಯ ಅವರ ಹೃದಯದಲ್ಲಿ ಅಣುವಿನಷ್ಟೂ ಇಲ್ಲ" ಎಂಬ ರಾಯರ ಉಕ್ತಿಗೆ ಸಾಕ್ಷಿ, ನನಗೆ 'ರಾಗ' ಹಿಂದೆ ಬರೆದ ಎರಡು ಪತ್ರಗಳು : "ಈಚಿನ ಕನ್ನಡ ವಿಮರ್ಶೆಗಳಲ್ಲಿರುವ ಅಸ್ಪಷ್ಟತೆ, ಪೂರ್ವಗ್ರಹ, ನೀರಸ ಕ್ಲೇಶ ಮೊದಲಾದವುಗಳಿಲ್ಲದ ತಮ್ಮ ಗದ್ಯವೇ ಪದ್ಯದಷ್ಟು ಸೊಗಸು". "ತಮ್ಮ ಸಮತೋಲನ ಮನಸ್ಸು, ಹೃದಯ ವಿದ್ಯಾ ವಿಲಾಸ ಮತ್ತು ರಸ, ರಚನಾ ವಿನ್ಯಾಸಗಳು ನನಗೆ ಅವಿಸ್ಮರಣೀಯ".

ಪರಿಹಾರ : ಈಗ ಅವಿವಾಹಿತ ಯುವ ರೈತರಿಗೆ ಹೆಣ್ಣು ಸಿಗುತ್ತಿಲ್ಲ ಎಂಬ ಕೂಗು; ಸಮಸ್ಯೆಗೆ ಒಂದೇ ಪರಿಹಾರ : ಹಳ್ಳಿಗಳನ್ನೆಲ್ಲ ಪಟ್ಟಣಗಳನ್ನಾಗಿ ಪರಿವರ್ತಿಸುವುದು!

ಅಸಾಧು : ಡಾ. ಹಾಮಾನಾ ಅವರ ಅಂಕಣ ಬರಹಗಳ ಬಗೆಗಿನ ನನ್ನ ಪತ್ರಕ್ಕೆ ಮುಳ್ಳೂರು ಪ್ರಕಾಶರ ಡಿ. 11ರ ಪ್ರತಿಕ್ರಿಯೆಯಲ್ಲಿ 'ತಿರಸ್ಕಾರ', 'ವೈಮನಸ್ಸು', ಎಂಬ ಮಾತುಗಳ ಪ್ರಯೋಗ ಅಸಾಧು; ನಾನು ಆ ಅರ್ಥದಲ್ಲಿ ನಾಯಕರನ್ನು ಆಕ್ಷೇಪಿಸಿರಲಿಲ್ಲ! ನನಗೆ ಅವರು ಆತ್ಮೀಯರಾಗಿದ್ದರು.

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಡಾ.ಹೆಚ್.ವಿ.ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಹನುಮಂತನ ಸ್ಮರಣೆ

ಹನುಮಂತ, ವಾಯುಸುತ, ಮಾರುತಿ, ಆಂಜನೇಯ ಮುಂತಾದ ಹೆಸರುಗಳಿಂದ ಪ್ರಸಿದ್ಧನಾದ ಶ್ರೀರಾಮನ ಭಂಟನನ್ನು ಅರಿಯದವರಾರು? ರಾಮನವಮಿಯನ್ನು ಆಚರಿಸುವಂತೆಯೇ ಹನುಮ ಜಯಂತಿಯನ್ನೂ ನಾವು ಆಚರಿಸುತ್ತೇವೆ. ರಾಮನಿರುವಲ್ಲೆಲ್ಲಾ ಹನುಮನೂ ಇರುತ್ತಾನೆ. ಎಲ್ಲೆಲ್ಲಿ ಶ್ರೀರಾಮನ ಕೀರ್ತನೆಗಳನ್ನೂ, ಭಜನೆಗಳನ್ನೂ ಮಾಡುತ್ತಾರೋ ಅಲ್ಲಿ ಹನುಮಂತನು ಬಂದು ನಿಂತು ಕೇಳಿ ಆನಂದಭಾಷ್ಪಗಳನ್ನು ಸುರಿಸುತ್ತಾನೆ.

ಯತ್ರ ಯತ್ರ ರಘುನಾಥ ಕೀರ್ತನಂ
ತತ್ರ ತತ್ರ ಕೃತ ಮಸ್ತಕಾಂಜಲಿಮ್ ।
ಭಾಷ್ಪವಾರಿ ಪರಿಪೂರ್ಣ ಲೋಚನಂ
ಮಾರುತಿಂ ನಮತ ರಾಕ್ಷಸಾಂತಕಮ್॥

ಎಂಬ ಶ್ಲೋಕವು ಶ್ರೀರಾಮ–ಹನುಮಂತರ ಅವಿನಾಭಾವವನ್ನು ಒತ್ತಿ ಹೇಳುತ್ತದೆ.

ಹನುಮಂತನು ಹುಟ್ಟಿದ್ದು ಕಿಷ್ಕಿಂಧೆಯಲ್ಲಿ. ವಾಯುದೇವರ ಅನುಗ್ರಹದಿಂದ ಅಂಜನಾ ದೇವಿಯ ಗರ್ಭದಲ್ಲಿ ಜನನ. ವಾನರ ರಾಜ ಸುಗ್ರೀವನ ಪರಮಮಿತ್ರ ಮತ್ತು ಮಂತ್ರಿ. ಹುಟ್ಟಿನಿಂದಲೇ ಸಾಹಸಿ. ಉದಯ ಸೂರ್ಯನನ್ನು ಕೆಂಪಾಗಿ ಮಾಗಿದ ಹಣ್ಣೆಂದು ಭಾವಿಸಿ ತಿನ್ನಲು ಹೊರಟವನು. ಅಪಾರ ಶಕ್ತಿಯ ರಾಶಿಯಂತೆ ಇದ್ದವನು. ಅಲ್ಲದೆ ಸಂಸ್ಕೃತ ವ್ಯಾಕರಣವನ್ನು ಆಮೂಲಾಗ್ರವಾಗಿ ವಶಪಡಿಸಿಕೊಂಡಿದ್ದ ಪಂಡಿತ. ಅವನು ಮಾತನಾಡಿದರೆ ಸಾಕು. ಅವನ ವಿದ್ಯೆಯ ಆಳ ತಿಳಿಯುತ್ತಿತ್ತು. ಮೊದಲನೆಯ ಬಾರಿ ಅವನು ರಾಮಲಕ್ಷ್ಮಣರನ್ನು ಕಂಡಿದ್ದು ಕಿಷ್ಕಿಂಧೆಯ ಬಳಿಯೇ. ರಾವಣ ಅಪಹರಿಸಿದ್ದ ಸೀತೆಯನ್ನು ಹುಡುಕುತ್ತಾ ರಾಮಲಕ್ಷ್ಮಣರು ಬಂದಾಗ ಅವರ ಪೂರ್ವಾಪರಗಳನ್ನು ತಿಳಿದುಕೊಂಡು ಬರಲು ಸುಗ್ರೀವನು ಹನುಮಂತನನ್ನು ಕಳುಹಿಸಿದನು. ಆಗ ಪ್ರಚ್ಛನ್ನ ವೇಷದಿಂದ ಬಂದ ಹನುಮಂತನು ರಾಮಲಕ್ಷ್ಮಣರನ್ನು ಮಾತನಾಡಿಸಿದಾಗ ಅವನ ಭಾಷಾಶುದ್ಧಿ, ವಾಕ್‌ಚಾತುರ್ಯಗಳನ್ನು ಕಂಡ ರಾಮನೇ ವಿಸ್ಮಿತನಾದ. ಲಕ್ಷ್ಮಣನನ್ನು ಕುರಿತು ರಾಮನು ಆಗ ಆಡಿದ ಮಾತುಗಳು ಹನುಮಂತ ಎಂತಹ ವಿದ್ಯಾವಂತ ಎಂಬುದನ್ನು ತಿಳಿಸುತ್ತವೆ.

ನಾನೃಗ್ವೇದ ವಿನೀತಸ್ಯ
ನಾಯಜುರ್ವೇದ ಧಾರಿಣಃ।
ನಾಸಾಮವೇದ ವಿದುಷಃ
ಶಕ್ಯಮೇವಂ ಪ್ರಭಾಷಿತುಮ್॥

(ಋಗ್ವೇದವನ್ನು ಸಂಪೂರ್ಣವಾಗಿ ಕಲಿಯದವನು, ಯಜುರ್ವೇದವನ್ನು ಕಂಠದಲ್ಲಿ ಧರಿಸದವನು, ಸಾಮವೇದವನ್ನು ಹಾಡಿರದವನು ಹೀಗೆ ಮಾತನಾಡಲು ಶಕ್ಯವಲ್ಲ.)

ನೂನಂ ವ್ಯಾಕರಣಂ ಕೃತ್ಸ್ನಂ
ಅನೇನ ಬಹುಧಾ ಶ್ರುತಮ್।
ಬಹು ವ್ಯಾಹರತಾನೇನ ನ
ಕಿಂಚಿದಪಶಬ್ದಿತಮ್॥

(ಇವನು ವ್ಯಾಕರಣವನ್ನು ಸಂಪೂರ್ಣವಾಗಿ ಗುರುಮುಖದಿಂದ ಕೇಳಿದ್ದಾನೆ. ಏಕೆಂದರೆ ಇಷ್ಟೊಂದು ಮಾತನಾಡಿದರೂ, ಇವನು ಒಂದು ಅಪಶಬ್ದವನ್ನೂ ನುಡಿಯಲಿಲ್ಲ.)

ವಸಿಷ್ಠರ ಶಿಷ್ಯನಾಗಿದ್ದ ಶ್ರೀರಾಮನೇ ಹೀಗೆನ್ನಬೇಕಾದರೆ ಹನುಮಂತನಿಗೆ ಬೇರೆ ಯಾವ ಪ್ರಮಾಣಪತ್ರ ಬೇಕು?


ಕಿಷ್ಕಿಂಧಾ ಕಾಂಡದವರೆಗೆ ರಾಮಾಯಣದಲ್ಲಿ ಹನುಮಂತನ ಪ್ರಸ್ತಾಪವೇ ಇಲ್ಲ. ಆಮೇಲೆ ಎಲ್ಲ ಹನುಮಂತನ ಸಾಹಸದ ಕಥೆ. ಸೀತಾನ್ವೇಷಣಕ್ಕಾಗಿ ನಾಲ್ಕು ದಿಕ್ಕುಗಳಲ್ಲೂ ನೂರಾರು ವಾನರರು ಹೊರಟರು. ಆದರೆ ಆ ಕಾರ್ಯದಲ್ಲಿ ಸಫಲನಾಗಿ ಬರುವವನು ಹನುಮಂತನೇ ಎಂಬ ದೃಢ ನಂಬಿಕೆ ರಾಮನಿಗಿತ್ತು. ಆದ್ದರಿಂದಲೇ ಅವನು ತನ್ನ ಅಭಿಜ್ಞಾನಕ್ಕಾಗಿ ಅಂಗುಲೀಯಕವನ್ನು ಹನುಮಂತನಿಗೇ ಕೊಟ್ಟನು. ಹನುಮಂತನೊಡನೆ ದಕ್ಷಿಣ ದಿಕ್ಕಿಗೆ ಹೊರಟ ವೀರರಲ್ಲಿ ಜಾಂಬವಂತ, ಅಂಗದ ಮುಂತಾದವರು ಅನೇಕರಿದ್ದರು. ಆದರೆ ಸಮುದ್ರವನ್ನು ನೋಡಿದಾಗ ಅದನ್ನು ಹಾರಿ ದಾಟುವ ಧೈರ್ಯ ಯಾರಿಗೂ ಇರಲಿಲ್ಲ. ಹನುಮಂತನೇ ಆ ಸಾಹಸವನ್ನು ಮಾಡಿ ವಿಜಯಿಯಾದದ್ದು. ಲಂಕೆಯನ್ನು ಸೇರಿದ ಮೇಲೆ ಅಲ್ಲಿ ಎಲ್ಲ ಸಮಸ್ಯೆಗಳನ್ನು ಪರಿಹರಿಸಿಕೊಂಡು ಅಶೋಕವನದಲ್ಲಿ ಶಿಂಶುಪ ವೃಕ್ಷದ ಕೆಳಗೆ ಕುಳಿತಿದ್ದ ಸೀತಾಮಾತೆಯನ್ನು ಕಂಡವನೂ ಹನುಮಂತ. ಶ್ರೀರಾಮನಾಮ ಜಪದಿಂದ, ರಾಮಾಯಣದ ಕಥೆಯನ್ನು ಹೇಳುವುದರಿಂದ ಆ ಮಾತೆಯ ವಿಶ್ವಾಸವನ್ನು ಗಳಿಸಿ ಆಕೆಗೆ ಧೈರ್ಯವನ್ನು ಹೇಳಿ ರಾವಣನ ಕೋಪವನ್ನು ಕೆರಳಿಸಿ ಆಸ್ಥಾನಕ್ಕೆ ಹೋಗಿ, ಅವನಿಗೆ ಬುದ್ಧಿ ಹೇಳಿ ಹಿತೋಪದೇಶವನ್ನು ಮಾಡಿದವನೂ ಹನುಮಂತನೇ.

> **6**
>
> **ಶ್ರೀರಾಮನ ಭಕ್ತನಾಗು, ಅವನ ನೆಚ್ಚಿನ ಭಂಟನಾಗು ಎಂದು ಯಾರೂ ಹನುಮಂತನಿಗೆ ಉಪದೇಶಿಸಲಿಲ್ಲ. ಯಾವುದೇ ಫಲವನ್ನು ನಿರೀಕ್ಷಿಸಿ ಹನುಮಂತನು ರಾಮನ ಸೇವಕನಾಗಲಿಲ್ಲ. ಸುಗ್ರೀವನಿಗೆ ರಾಜ್ಯದ ಆಸೆಯಿತ್ತು. ಹನುಮಂತನು ರಾಮನಿಂದ ಏನನ್ನೂ ನಿರೀಕ್ಷಿಸಲಿಲ್ಲ. ಎಂದೂ ಯಾವ ಬೇಡಿಕೆಯನ್ನೂ ಮುಂದಿಡಲಿಲ್ಲ. ಇದು ನಿಜ ಭಕ್ತಿ. ಅದರಲ್ಲಿ ಹನುಮಂತನಿಗೆ ಸಾಟಿ ಹನುಮಂತನೇ. ವಾಲಿ, ಸುಗ್ರೀವ ಮುಂತಾದವರೆಲ್ಲಾ ಸ್ತ್ರೀಲೋಲರಾಗಿದ್ದರು. ವಾಲಿ ವಧೆಯಾದ ಮೇಲೆ ರಾಜನಾದ ಸುಗ್ರೀವನು ಮದ್ಯ, ಮಾನಿನಿಯರ ವಿಲಾಸಗಳಲ್ಲಿ ಮುಳುಗಿದ್ದನೆಂದು ರಾಮಾಯಣದಲ್ಲಿ ಹೇಳಿದ್ದಾರೆ. ಆದರೆ ಹನುಮಂತನು ಸದಾ ನೈಷ್ಠಿಕ ಬ್ರಹ್ಮಚಾರಿ. ಯಾವ ದುರ್ವ್ಯಸನವೂ ಅವನನ್ನು ಸ್ಪರ್ಶಿಸಿರಲಿಲ್ಲ. ಇದು ಅವನ ಶುದ್ಧ ಚಾರಿತ್ರ್ಯವನ್ನು ತೋರಿಸುತ್ತದೆ.**

ಶ್ರೀರಾಮನ ಭಕ್ತನಾಗು, ಅವನ ನೆಚ್ಚಿನ ಭಂಟನಾಗು ಎಂದು ಯಾರೂ ಹನುಮಂತನಿಗೆ ಉಪದೇಶಿಸಲಿಲ್ಲ. ಯಾವುದೇ ಫಲವನ್ನು ನಿರೀಕ್ಷಿಸಿ ಹನುಮಂತನು ರಾಮನ ಸೇವಕನಾಗಲಿಲ್ಲ. ಸುಗ್ರೀವನಿಗೆ ರಾಜ್ಯದ ಆಸೆಯಿತ್ತು. ಹನುಮಂತನು ರಾಮನಿಂದ ಏನನ್ನೂ ನಿರೀಕ್ಷಿಸಲಿಲ್ಲ. ಎಂದೂ ಯಾವ ಬೇಡಿಕೆಯನ್ನೂ ಮುಂದಿಡಲಿಲ್ಲ. ಇದು ನಿಜ ಭಕ್ತಿ. ಅದರಲ್ಲಿ ಹನುಮಂತನಿಗೆ ಸಾಟಿ ಹನುಮಂತನೇ.

ವಾಲಿ, ಸುಗ್ರೀವ ಮುಂತಾದವರೆಲ್ಲಾ ಸ್ತ್ರೀಲೋಲರಾಗಿದ್ದರು. ವಾಲಿ ವಧೆಯಾದ ಮೇಲೆ ರಾಜನಾದ ಸುಗ್ರೀವನು ಮದ್ಯ, ಮಾನಿನಿಯರ ವಿಲಾಸಗಳಲ್ಲಿ ಮುಳುಗಿದ್ದನೆಂದು ರಾಮಾಯಣದಲ್ಲಿ ಹೇಳಿದ್ದಾರೆ. ಆದರೆ ಹನುಮಂತನು ಸದಾ ನೈಷ್ಠಿಕ ಬ್ರಹ್ಮಚಾರಿ. ಯಾವ ದುರ್ವ್ಯಸನವೂ ಅವನನ್ನು ಸ್ಪರ್ಶಿಸಿರಲಿಲ್ಲ. ಇದು ಅವನ ಶುದ್ಧ ಚಾರಿತ್ರ್ಯವನ್ನು ತೋರಿಸುತ್ತದೆ.

ಶ್ರೀರಾಮನಿಗೆ ಹನುಮಂತನು ಮಾಡಿದ ಉಪಕಾರಗಳು ಅನೇಕ. ಆದರೆ ತಾನು ಭಗವಂತನ ಸೇವೆ ಮಾಡುತ್ತಿರುವೆನೆಂದು ಮಾತ್ರ ಅವನು ಭಾವಿಸಿದ್ದನು. ತಾನು 'ಉಪಕಾರ' ಮಾಡುತ್ತಿರುವೆನೆಂದು ಅವನೆಂದೂ ಭಾವಿಸಲಿಲ್ಲ. ಪ್ರತ್ಯುಪಕಾರವನ್ನು ಶ್ರೀರಾಮನು ಮಾಡಬೇಕೆಂದು ಅವನೆಂದೂ ನಿರೀಕ್ಷಿಸಲಿಲ್ಲ. ಆದರೆ ಶ್ರೀರಾಮನು ಮಾತ್ರ ಅವನಿಂದ ಆಗಿದ್ದ ಉಪಕಾರವನ್ನೆಂದೂ ಮರೆಯಲಿಲ್ಲ. ಅವನು ನುಡಿದ ಮಾತು –



ಏಕೈಕಸ್ಯೋಪಕಾರಸ್ಯ ಸರ್ವಂ
ದಾಸ್ಯಾಮಿ ತೇ ಹರೇ ।
ಶೇಷಾಣಾಮುಪಕಾರಾಣಾಂ
ಭವಾಮ ಋಣಿನೋ ವಯಮ್ ॥

(ಹನುಮಂತನೆ, ನೀನು ಮಾಡಿದ ಒಂದೊಂದು ಉಪಕಾರಕ್ಕೆ ನಾನು ನನ್ನ ಸರ್ವಸ್ವವನ್ನೂ ಕೊಡಬೇಕು. ಆಗ ಒಂದು ಉಪಕಾರದ ಋಣವನ್ನು ಮಾತ್ರ ತೀರಿಸಿದಂತಾಗುತ್ತದೆ. ಉಳಿದ ಉಪಕಾರಗಳಿಗೆ ನಾನು ಋಣಿಯೇ ಆಗಿರಬೇಕಾಗುತ್ತೆ.)

ಮಯ್ಯೇವ ಜೀರ್ಣತಾಂ ಯಾತು
ಯತ್ ತ್ವಯೋಪಕೃತಂ ಹರೇ ।
ನರಃ ಪ್ರತ್ಯುಪಕಾರಾರ್ಥೀ
ವಿಪತ್ತಿ ಮಭಿಕಾಂಕ್ಷತಿ॥

(ಹನುಮಂತನೆ, ನಾನು ಪ್ರತ್ಯುಪಕಾರವನ್ನು ಮಾಡಬೇಕೆನ್ನುವ ಮನುಷ್ಯನು ಪರೋಕ್ಷವಾಗಿ "ಉಪಕಾರವನ್ನು ಮಾಡಿದವನು ಕಷ್ಟಕ್ಕೆ ಈಡಾಗಲಿ" ಎಂದು ಆಶಿಸಿದಂತಾಗುತ್ತದೆ. ಏಕೆಂದರೆ ಕಷ್ಟದಲ್ಲಿ, ವಿಪತ್ತಿನಲ್ಲಿ, ತೊಂದರೆಯಲ್ಲಿ ಇದ್ದವರು ಮಾತ್ರ ಉಪಕಾರವನ್ನು ಅಪೇಕ್ಷಿಸುತ್ತಾರೆ. ಹನುಮಂತ, ನೀನು ಅಂಥ ತೊಂದರೆಗೆ ಸಿಕ್ಕುವುದೂ ಬೇಡ, ನಾನು ನಿನಗೆ ಉಪಕಾರವನ್ನು ಮಾಡುವುದೂ ಬೇಡ. ನೀನು ಮಾಡಿದ ಉಪಕಾರಗಳೆಲ್ಲಾ ನನ್ನಲ್ಲೇ ಜೀರ್ಣವಾಗಿ ಕರಗಿ ಹೋಗಲಿ.) ಇಷ್ಟು ಉನ್ನತ ಚಿಂತೆಯನ್ನು ಶ್ರೀರಾಮನಲ್ಲದೆ ಬೇರೆ ಯಾರು ಮಾಡಲು ಸಾಧ್ಯ? ಇಂತಹ ನುಡಿಗಳನ್ನು ಹೇಳಿಸಿಕೊಂಡ ಹನುಮಂತನೇ ಧನ್ಯನಲ್ಲವೆ?

ಹನುಮಂತನು ಶ್ರೀರಾಮನ ದೃಷ್ಟಿಯಲ್ಲಿ ಅವನ ತಮ್ಮಂದಿರಿಗೆ ಸಮಾನ. ಅವನು ಸ್ಪಷ್ಟವಾಗೇ ಹನುಮಂತನಿಗೆ ಹೇಳಿದ ಮಾತು –

ಚತುರ್ಣಾಂ ಪುನರಸ್ಮಾಕಂ
ಭ್ರಾತೃಣಾಂ ಪಂಚಮೋ ಭವಾನ್ ।

(ನಾಲ್ವರು ಸಹೋದರರಾಗಿದ್ದ ನಮಗೆ ನೀನು ಐದನೆಯ ಸೋದರ.)

ವಾನರ ಕುಲದಲ್ಲಿ ಹುಟ್ಟಿದ ಹನುಮಂತನು ನರರಿಗೂ ಪೂಜ್ಯನಾಗಿರುವುದು ಗಮನಾರ್ಹ. ಕೆಸರಿನಲ್ಲಿ ಹುಟ್ಟಿದರೂ ಕಮಲವು ದೇವರ ಮುಡಿಯನ್ನು ಸೇರುತ್ತದೆ. ಎಲ್ಲಿ ಹುಟ್ಟಿದೆವೆಂಬುದು ಮುಖ್ಯವಲ್ಲ, ಏನು ಮಾಡಿದೆವು, ಏನಾದೆವು ಎಂಬುದು ಮುಖ್ಯ – ಎಂಬ ತತ್ತ್ವವನ್ನು ಹನುಮಂತನ ಸಿದ್ಧಿ ಸಾಧನಗಳು ತಿಳಿಸುತ್ತವೆ.

ಮಾಧ್ವ ಮತದಲ್ಲಿ ಹನುಮಂತನನ್ನು ಪ್ರಥಮ ಭಗವತ್ಕಾರ್ಯ ಸಾಧಕ ಎಂದು ಪರಿಗಣಿಸಲಾಗಿದೆ.

ಪ್ರಥಮೋ ಹನುಮಾನ್ ನಾಮ
ದ್ವಿತೀಯೋ ಭೀಮ ಏವಚ ।
ತೃತೀಯಃ ಪೂರ್ಣಪ್ರಜ್ಞಶ್ಚ
ಭಗವತ್ಕಾರ್ಯ ಸಾಧಕಾಃ ॥

ಭಗವತ್ಕಾರ್ಯ ಸಾಧಕರಲ್ಲಿ ಮೊದಲನೆಯವನು ಹನುಮಂತ. ಅವನು ತ್ರೇತಾಯುಗದಲ್ಲಿ ಭಗವದವತಾರನಾದ ಶ್ರೀರಾಮನ ಸೇವಕ, ಎರಡನೆಯವನು ಪಾಂಡವ ಮಧ್ಯಮನಾದ ಭೀಮಸೇನ. ಮೂರನೆಯವರು ಪೂರ್ಣಪ್ರಜ್ಞರೆಂದು ಪ್ರಸಿದ್ಧರಾದ ಶ್ರೀ ಮಧ್ವಾಚಾರ್ಯರು. ಈ ಮೂವರೂ ಜೀವೋತ್ತಮ ವಾಯುವಿನ ಅನುಗ್ರಹದಿಂದ ಸಂಜಾತರು. ಹರಿಯ ಸರ್ವೋತ್ತಮತ್ವವನ್ನು ಜಗತ್ತಿಗೆ ಸಾರಿದವರು.

ಮನೋಜವಂ ಮರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ॥
ವಾತಾತ್ಮಜಂ ವಾನರಯೂಥ ಮುಖ್ಯಂ
ಶ್ರೀರಾಮದೂತಂ ಶಿರಸಾ ನಮಾಮಿ॥

ಸಂಸತ್ ಮೇಲೆ ಕಿಡಿಗೇಡಿಗಳ ದಾಳಿ ನಡೆದರೆ

ವಿಪಕ್ಷಗಳ ಮೇಲೆ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ದಾಳಿ

ರಣದೀಪ್ ಸುರ್ಜೇವಾಲ ಆಕ್ರೋಶ



ಬೆಂಗಳೂರು: ಸಂಸತ್ ಮೇಲಿನ ದಾಳಿಯ ಭದ್ರತಾ ವೈಫಲ್ಯಕ್ಕೆ ಉತ್ತರ ಕೊಡಬೇಕಿರುವುದು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವರಾದ ಅಮಿತ್ ಶಾ ಅವರ ಕರ್ತವ್ಯ ಎಂದು ರಾಜ್ಯಸಭಾ ಸದಸ್ಯ ರಣದೀಪ್ ಸುರ್ಜೇವಾಲ ಹೇಳಿದ್ದಾರೆ.

ಪ್ರಜಾಪ್ರಭುತ್ವದ ಪರಮೋಚ್ಛ ವೇದಿಕೆಯಾಗಿರುವ ಸಂಸತ್ ಮೇಲಿನ ದಾಳಿಯ ಹೊಣೆಯನ್ನು ಸರಕಾರವೇ ಹೊರಬೇಕು ಎಂದು ಅವರು ಆಗ್ರಹಿಸಿದ್ದಾರೆ. ರಕ್ಷಣಾ ವೈಫಲ್ಯದ ಬಗ್ಗೆ ಉತ್ತರ ಕೊಡುವಂತೆ ಆಗ್ರಹಿಸಿ ವಿರೋಧ ಪಕ್ಷಗಳು ನ್ಯಾಯಯುತವಾಗಿ ಸಂಸತ್ ಕಲಾಪದಲ್ಲಿ ಆಗ್ರಹಿಸಿವೆ. ಆದರೆ, ಪ್ರತಿಪಕ್ಷಗಳ ಮಾತಿಗೆ ಕೇಂದ್ರ ಸರ್ಕಾರವು ಮನ್ನಣೆ ನೀಡದೆ ಹಿಟ್ಲರ್ ಧೋರಣೆ ತಾಳಿದೆ ಎಂದು ಅವರು ಕಿಡಿಕಾರಿದ್ದಾರೆ. ಭದ್ರತಾ ಲೋಪ ಉಂಟಾಗಲು ಕಾರಣರಾದ ಕರ್ನಾಟಕದ ಸಂಸತ್ ಸದಸ್ಯ ಪ್ರತಾಪ್ ಸಿಂಹ ಅವರನ್ನು ಅಮಾನತು ಮಾಡುವುದನ್ನು ಬಿಟ್ಟು ಪ್ರತಿಪಕ್ಷಗಳ 141 ಸಂಸದರನ್ನು ಅಮಾನತು ಮಾಡಿದೆ. ಇದು ನಿಜಕ್ಕೂ ಖಂಡನೀಯ. ಭಾರತೀಯ ಸಂಸತ್ ವ್ಯವಸ್ಥೆಯ ಇತಿಹಾಸದಲ್ಲಿ ಇಷ್ಟು ದೊಡ್ಡ ಮಟ್ಟದಲ್ಲಿ ಸಂಸದರನ್ನು ಅಮಾನತು ಮಾಡಿರುವುದು ಇದೇ ಮೊದಲು. ನ್ಯಾಯ ಕೇಳಲು ಬಂದವರನ್ನೇ ಅಮಾನತು ಮಾಡುವುದು ಎಷ್ಟು ಸರಿ? ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಕರಾಳ ದಿನವಾಗಿದೆ ಎಂದಿದ್ದಾರೆ.

ಒಂದು ಕಡೆ ಸಂಸತ್ ಮೇಲೆ ಈ ರೀತಿಯ ದಾಳಿ ನಡೆದರೆ, ಮತ್ತೊಂದು ಕಡೆ ಪ್ರಧಾನಿ ನರೇಂದ್ರ ಮೋದಿ ಅವರು ಸಂಸದರ ಮೇಲೆ ಮತ್ತೊಂದು ರೀತಿಯಲ್ಲಿ ದಾಳಿ ಮಾಡುತ್ತಿದ್ದಾರೆ. ಸಂಸದರನ್ನು ಅಮಾನತು ಮಾಡಿ ಅವರ ಹಕ್ಕನ್ನು ಹತ್ತಿಕ್ಕುವ ಕೆಲಸವನ್ನು ಮಾಡಲಾಗುತ್ತಿದೆ. ಒಂದು ವೇಳೆ ಅಮಾನತು ಮಾಡಬೇಕಿದ್ದರೆ ಲೋಪ ಎಸಗಿದ ಸಂಸದರಾದ ಪ್ರತಾಪ್ ಸಿಂಹ ಅವರನ್ನು ಅಮಾನತು ಮಾಡಬೇಕಿತ್ತು. ಇದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದ್ದಾರೆ. ಈ ಭದ್ರತಾ ವೈಫಲ್ಯದ ಬಗ್ಗೆ ಉತ್ತರ ಕೊಡಿ ಎಂಬ ಸಣ್ಣ ಬೇಡಿಕೆಯನ್ನು ನಾವು ಕೇಳಿದ್ದವು. ಇಷ್ಟಕ್ಕೆ ಬೆದರಿದ ಆಡಳಿತ ಪಕ್ಷದವರು ವಿರೋಧ ಪಕ್ಷದ 141 ಸಂಸದರನ್ನು ಅಮಾನತು ಮಾಡಿದೆ. ಇವರು ಪ್ರಜಾಪ್ರಭುತ್ವವನ್ನು ಹತ್ತಿಕ್ಕಿ ಸರ್ವಾಧಿಕಾರಿ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಈ ಹಿಂದೆ ಕಾಂಗ್ರೆಸ್ ಮುಕ್ತ ಮಾಡುತ್ತೇನೆ ಎಂದು ಹೋದರು. ಆದರೆ, ಅದು ಆಗಲಿಲ್ಲ. ಅದಕ್ಕೆ ಈಗ ವಿರೋಧ ಪಕ್ಷವನ್ನು ಹತ್ತಿಕ್ಕುವ ಕೆಲಸಕ್ಕೆ ಮುಂದಾಗಿದ್ದಾರೆ. ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷವೇ ಇರಬಾರದು ಎಂಬುದು ಇವರ ಅಜೆಂಡಾ ಆಗಿದೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ ಎಂದೂ ಕಿಡಿ ಕಾರಿದ್ದಾರೆ.

42,270 ಕೋಟಿ ಬ್ಯಾಂಕ್ ಠೇವಣಿಗೆ ವಾರಸುದಾರರೇ ಇಲ್ಲ

ನವದೆಹಲಿ: ದೇಶದಲ್ಲಿ ಸರ್ಕಾರಿ ಹಾಗೂ ಖಾಸಗಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ವಾರಸುದಾರರು ಇಲ್ಲದ ಠೇವಣಿಯು 2023ರ ಮಾರ್ಚ್ ಅಂತ್ಯದ ವೇಳೆಗೆ ಶೇ 28ರಷ್ಟು ಏರಿಕೆಯಾಗಿ, ರೂ. 42,270 ಕೋಟಿಗೆ ತಲುಪಿದೆ ಎಂದು ಕೇಂದ್ರ ಸರ್ಕಾರವು ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ. ಈ ಪೈಕಿ ಸರ್ಕಾರಿ ವಲಯದ ಬ್ಯಾಂಕ್‌ಗಳಲ್ಲಿ ರೊ. 36,185 ಕೋಟಿ ಇದ್ದರೆ, ಖಾಸಗಿ ಬ್ಯಾಂಕ್‌ಗಳಲ್ಲಿ 6,087 ಕೋಟಿ ಠೇವಣಿ ಇದೆ. 2022ರ ಹಣಕಾಸು ವರ್ಷದಲ್ಲಿ ಈ ಎರಡೂ ವಲಯದ ಬ್ಯಾಂಕ್‌ಗಳಲ್ಲಿ ವಾರಸುದಾರರು ಇಲ್ಲದ ಠೇವಣಿಯು 32,934 ಕೋಟಿ ಇತ್ತು. ವಾರಸುದಾರರು ಇಲ್ಲದ ಠೇವಣಿಗಳ ಪ್ರಮಾಣ ತಗ್ಗಿಸಲು ಹಾಗೂ ಸರಿಯಾದ ಹಕ್ಕುದಾರರಿಗೆ ಠೇವಣಿ ಮರಳಿಸಲು ಆರ್‌ಬಿಐ ಹಲವಾರು ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಭಾಗವತ್ ಕರಾಡ್ ಅವರು, ಸಂಸತ್‌ನ ಮೇಲ್ಮನೆಗೆ ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಪ್ರಧಾನಮಂತ್ರಿ ಉದ್ಯೋಗ ಸೃಜನ ಯೋಜನೆಯ ಅನುಷ್ಠಾನದ ಹೊಣೆ ಹೊತ್ತಿರುವ (ಪಿಎಂಇಜಿಪಿ) ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳಲ್ಲಿ ವಸೂಲಾಗದ ಸಾಲದ (ಎನ್‌ಪಿಎ) ಮೊತ್ತ 5.71 ಲಕ್ಷ ಕೋಟಿ (2023ರ ಮಾರ್ಚ್ 31ರ ವೇಳೆಗೆ) ಇದೆ. ಎನ್‌ಪಿಎ ಅನುಪಾತ ಶೇ 3.87ರಷ್ಟು ಆಗಿದೆ. ಇದು ಹಿಂದಿನ ವರ್ಷಗಳಿಗೆ ಹೋಲಿಸಿದರೆ ನಿರಂತರವಾಗಿ ಇಳಿಕೆಯಾಗಿದೆ ಎಂದು ಆರ್‌ಬಿಐ ಅಂಕಿ–ಅಂಶ ಉಲ್ಲೇಖಿಸಿ ಸಚಿವರು ಮಾಹಿತಿ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದುಬೈನಲ್ಲಿ ನಡೆದ ಐಪಿಎಲ್-2024 ಹರಾಜು ಪ್ರಕ್ರಿಯೆ

ದಾಖಲೆಯ 24.75 ಕೋಟಿಗೆ ಮಾರಾಟವಾದ ಮಿಚೆಲ್ ಸ್ಟಾರ್ಕ್





ದುಬೈ, ಡಿ.19– ದುಬೈನ ಕೋಕಾ ಕೋಲಾ ಅರೆನಾದಲ್ಲಿ ನಡೆದ 2024ರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಐಪಿಎಲ್ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಮಿಚೆಲ್ ಸ್ಟಾರ್ಕ್ ದಾಖಲೆಯ 24.75 ಕೋಟಿ ರೂ.ಗಳಿಗೆ ಮಾರಾಟವಾಗಿದ್ದಾರೆ.

ಮುಂಬರುವ ಐಪಿಎಲ್ ಪಂದ್ಯಾವಳಿಗೆ 1166 ಆಟಗಾರರು ನೋಂದಾಯಿಸಿಕೊಂಡಿದ್ದರು. ಈ ಪೈಕಿ ಹರಾಜಿಗೆ ಭಾರತದ 214 ಹಾಗೂ ವಿದೇಶದ 119 ಆಟಗಾರರು ಸೇರಿದಂತೆ 333 ಆಟಗಾರರನ್ನು ಅಂತಿಮಗೊಳಿಸಲಾಗಿತ್ತು. ಈ ಆಟಗಾರರಲ್ಲಿ 10 ಫ್ರಾಂಚೈಸಿಗಳು 33 ವಿದೇಶಿ ಆಟಗಾರರು ಸೇರಿದಂತೆ 77 ಆಟಗಾರರನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿತ್ತು.

ಐಪಿಎಲ್ ಆಟಗಾರರ ಹರಾಜು ಆರಂಭವಾಗುತ್ತಿದ್ದಂತೆಯೇ ತೀವ್ರ ಪೈಪೋಟಿಯಿಂದ ಕೂಡಿದ್ದ ಬಿಡ್‌ನಲ್ಲಿ ವೆಸ್ಟ್ ಇಂಡೀಸ್‌ನ ರೋಮನ್ ಪಾವೆಲ್ ಅವರನ್ನು 7.4 ಕೋಟಿ ರೂ.ಗಳಿಗೆ ರಾಜಸ್ಥಾನ ರಾಯಲ್ಸ್ ತಂಡ ಖರೀದಿಸಿತು. ನಂತರ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ 4 ಕೋಟಿ ರೂ.ಗೆ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮಾರಾಟವಾದರು. ವಿಶ್ವಕಪ್ ಫೈನಲ್‌ನಲ್ಲಿ ಶತಕ ಸಿಡಿಸಿ ಮಿಂಚಿದ್ದ ಆಸೀಸ್ ಆಟಗಾರ ಟ್ರಾವಿಸ್ ಹೆಡ್ 6.8 ಕೋಟಿ ರೂ.ಗೆ ಸನ್‌ರೈಸರ್ಸ್ ಪಾಲಾದರು. ಹರಾಜಿನಲ್ಲಿ ಭಾರಿ ಮೊತ್ತಕ್ಕೆ ಸೇಲ್ ಆಗಬಹುದೆಂದು ನಿರೀಕ್ಷಿಸಲಾಗಿದ್ದ ನ್ಯೂಜಿಲೆಂಡ್ ಕ್ರಿಕೆಟಿಗ ರಚಿನ್ ರವೀಂದ್ರ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ 1.80 ಕೋಟಿ ರೂ.ಗೆ ಖರೀದಿಸಿತು. ಈ ವೇಳೆ ಆರ್‌ಸಿಬಿ ತಂಡ ರಚಿನ್ ಖರೀದಿಗೆ ಮುಂದಾಗದಿರುವುದು ಅಚ್ಚರಿ ಮೂಡಿಸಿತು.

ಬಳಿಕ ಸೀಮ್ ಬೌಲಿಂಗ್ ಜೊತೆಗೆ ಕೆಳ ಮಧ್ಯಮ ಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟ್ ಮಾಡುವ ಸಾಮರ್ಥ್ಯ ಹೊಂದಿರುವ ಪ್ಯಾಟ್ ಕಮಿನ್ಸ್ ಅವರನ್ನು ಖರೀದಿಸಲು ಚೆನ್ನೈ ಸೂಪರ್ ಕಿಂಗ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವೆ ಬಿಡ್ ವಾರ್ ನಡೆದಿತ್ತು. ಆದರೆ ಕೊನೆ ಹಂತದಲ್ಲಿ ಹೈದರಾಬಾದ್ 20.50 ಕೋಟಿ ರೂ.ಗೆ ಬಿಡ್ ಮಾಡಿ ಪ್ಯಾಟ್ ಕಮ್ಮಿನ್ಸ್ ಅವರನ್ನು ಖರೀದಿಸಿತು.

ಹರಾಜಿನಲ್ಲಿ ಸ್ಟಾರ್ಕ್ ಅವರ ಮೂಲ ಬೆಲೆ 2 ಕೋಟಿ ರೂ.ಗಳಾಗಿತ್ತು. ಸ್ಟಾರ್ಕ್ ಅವರನ್ನ ಖರೀದಿಸಲು ಗುಜರಾತ್ ಟೈಟಾನ್ಸ್ ಹಾಗೂ ಕೋಲ್ಕತ್ತಾ ನೈಟ್ ರೈಡರ್ಸ್ ನಡುವೆ ಹಣಾಹಣಿ ನಡೆದಿತ್ತು. ಆದರೆ ಪಟ್ಟು ಬಿಡದ ಕೆಕೆಆರ್ 24.75 ಕೋಟಿ ರೂ.ಗೆ ಸ್ಟಾರ್ಕ್ ಅವರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಯಿತು.

ಉಳಿದಂತೆ ವನಿಂದು ಹಸರಂಗ 1.5 ಕೋಟಿ ರೂ.ಗೆ ಸನ್ ರೈಸರ್ಸ್ ಹೈದರಾಬಾದ್ ತಂಡ ಪಾಲಾಗಿದ್ದಾರೆ. ಭಾರತದ ಶಾರ್ದೂಲ್ ಠಾಕೂರ್ 4 ಕೋಟಿ ರೂ.ಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ಸೇರಿದರು. ಅಫ್ಘಾನಿಸ್ತಾನದ ಅಜ್ಮತುಲ್ಲಾ ಒಮರ್ಜೈ 50 ಲಕ್ಷ ರೂ.ಗೆ ಗುಜರಾತ್ ಟೈಟನ್ಸ್, ದಕ್ಷಿಣ ಆಫ್ರಿಕಾದ ಜೆರಾಲ್ಡ್ ಕೊಯೆಟ್ಜಿ 5 ಕೋಟಿ ರೂ.ಗೆ ಮುಂಬೈ ಇಂಡಿಯನ್ಸ್, ಭಾರತದ ಹರ್ಷಲ್ ಪಟೇಲ್ 11.75 ಕೋಟಿ ರೂ.ಗೆ ಪಂಜಾಬ್ ಕಿಂಗ್ಸ್, ನ್ಯೂಜಿಲೆಂಡ್‌ನ ಡೆರಿಲ್ ಮಿಚೆಲ್ 14 ಕೋಟಿ ರೂ.ಗೆ ಚೆನ್ನೈ ಸೂಪರ್ ಕಿಂಗ್ಸ್, ಇಂಗ್ಲೆಂಡ್ ಸ್ಟಾರ್ ಬ್ಯಾಟರ್ ಕ್ರಿಸ್ ವೋಕ್ಸ್ 4.2 ಕೋಟಿ ರೂ.ಗೆ ಪಂಜಾಬ್ ಕಿಂಗ್ಸ್, ದಕ್ಷಿಣ ಆಫ್ರಿಕಾದ ಟ್ರಿಸ್ಟನ್ ಸ್ಟಬ್ಸ್ 50 ಲಕ್ಷಕ್ಕೆ ಡೆಲ್ಲಿ, ಭಾರತದ ಚೇತನ್ ಸಕಾರಿಯಾ 50ಲಕ್ಷಕ್ಕೆ ಕೆಕೆಆರ್, ಕೆ.ಎಸ್.ಭರತ್ 50 ಲಕ್ಷಕ್ಕೆ ಕೆಕೆಆರ್, ವೆಸ್ಟ್ ಇಂಡೀಸ್‌ನ ಅಲ್ಜಾರಿ ಜೋಸೆಫ್ 11.5 ಕೋಟಿಗೆ ಆರ್‌ಸಿಬಿ, ಉಮೇಶ್ ಯಾದವ್ 5.8ಕೋಟಿಗೆ ಗುಜರಾತ್ ಟೈಟನ್ಸ್, ಶಿವಂ ಮಾವಿ 6.4 ಕೋಟಿಗೆ ಲಖನೌ ಸೂಪರ್ ಜೈಂಟ್ಸ್, ಜಯದೇವ್ ಉನಾದ್ಕಟ್ 1.6 ಕೋಟಿಗೆ ಎಸ್‌ಆರ್‌ಹೆಚ್, ದಿಲ್ಶನ್ ಮಧುಶಂಕ 4.6 ಕೋಟಿಗೆ ಮುಂಬೈ, ಶಿವಂ ದುಬೆ 5.8 ಕೋಟಿಗೆ ರಾಜಸ್ಥಾನ, ಅಂಗಕ್ರಿಶ್ ರಘುವಂಶಿ 20 ಲಕ್ಷಕ್ಕೆ ಕೆಕೆಆರ್, ಅರ್ಶಿನ್ ಕುಲಕರ್ಣಿ 20 ಲಕ್ಷಕ್ಕೆ ಲಖನೌ, ರಿಸಿಖ್ ದರ್ 20ಲಕ್ಷಕ್ಕೆ ಡೆಲ್ಲಿ, ಕಾರ್ತಿಕ್ ತ್ಯಾಗಿ 60 ಲಕ್ಷಕ್ಕೆ ಗುಜರಾತ್, ಶ್ರೇಯಸ್ ಗೋಪಾಲ್ 20 ಲಕ್ಷಕ್ಕೆ ಮುಂಬೈ, ಎಂ.ಸಿದ್ಧಾರ್ಥ 2.4ಕೋಟಿಗೆ ಲಖನೌ, ಮಾನವ್ ಸುತಾರ್ 20ಲಕ್ಷಕ್ಕೆ ಗುಜರಾತ್, ಆಕಾಶ್ ಸಿಂಗ್ 20 ಲಕ್ಷಕ್ಕೆ ಎಸ್‌ಆರ್‌ಹೆಚ್, ಸಮೀರ್ ರಿಜ್ವಿ 8.4 ಕೋಟಿಗೆ ಸಿಎಸ್‌ಕೆ, ಶಾರುಖ್ ಖಾನ್ 7 ಕೋಟಿಗೆ ಗುಜರಾತ್, ರಮಣ್‌ದೀಪ್ ಸಿಂಗ್ 20 ಲಕ್ಷಕ್ಕೆ ಕೆಕೆಆರ್, ಟಾಮ್ ಕ್ಲಾಹರ್ 20 ಲಕ್ಷಕ್ಕೆ ರಾಜಸ್ಥಾನ್, ರಿಕಿ ಭಾಯಿ 20 ಲಕ್ಷಕ್ಕೆ ಡೆಲ್ಲಿ, ಕುಮಾರ್ ಕುಶಾಗ್ರ 7.2 ಕೋಟಿಗೆ ಡೆಲ್ಲಿ, ಯಶ್ ದಯಾಳ್ 5 ಕೋಟಿಗೆ ಆರ್‌ಸಿಬಿ, ಸುಶಾಂತ್ ಮಿಶ್ರಾ 2.2ಕೋಟಿಗೆ ಗುಜರಾತ್, ಟಾಮ್ ಕರೆನ್ 1.5 ಕೋಟಿಗೆ ಆರ್‌ಸಿಬಿ, ಡೇವಿಡ್ ವಿಲ್ಲಿ 2 ಕೋಟಿಗೆ ಲಖನೌ, ಸ್ಪೆನ್ಸರ್ ಜಾನ್ಸನ್ 10 ಕೋಟಿಗೆ ಗುಜರಾತ್, ಜೇ ರಿಚರ್ಡ್ಸನ್ 5 ಕೋಟಿಗೆ ಡೆಲ್ಲಿ, ರಿಲೀ ರೊಸ್ಸೋ 8 ಕೋಟಿಗೆ ಪಂಜಾಬ್ ಕಿಂಗ್ಸ್ ಪಾಲಾಗಿದ್ದಾರೆ.

ಹರಾಜಿನಲ್ಲಿ ಆರ್‌ಸಿಬಿ 6 ಆಟಗಾರರ ಖರೀದಿ



ದುಬೈ: ಮುಂಬರುವ ಐಪಿಎಲ್‌ಗಾಗಿ ದುಬೈನಲ್ಲಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ತಲಾ ಮೂವರು ಭಾರತ ಹಾಗೂ ವಿದೇಶಿ ಆಟಗಾರರನ್ನು ಖರೀದಿಸಿದೆ. ಈ ವರ್ಷ ನಡೆದ ಐಪಿಎಲ್ ಟೂರ್ನಿಯಲ್ಲಿ ಒಂದೇ ಓವರ್‌ನಲ್ಲಿ ಐದು ಸಿಕ್ಸ್ ಚಚ್ಚಿಸಿಕೊಂಡಿದ್ದ ವೇಗದ ಬೌಲರ್ ಯಶ್ ದಯಾಳ್(5 ಕೋಟಿ) ಅವರನ್ನೂ ಆರ್‌ಸಿಬಿ ಖರೀದಿಸಿದೆ. ಉಳಿದಂತೆ ವೆಸ್ಟ್‌ಇಂಡೀಸ್‌ನ ವೇಗದ ಬೌಲರ್ ಅಲ್ಜಾರಿ ಜೋಸೆಫ್ (11.50 ಕೋಟಿ), ನ್ಯೂಜಿಲೆಂಡ್‌ನ ವೇಗಿ ಲಾಕಿ ಫರ್ಗ್ಯೂಸನ್ (2 ಕೋಟಿ), ಇಂಗ್ಲೆಂಡ್ ಆಲ್‌ರೌಂಡರ್ ಟಾಮ್ ಕರನ್ (1.50 ಕೋಟಿ), ಭಾರತದ ಬ್ಯಾಟರ್ ಸೌರವ್ ಚೌಹಾಣ್ (20 ಲಕ್ಷ) ಮತ್ತು ಆಲ್‌ರೌಂಡರ್ ಸ್ವಪ್ನಿಲ್ ಸಿಂಗ್ (20 ಲಕ್ಷ) ಅವರನ್ನು ಖರೀದಿಸಿದೆ.

ಪ್ರಸಿದ್ಧ ವಾದ್ಯಗೋಷ್ಠಿ ಗಾಯಕ ಸಿದ್ಧಾರ್ಥರ ನಿಧನಕ್ಕೆ ಶ್ರೀನಿವಾಸ ಪ್ರಸಾದರ ಸಂತಾಪ



ಎಸ್.ಸಿದ್ಧಾರ್ಥ

ಮೈಸೂರು, ಡಿ.19– ಪ್ರಸಿದ್ಧ ವಾದ್ಯ ಗೋಷ್ಠಿ ಗಾಯಕ ಎಸ್.ಸಿದ್ಧಾರ್ಥ ಅವರ ನಿಧನಕ್ಕೆ ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಸಂತಾಪ ಸೂಚಿಸಿದ್ದಾರೆ.

ಮೈಸೂರಿನ ಸುಪ್ರಸಿದ್ಧ ವಾದ್ಯಗೋಷ್ಠಿ ಗಾಯಕರಾಗಿದ್ದ ಎಸ್.ಸಿದ್ಧಾರ್ಥ ಅವರು 85ನೇ ವಯಸ್ಸಿನಲ್ಲಿ ಅಗಲಿದ ಸುದ್ದಿ ಕೇಳಿ ನನ್ನ ಮನಸ್ಸಿಗೆ ಅತೀವ ದುಃಖವಾಯಿತು. ದಿವಂಗತರು ಅಶೋಕಪುರಂ ಮಾಜಿ ಪುರಸಭಾ ಅಧ್ಯಕ್ಷರಾಗಿದ್ದ ಕೆ.ಸಿದ್ಧಯ್ಯ ಅವರ ಪುತ್ರ. ನಾನೂ ಕೂಡ ಅಶೋಕಪುರಂನ ನಿವಾಸಿಯಾಗಿದ್ದು, ಸಂಗೀತ ಪ್ರೇಮಿಯಾಗಿ ಅವರು ಅಭ್ಯಾಸ ಮಾಡುವುದನ್ನು ನೋಡಿದ್ದೆ. ಅವರು ಹಾರ್ಮೋನಿಯಂ ಹಾಗೂ ಗಿಟಾರ್ ನುಡಿಸುವುದರಲ್ಲೂ ಪರಿಣತರಾಗಿದ್ದರು.

ವೀರೇಂದ್ರ ಪಾಟೀಲ್ ಅವರು ಮುಖ್ಯಮಂತ್ರಿಯಾಗಿದ್ದಾಗ 1968ರಲ್ಲಿ ಅಶೋಕಪುರಂಗೆ ಬಂದಿದ್ದಾಗ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿದ್ಧಾರ್ಥ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ತಾವೇ ಸ್ವತಃ ರಚಿಸಿದ್ದ 'ಧನ್ಯ ಧನ್ಯ ಭರತ ಭೀಮ ನಿಮ್ಮ ಬಂಧು ನಾಯಕ' ಗೀತೆಗೆ ಅವರೇ ಸಂಗೀತ ಸಂಯೋಜನೆ ಮಾಡಿ, ಹಾಡುವ ಮೂಲಕ ಅಪಾರ ಜನಮೆಚ್ಚುಗೆ ಗಳಿಸಿದ್ದು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ.

ಮೈಸೂರು ಮ್ಯೂಸಿಕ್ ಪಾರ್ಟಿಯ ದಿವಂಗತ ಗುರುರಾಜರಾವ್ ತಂಡದಲ್ಲಿ ಎಸ್.ಸಿದ್ಧಾರ್ಥ ಹಾಡುಗಾರರಾಗಿದ್ದರು. ಆನಂತರ ಅವರೇ ಸ್ವತಃ ಸಿದ್ಧಾರ್ಥ ವಾದ್ಯಗೋಷ್ಠಿ ಆರಂಭಿಸಿ, ನೂರಾರು ಕಾರ್ಯಕ್ರಮ ನಡೆಸಿಕೊಟ್ಟಿದ್ದರು. ಮನೋಜ್ಞ ಹಾಡುಗಾರಿಕೆಯಿಂದ ಅವರು ಅಪಾರ ಜನಮನ್ನಣೆ ಪಡೆದಿದ್ದರು ಎಂದು ನೆನೆದಿರುವ ಶ್ರೀನಿವಾಸ ಪ್ರಸಾದ್ ಅವರು, ಸಿದ್ಧಾರ್ಥರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ಬರಲೆಂದು ಪ್ರಾರ್ಥಿಸಿದ್ದಾರೆ.

ಸಿಂಡೆನಹಳ್ಳಿಯಲ್ಲಿ ಹುಲಿಗಳ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಆತಂಕ

ಹುಣಸೂರು, ಡಿ.19– ತಾಲೂಕಿನ ಹನಗೂಡು ಹೋಬಳಿ ಸಿಂಡೆನಹಳ್ಳಿ ಗ್ರಾಮದಲ್ಲಿ ಎರಡು ಹುಲಿಗಳು ಕಾಣಿಸಿಕೊಂಡಿದ್ದು, ಗ್ರಾಮಸ್ಥರಲ್ಲಿ ಆತಂಕವನ್ನುಂಟು ಮಾಡಿದೆ.

ರೈತರು ಪ್ರತಿ ದಿನ ರಾತ್ರಿ ವೇಳೆ ದನ ಕರುಗಳನ್ನು ಹೊರಗಡೆ ಕಟ್ಟಿಹಾಕುತ್ತಾರೆ. ರಾತ್ರಿ ವೇಳೆಯಲ್ಲಿ ಕಾಣಿಸಿಕೊಳ್ಳುತ್ತಿರುವ ಹುಲಿಗಳು ಜಾನುವಾರುಗಳ ಮೇಲೆ ದಾಳಿ ಮಾಡಿದರೆ ನಮ್ಮ ಪರಿಸ್ಥಿತಿ ಏನಾಗಬಹುದು. ಜಾನುವಾರುಗಳನ್ನು ನಂಬಿಕೊಂಡು ಜೀವನ ಸಾಗಿಸುತ್ತಿರುವ ನಮ್ಮ ಪಾಡೇನು ಎಂದು ಪ್ರಶ್ನಿಸಿದ್ದಾರೆ. ಅರಣ್ಯ ಇಲಾಖೆಯವರು ಇತ್ತ ಗಮನ ಹರಿಸಿ ಹುಲಿಗಳನ್ನು ಸೆರೆಹಿಡಿಯುವಂತೆ ಗ್ರಾಮಸ್ಥರು ಕೋರಿದ್ದಾರೆ.

ಜನರ ದೂರಿನಿಂದ ಎಚ್ಚೆತ್ತ ಅರಣ್ಯ ಇಲಾಖೆಯ ಅಧಿಕಾರಿಗಳು ಹುಲಿಗಳು ಕಾಣಿಸಿಕೊಂಡ ಸ್ಥಳಗಳಲ್ಲಿ ರಂಗ ಮತ್ತು ಗಣೇಶ ಎಂಬ ಎರಡು ಆನೆಗಳ ಸಹಾಯದಿಂದ ಕೂಂಬಿಂಗ್ ಕಾರ್ಯಚರಣೆ ನಡೆಸಿದ್ದಾರೆ. ವನ್ಯಜೀವಿ ಸಂರಕ್ಷಣಾ ನಿರ್ದೇಶಕ ಹರ್ಷಕುಮಾರ್ ಮಾತನಾಡಿ, ಕಾಡಂಚಿನ ಪ್ರದೇಶಗಳಲ್ಲಿ ಹುಲಿ ಮತ್ತಿತರೆ ಕಾಡುಮೃಗಗಳು ಆಗಿಂದಾಗ್ಗೆ ಉಪಟಳ ನೀಡುತ್ತಿದ್ದು ಅವುಗಳ ತಡೆಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದರು.

ಬೆಳಗಾವಿ ಸಂತ್ರಸ್ತ ಮಹಿಳೆಗೆ 2 ಎಕರೆ ಭೂಮಿ; 5 ಲಕ್ಷ ರೂ. ಪರಿಹಾರ ವಿತರಿಸಿದ ಸತೀಶ್ ಜಾರಕಿಹೊಳಿ



ಬೆಳಗಾವಿ, ಡಿ.19– ಬೆಳಗಾವಿ ಜಿಲ್ಲೆಯ ವಂಟಮೂರಿ ಗ್ರಾಮದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ ನಡೆಸಿದ್ದ ಪ್ರಕರಣದ ಸಂತ್ರಸ್ತ ಮಹಿಳೆಗೆ ರಾಜ್ಯ ಸರ್ಕಾರ ಮಂಗಳವಾರ ಎರಡು ಎಕರೆ ಭೂಮಿ ಹಾಗೂ ಐದು ಲಕ್ಷ ರೂಪಾಯಿ ಪರಿಹಾರದ ಚೆಕ್ ನೀಡಿದೆ.

ಇಂದು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಮುಖ್ಯಮಂತ್ರಿಗಳ ನಿಧಿಯಿಂದ 5 ಲಕ್ಷ ರೂ. ಪರಿಹಾರದ ಚೆಕ್ ವಿತರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸತೀಶ್ ಜಾರಕಿಹೊಳಿ ಅವರು, ಐದು ಲಕ್ಷ ರೂಪಾಯಿ ಜೊತೆಗೆ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಸಂತ್ರಸ್ತ ಮಹಿಳೆಗೆ 2 ಎಕರೆ ಜಮೀನು ಮಂಜೂರು ಮಾಡಲಾಗಿದೆ ಎಂದು ಹೇಳಿದರು.



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ, ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಮೈಸೂರಿನ ಪುರಭವನದ ಮುಂದೆ ಮಂಗಳವಾರವೂ ಧರಣಿ ಮುಂದುವರೆಯಿತು. ಈ ವೇಳೆ ಸಮಿತಿ ಅಧ್ಯಕ್ಷ ಜಯಪ್ರಕಾಶ್,ಉಪಾಧ್ಯಕ್ಷ ಸುರೇಶ್‌ಗೌಡ, ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಶೈಲಕುಮಾರ್, ಶುಭಶ್ರೀ, ಮೆಲ್ಲಹಳ್ಳಿ ಮಹದೇವಸ್ವಾಮಿ, ಮಂಜುಳಾ, ಪುಷ್ಪವತಿ, ಮಹದೇವ ಸ್ವಾಮಿ, ಆಟೋ ಮಹದೇವು, ಮಹೇಶ್‌ಗೌಡ, ಶ್ರೀನಿವಾಸ್, ವಿವಿಧ ಕನ್ನಡ ಪರ ಸಂಘಟನೆ ಹೋರಾಟಗಾರರು ಮತ್ತು ರೈತ ಮುಖಂಡರು ಪಾಲ್ಗೊಂಡಿದ್ದರು.

ಬನ್ನೂರು ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ

ಬಂದೋಬಸ್ತ್ ಕಲ್ಪಿಸಲು ಪೊಲೀಸರ ನಿರಾಕರಣೆಗೆ ಆಕ್ಷೇಪ



ಅಶ್ವಿನ್ ಕುಮಾರ್



ಕೃಷ್ಣೇಗೌಡ

ಮೈಸೂರು, ಡಿ.19–ಡಿಸೆಂಬರ್ 24ರಂದು ನಡೆಯಲಿರುವ ಬನ್ನೂರು ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಗೆ ಸೂಕ್ತ ಬಂದೋಬಸ್ತ್ ಒದಗಿಸಲು ಸಾಧ್ಯವಿಲ್ಲ ಎಂದು ಬನ್ನೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಹೇಳಿರುವುದಕ್ಕೆ ಟಿ.ನರಸೀಪುರ ಮಾಜಿ ಶಾಸಕ ಅಶ್ವಿನ್ ಕುಮಾರ್ ಹಾಗೂ ಚುನಾವಣೆಗೆ ಸ್ಪರ್ಧಿಸಿರುವ ಬಿ.ಎನ್.ಕೃಷ್ಣೇಗೌಡ ಸೇರಿದಂತೆ ಇತರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಚುನಾವಣಾ ಆಯೋಗ ದಿನಾಂಕ ನಿರ್ಧರಿಸಿ ಚುನಾವಣಾ ಪ್ರಕ್ರಿಯೆಗೆ ಅನುವು ಮಾಡಿಕೊಟ್ಟಿರುವಾಗ ಹನುಮ ಜಯಂತಿ ಇದೇ ಎಂಬ ಕಾರಣಕ್ಕೆ ಬಂದೋಬಸ್ತ್ ಕಲ್ಪಿಸಲು ಸಾಧ್ಯವಿಲ್ಲ. ಮತ್ತೊಂದು ದಿನಾಂಕವನ್ನು ನಿಗದಿಪಡಿಸಿ ಮುಂಚಿತವಾಗಿ ಕೋರಿದ್ದಲ್ಲಿ ಅಗತ್ಯ ಬಂದೋಬಸ್ತ್ ಕಲ್ಪಿಸುವುದಾಗಿ ಹೇಳುತ್ತಿರುವ ಪೊಲೀಸರು, ಚುನಾವಣಾ ಆಯೋಗಕ್ಕಿಂತ ನಾವೇ ಸುಪ್ರೀಂ ಎಂಬ ಧೋರಣೆ ಹೊಂದಿರುವವರಂತೆ ಕಂಡುಬರುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈಗಾಗಲೇ ಚುನಾವಣೆಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ. ಹಾಗಿದ್ದರೆ ನಾವು ಪೊಲೀಸ್ ಇಲಾಖೆಯನ್ನು ಕೇಳಿ ಚುನಾವಣಾ ಪ್ರಕ್ರಿಯೆ ಆರಂಭಿಸಬೇಕಿತ್ತೇ? ಎಂದು ಪ್ರಶ್ನಿಸಿರುವ ಇವರು, ಯಾವ ಪ್ರಭಾವಕ್ಕೆ ಒಳಗಾಗಿ ಪೊಲೀಸರು ಈ ರೀತಿ ವರ್ತಿಸುತ್ತಿದ್ದಾರೋ ನಮಗೆ ತಿಳಿಯುತ್ತಿಲ್ಲ ಎಂದು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಎಸ್‌ಪಿ ಅವರ ಗಮನಕ್ಕೆ ತಂದರೂ ಅವರೂ ತಮ್ಮ ಅಧೀನ ಅಧಿಕಾರಿಗಳ ಮಾತಿಗೆ ಮನ್ನಣೆ ನೀಡುತ್ತಿದ್ದಾರೆ. ಯಾವುದೋ ಒಂದು ಕಾರಣವನ್ನು ನೀಡಿ ಚುನಾವಣೆ ಎಂಬ ಮಹತ್ವದ ಪ್ರಕ್ರಿಯೆಗೆ ಬಂದೋಬಸ್ತ್ ಕಲ್ಪಿಸುವುದು ಸಾಧ್ಯವಿಲ್ಲ ಎಂದು ಹೇಳುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿರುವ ಇವರು, ಈ ವಿಷಯದಲ್ಲಿ ಡಿಐಜಿಪಿ ಮಧ್ಯೆ ಪ್ರವೇಶ ಮಾಡಬೇಕು. ಸೂಕ್ತ ಬಂದೋಬಸ್ತ್ ಕಲ್ಪಿಸುವ ಮೂಲಕ ಚುನಾವಣೆ ಪ್ರಕ್ರಿಯೆ ಸುಸೂತ್ರವಾಗಿ ನಡೆಯಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ.

ಸೊಳ್ಳೆಪುರ ಏಕಲವ್ಯ ಮಾದರಿ ಶಾಲೆಯಲ್ಲಿ ಅಕ್ರಮ

ಸಾಮಾಜಿಕ ಹೋರಾಟಗಾರ ಬೂದನೂರು ವೆಂಕಟೇಶ್ ಆರೋಪ



ಹೆಚ್.ಡಿ.ಕೋಟೆ, ಡಿ.19– ತಾಲೂಕಿನ ಸೊಳ್ಳೆಪುರ ಗ್ರಾಮದಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಹಲವಾರು ಅಕ್ರಮಗಳು ನಡೆಯುತ್ತಿದ್ದು, ದಲಿತ ಅಧಿಕಾರಿಯೊಬ್ಬರ ತೇಜೋವಧೆ ಮಾಡಲು ಯತ್ನಿಸಲಾಗುತ್ತಿದೆ ಎಂದು ಸಾಮಾಜಿಕ ಹೋರಾಟಗಾರ ಬೂದನೂರು ವೆಂಕಟೇಶ್ ಆರೋಪಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರ ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ, ಉತ್ತಮ ಶಿಕ್ಷಣ ಸಿಗುವುದರ ಜೊತೆಗೆ, ಬಡ ಕುಟುಂಬದ ಮಕ್ಕಳಿಗೆ ಆಶ್ರಯವಾಗುವ ನಿಟ್ಟಿನಲ್ಲಿ ಇಂಥ ಒಂದು ಉತ್ತಮ ಆಶ್ರಮ ಶಾಲೆಗಳನ್ನು ತೆರೆದಿದೆ. ಇಂಥ ಒಂದು ಶಾಲೆಯಲ್ಲಿ ಕೆಲವು ಶಿಕ್ಷಕರುಗಳು ಉತ್ತಮ ಪಾಠ ಪ್ರವಚನಗಳನ್ನು ಮಾಡುವುದನ್ನು ಬಿಟ್ಟು ಸರ್ವಾಧಿಕಾರ ನಡೆಸುವ ನಿಟ್ಟಿನಲ್ಲಿ ಈ ಆಶ್ರಮ ಶಾಲೆಯಲ್ಲಿ ನಮ್ಮದೇ ಅಧಿಕಾರ ನಡೆಸಬೇಕು, ಬೇರೆ ಯಾರೂ ಈ ಶಾಲೆಯ ಮುಖ್ಯಸ್ಥರಾಗಿ ಬರಬಾರದು ಎಂದು ಕೆಲವು ಶಿಕ್ಷಕರುಗಳು ಇಲ್ಲಸಲ್ಲದ ವಿಷಯಗಳನ್ನು ಮಕ್ಕಳ ತಲೆಗೆ ತುಂಬಿಸಿ ಮಕ್ಕಳನ್ನ ಆಶ್ರಮ ಶಾಲೆಯಿಂದ ಹೊರತಂದು ಪ್ರತಿಭಟನೆ ಮಾಡಿಸುತ್ತಿದ್ದಾರೆ ಎಂದು ಆರೋಪಿಸಿದರು.

ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ನ.26ರಂದು ನಡೆಯಬೇಕಿದ್ದ ಅಂಬೇಡ್ಕರ್ ಪರಿನಿಬ್ಬಾಣ ದಿನ ಆಚರಿಸದೆ ನ.27ರಂದು ಹಲವರ ಒತ್ತಾಯದ ಮೇರೆಗೆ ಆಚರಿಸಲಾಗಿದೆ. ಅಲ್ಲದೆ ಶಾಲೆಯ ಆವರಣದೊಳಗಿರುವ ಕೆರೆಯಲ್ಲಿದ್ದ ಸರಿಸುಮಾರು ನಲವತ್ತಕ್ಕೂ ಹೆಚ್ಚು ಟ್ರ್ಯಾಕ್ಟರ್ ಕಲ್ಲುಗಳನ್ನು ಅಕ್ರಮವಾಗಿ ಬೇರಡೆ ಸಾಗಿಸಲಾಗಿದೆ. ಇವೆಲ್ಲವೂ ಕೂಡ ಪರಿಶೀಲನೆ ಆಗಬೇಕು ಎಂದರು.

2021–22ನೇ ಸಾಲಿನಲ್ಲಿ ಏಕಲವ್ಯ ವಸತಿ ಶಾಲೆಯ ಪ್ರಾಂಶುಪಾಲರಾಗಿದ್ದ ದಲಿತ ಅಧಿಕಾರಿ ರಂಗನಾಥ ಅವರನ್ನು ಪದೇ ಪದೆ ಭ್ರಷ್ಟ ಅಧಿಕಾರಿ ಎಂದು ಹೇಳುವ ಮೂಲಕ ಅವರ ತೇಜೋವಧೆ ಮಾಡಲಾಗುತ್ತಿದೆ. ಇಂಥ ಶಿಕ್ಷಕರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆಯ ಪ್ರಧಾನ ಕಾರ್ಯದರ್ಶಿ ಶಿವಯ್ಯ, ಎಡತೊರೆ ನಾಗರಾಜು, ಬೂದನೂರು ರವೀಶ್, ಚಕ್ಕೋಡನಹಳ್ಳಿ ಶಿವಾಜಿ, ತಿಮ್ಮರಾಜು, ಶಿವರಾಜು ಹಾಜರಿದ್ದರು.

ಹಲ್ಲರೆ ಗ್ರಾಮದಲ್ಲಿ ಅಪ್ಪು ಪುಣ್ಯಸ್ಮರಣೆ



ಮಲ್ಕುಂಡಿ, ಡಿ.19– ಸಮೀಪದ ಹಲ್ಲರೆ ಗ್ರಾಮದಲ್ಲಿ ಶ್ರೀ ವಾಲ್ಮೀಕಿ ಯುವಕ ಸಂಘ ಹಾಗೂ ನಾಯಕ ಜನಾಂಗದ ವತಿಯಿಂದ ಡಾ.ಪುನೀತ್ ರಾಜಕುಮಾರ್ ಅವರ 2 ನೇ ವರ್ಷದ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು.

ಗ್ರಾಮದಲ್ಲಿ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಗ್ರಾಮದ ಪ್ರಮುಖ ಮುಖಂಡರು ಅಪ್ಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಮಂಡ್ಯ ಜಿಲ್ಲೆಯ ಶಿವಶಂಕರ್ ಅವರಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶ್ರೀ ವಾಲ್ಮೀಕಿ ಯುವಕ ಸಂಘ, ಅಪ್ಪು ಅಭಿಮಾನಿ ಬಳಗ, ಗ್ರಾಮಸ್ಥರು ಹಾಜರಿದ್ದರು.

ನವದೆಹಲಿಯಲ್ಲಿ INDIA ಮೈತ್ರಿಕೂಟದ ನಾಲ್ಕನೇ ಸಭೆ

ಖರ್ಗೆ ಪ್ರಧಾನಿ ಅಭ್ಯರ್ಥಿಯಾಗಲಿ: ಮಮತಾ ಪ್ರಸ್ತಾಪ



ನವದೆಹಲಿ, ಡಿ.19– ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರತಿಪಕ್ಷಗಳ ಮೈತ್ರಿಕೂಟ ಇಂಡಿಯಾದ ಪ್ರಧಾನಿ ಅಭ್ಯರ್ಥಿಯಾಗಲಿ ಎಂದು ಪಶ್ಚಿಮಬಂಗಾಳ ಮುಖ್ಯಮಂತ್ರಿ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಮಂಗಳವಾರ ಹೇಳಿದ್ದಾರೆ.

ಇಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆದ INDIA ಮೈತ್ರಿಕೂಟದ ನಾಲ್ಕನೇ ಸಭೆಯಲ್ಲಿ ಮಮತಾ ಬ್ಯಾನರ್ಜಿ ಅವರು ಖರ್ಗೆ ಪ್ರಧಾನಿ ಅಭ್ಯರ್ಥಿಯಾಗಲಿ ಎಂಬ ಪ್ರಸ್ತಾಪ ಮಾಡಿದರು. ದೆಹಲಿ ಮುಖ್ಯಮಂತ್ರಿ ಮತ್ತು ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರು ಈ ಪ್ರಸ್ತಾಪಕ್ಕೆ ಬೆಂಬಲ ನೀಡಿದರು.

ಮಮತಾ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಖರ್ಗೆ ಅವರು, ಲೋಕಸಭೆ ಚುನಾವಣೆಯಲ್ಲಿ ಗೆಲ್ಲುವುದು ಮುಖ್ಯ. ಗೆದ್ದ ನಂತರ ಪ್ರಧಾನಿ ಬಗ್ಗೆ ನಿರ್ಧಾರ ಮಾಡೋಣ ಎಂದು ಹೇಳಿರುವುದಾಗಿ ವರದಿಯಾಗಿದೆ.

ಲೋಕಸಭೆ ಚುನಾವಣೆ ಮುಗಿಯುವವರೆಗೆ ಇಂಡಿಯಾ ಮೈತ್ರಿಕೂಟ ತನ್ನ ಪ್ರಧಾನಿ ಅಭ್ಯರ್ಥಿಯನ್ನು ಘೋಷಿಸುವುದಿಲ್ಲ ಎಂದು ನಿನ್ನೆಯಷ್ಟೇ ಹೇಳಿದ್ದ ಮಮತಾ ಬ್ಯಾನರ್ಜಿ, ಇಂದು ಆ ಸ್ಥಾನಕ್ಕೆ ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಪ್ರಸ್ತಾಪಿಸುವ ಮೂಲಕ ಅಚ್ಚರಿ ಮೂಡಿಸಿದ್ದಾರೆ.

ಇನ್ನು ಇಂಡಿಯಾ ಮೈತ್ರಿಕೂಟ ಸಭೆಯ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಖರ್ಗೆ ಅವರು, ಇಂಡಿಯಾ ಪ್ರಧಾನಿ ಅಭ್ಯರ್ಥಿಯ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ನಮಗೆ ಮೊದಲು ಸಂಸದರು ಗೆಲ್ಲುವುದು ಮುಖ್ಯ. ಸಂಸದರು ಗೆದ್ದು ಬಂದ ಬಳಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಧಾನಿ ಅಭ್ಯರ್ಥಿಯನ್ನು ಹೇಗೆ ಆಯ್ಕೆ ಮಾಡಿಕೊಳ್ಳಬಹುದು ಎಂಬುದರ ಕುರಿತು ಚರ್ಚಿಸುತ್ತೇವೆ. ಮೊದಲು ಮೈತ್ರಿಕೂಟದ ಸಂಸದರು ಗೆದ್ದು ಬರಲಿ. ಆಮೇಲೆ ನೋಡೋಣ ಎಂದರು.

ಪಿಂಚಣಿದಾರರ ದಿವಸ

ಮೈಸೂರು, ಡಿ. 19– ಮೈಸೂರು ಕೇಂದ್ರ ಸರ್ಕಾರಿ ಪಿಂಚಣಿದಾರರ ಸಂಸ್ಥೆಯಿಂದ ಡಿ. 24 ರಂದು ಬೆಳಗ್ಗೆ 10 ಗಂಟೆಗೆ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಪಾಠಶಾಲೆಯಲ್ಲಿ ಪಿಂಚಣಿದಾರರ ದಿವಸ ಮತ್ತು ರಜತ ಮಹೋತ್ಸವ ಏರ್ಪಡಿಸಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಪಿ.ಎಂ. ಪರಮೇಶ್ವರಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಹಿನಕಲ್ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಶ್ರೀ ಹೆಚ್.ಡಿ.ದಾಸಪ್ಪರವರ ಮಕ್ಕಳಾದ (1) ಶ್ರೀ ಲಕ್ಷ್ಮೀಪತಿ, (2) ಶ್ರೀ ಚಂದ್ರೇಗೌಡ, (3) ಜನಾರ್ಧನ್ ಇವರುಗಳು ಈ ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ವತ್ತಿನ ಸಂಬಂಧ ಮೈಸೂರಿನ ಸನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೈಸೂರು ತಾಲ್ಲೂಕು, ಹಿನಕಲ್ ಗ್ರಾಮದ ನಿವಾಸಿಗಳಾದ ಶ್ರೀ ಗಿರೀಗೌಡ ಬಿನ್ ಲೇಟ್ ಶ್ರೀ ದೊಡ್ಡಬಸಪ್ಪ ಮತ್ತು ಇತರರ ವಿರುದ್ಧ ಘೋಷಣಾತ್ಮಕ ಹಾಗೂ ಶಾಶ್ವತ ನಿರ್ಬಂಧ ಕಾಜ್ಞೆ ಆದೇಶ ಕೋರಿ ಅಸಲು ದಾವೆ ಸಂಖ್ಯೆ 276/2020ನ್ನು ಸಲ್ಲಿಸಿದ್ದು, ಸದರಿ ದಾವೆಯು ಚಾಲ್ತಿಯಲ್ಲಿರುತ್ತದೆ. ವಾಸ್ತವಾಂಶ ಹೀಗಿದ್ದು, ಷೆಡ್ಯೂಲ್ ಸ್ವತ್ತಿನಲ್ಲಿ ನಮ್ಮ ಕಕ್ಷಿದಾರರ ತಂದೆಯವರಿಗೂ ಸಹ ಸಮನಾದ ಭಾಗಾಂಶದ ಹಕ್ಕು ಇರುವ ಸಂಗತಿಯನ್ನು ಮರೆಮಾಚಿ, ನಮ್ಮ ಕಕ್ಷಿದಾರರ ದೊಡ್ಡಪ್ಪ ದಿವಂಗತ ಗಿರೀಗೌಡರವರು ಖಾತೆ ಮಾಡಿಸಿ ಕೊಂಡಿದ್ದು, ಅವರ ಕಾಲಾನಂತರ ಅವರ ಮಗ ಶ್ರೀ ಪಾಪಣ್ಣರವರು ಅವರ ಹೆಸರಿಗೆ ಅಕ್ರಮ ವಾಗಿ ಖಾತಾ ವರ್ಗಾವಣೆ ಮಾಡಿ ಕೊಂಡು, ಸದರಿ ರೆವಿನ್ಯೂ ದಾಖಲಾತಿಗಳ ಆಧಾರದ ಮೇಲೆ ಕಾನೂನು ಬಾಹಿರವಾಗಿ ಸದರಿ ಪಾಪಣ್ಣ ಬಿನ್ ಲೇಟ್ ಗಿರೀಗೌಡರವರು ಮೂರನೇ ವ್ಯಕ್ತಿಗಳಿಗೆ ಸ್ವತ್ತನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಆದುದರಿಂದ ಯಾವುದೇ ಮೂರನೇ ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಸಂಬಂಧ ಕ್ರಯ, ವಗೈರೆ ವ್ಯವಹಾರಗಳನ್ನು ಮಾಡಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ. ಈ ತಿಳುವಳಿಕೆ ನೋಟೀಸನ್ನು ಸಾರ್ವಜನಿಕರ ತಿಳುವಳಿಕೆಗೆ ತಂದಿದ್ದು, ಒಂದು ವೇಳೆ ಷೆಡ್ಯೂಲ್ ಸ್ವತ್ತಿನ ಸಂಬಂಧ ಮುಂದುವರೆಯುವ ಯಾವುದೇ ಬಗೆಯ ವ್ಯವಹಾರಗಳು ನಮ್ಮ ಕಕ್ಷಿದಾರರ ಹಕ್ಕು ಮತ್ತು ಹಿತಾಸಕ್ತಿಯನ್ನು ಬಧ್ಧಪಡಿಸುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಸರ್ವೆ ನಂಬರ್ 238/2ರಲ್ಲಿನ ವಿಸ್ತೀರ್ಣ 0–05.08.00 ಗುಂಟೆ (ಐದೂವರೆ ಗುಂಟೆ) ಜಮೀನು. (ಎಂ.ಆರ್.ನಂಬರ್ 28/1991-92).

ಎನ್.ವಿವೇಕ್, BAL, LLB ವಕೀಲರು, ಕಛೇರಿ: ನಂ. 452, 1 ನೇ ಮಹಡಿ, ಕೊಠಡಿ ಸಂಖ್ಯೆ 5."ಶ್ರೀ ನಂಜುಂಡೇಶ್ವರ ಕಾಂಪ್ಲೆಕ್ಸ್" ಎಂ.ಜಿ. ರಸ್ತೆ, ಫೋರ್ಟ್ ಮೊಹಲ್ಲಾ,

ದಿನಾಂಕ: 18.12.2023 ಮೈಸೂರು-4

ತಿಂಗಳಲ್ಲಿ ಜಿ.ಪಂ, ತಾ.ಪಂ ಮೀಸಲು ನಿಗದಿ ಪೂರ್ಣ: ಅಡ್ವೊಕೇಟ್ ಜನರಲ್

ಬೆಂಗಳೂರು: ರಾಜ್ಯದ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲು ನಿಗದಿ ಪ್ರಕ್ರಿಯೆಯನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಕ್ಷೇತ್ರಗಳ ಗಡಿ ನಿರ್ಣಯ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗದಿಂದ ಹಿಂಪಡೆದು 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ' ರಚಿಸಲು ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದಿರುವ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ಜಿ.ಪಂ ಮತ್ತು ತಾ.ಪಂ ಕ್ಷೇತ್ರಗಳ ಗಡಿಗಳನ್ನು ನಿರ್ಧರಿಸುವ ಹಾಗೂ ಮೀಸಲಾತಿ ನಿಗದಿಪಡಿಸುವ ಪ್ರಕ್ರಿಯೆಯನ್ನು ಈಗಾಗಲೇ ಚುರುಕುಗೊಳಿಸಲಾಗಿದೆ. ಕೊಡಗು ಜಿಲ್ಲೆಯೊಂದನ್ನು ಬಿಟ್ಟು ಉಳಿದ 30 ಜಿಲ್ಲೆಗಳ ಕ್ಷೇತ್ರ ಪುನರ್‌ವಿಂಗಡಣೆ ಅಧಿಸೂಚನೆಯನ್ನು ಇಂದು ಸಂಜೆ (ಮಂಗಳವಾರ)ಪ್ರಕಟಿಸಲಾಗುತ್ತಿದ್ದು, ಮುಂದಿನ ಏಳು ದಿನಗಳಲ್ಲಿ ಕೊಡಗು ಜಿಲ್ಲೆಯ ಕ್ಷೇತ್ರ ಪುನರ್‌ವಿಂಗಡಣೆ ಅಧಿಸೂಚನೆ ಪ್ರಕಟಿಸಲಾಗುವುದು ಎಂದರು.

ಕ್ಷೇತ್ರ ಪುನರ್ ವಿಂಗಡಣೆ ಅಧಿಸೂಚನೆ ಪ್ರಕಟಿಸಿದ ನಂತರದ ಏಳು ದಿನಗಳಲ್ಲಿ ಮೀಸಲಾತಿ ಕರಡು ಅಧಿಸೂಚನೆ ಹೊರಡಿಸಲಾಗುವುದು. ಮೀಸಲಾತಿ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು 10 ದಿನಗಳ ಕಾಲಾವಕಾಶ ನೀಡಲಾಗುವುದು. ನಂತರದ ಎರಡು ವಾರಗಳಲ್ಲಿ ಸಂಬಂಧಿಸಿದ ಪ್ರಾಧಿಕಾರಗಳು ಮೀಸಲು ನಿಗದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿವೆ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಚುನಾವಣಾ ಆಯೋಗ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ, ಸರ್ಕಾರದ ಹೇಳಿಕೆಯ ಬಗ್ಗೆ ಸಂಶಯವಿದೆ ಎಂದು ಆಕ್ಷೇಪಿಸಿದರು.

ಈ ಮಾತಿಗೆ ಮಧ್ಯ ಪ್ರವೇಶಿಸಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು, ಅಡ್ವೊಕೇಟ್ ಜನರಲ್ ಒಬ್ಬ ಸಾಂವಿಧಾನಿಕ ಹುದ್ದೆಯ ಜವಾಬ್ದಾರಿ ಪ್ರತಿನಿಧಿ. ಅವರನ್ನು ನಂಬಬಾರದೇ? ಅವರ ಮೇಲೆ ಭರವಸೆ ಇಡಬೇಕಾಗುತ್ತದೆ. ಕ್ಷೇತ್ರ ಪುನರ್ ವಿಂಗಡಣೆ ಪೂರ್ಣಗೊಳಿಸುವ ಬಗೆಗಿನ ಹೇಳಿಕೆಯನ್ನು ಲಿಖಿತವಾಗಿ ಸಲ್ಲಿಸಬೇಕು. ಅಡ್ವೊಕೇಟ್ ಅವರ ಈ ಹೇಳಿಕೆಯನ್ನೇ ನ್ಯಾಯಪೀಠ ಮುಚ್ಚಳಿಕೆ ಎಂದು ಪರಿಗಣಿಸಲಿದೆ ಎಂದು ತಿಳಿಸಿದರು. ಇದಕ್ಕೆ ಶಶಿಕಿರಣ ಶೆಟ್ಟಿ ಕೂಡ ಒಪ್ಪಿಗೆ ನೀಡಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಈ ಸಂಬಂಧ ಎಜಿ ಲಿಖಿತ ಪ್ರಮಾಣಪತ್ರ ಸಲ್ಲಿಸಬೇಕು. ಅವರು ನೀಡಿರುವ ಭರವಸೆ ಕಾರ್ಯಗತಗೊಳ್ಳದೇ ಹೋದರೆ ರಾಜ್ಯ ಚುನಾವಣಾ ಆಯೋಗವು ಅಗತ್ಯ ಕ್ರಮಕ್ಕಾಗಿ ಪುನಃ ನ್ಯಾಯಾಲಯದ ಮೆಟ್ಟಿಲೇರಬಹುದು ಎಂದು ತಿಳಿಸಿ ಅರ್ಜಿ ವಿಲೇವಾರಿ ಮಾಡಿತು.

ಭಾರತ ವಿರುದ್ಧ ದ.ಆಫ್ರಿಕಾಗೆ ಭರ್ಜರಿ ಜಯ



ಗ್ಕೆಬರ್ಹಾ, ಡಿ.19– ಟೋನಿ ಡಿ ಜೋರ್ಜಿ ಅವರ ಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ, ಭಾರತದ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ 1–1 ಅಂತರದ ಸಮಬಲ ಸಾಧಿಸಿದೆ.

ಇಲ್ಲಿನ ಸೇಂಟ್ ಜಾರ್ಜ್ ಪಾರ್ಕ್‌ನಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 46.2 ಓವರ್‌ಗಳಲ್ಲಿ 211 ರನ್‌ಗಳ ಸಾಧಾರಣ ಮೊತ್ತಕ್ಕೆ ಆಲೌಟಾಯಿತು. ತಂಡದ ಪರ ಸಾಯಿ ಸುದರ್ಶನ್ 83 ಎಸೆತಗಳಲ್ಲಿ 1 ಸಿಕ್ಸರ್, 7 ಬೌಂಡರಿ ಒಳಗೊಂಡ 62 ರನ್ ಗಳಿಸಿದರೆ, ನಾಯಕ ಕೆ.ಎಲ್.ರಾಹುಲ್ 64 ಎಸೆತಗಳಲ್ಲಿ 7 ಬೌಂಡರಿ ಒಳಗೊಂಡ 56 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ತಿಲಕ್ ವರ್ಮಾ 10, ಸಂಜು ಸ್ಯಾಮ್ಸನ್ 12, ರಿಂಕು ಸಿಂಗ್ 17, ಅರ್ಶದೀಪ್ ಸಿಂಗ್ 18 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ನಾಂದ್ರೆ ಬರ್ಗರ್ 3, ಬ್ಯೂರಾನ್ ಹೆಂಡ್ರಿಕ್ಸ್, ಕೇಶವ್ ಮಹಾರಾಜ್ ತಲಾ 2, ಲಿಜಾಡ್ ವಿಲಿಯಮ್ಸ್, ಐಡೆನ್ ಮಾರ್ಕ್ರಾಮ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.

ಭಾರತ ನೀಡಿದ 212 ರನ್‌ಗಳ ಸಾಧಾರಣ ಮೊತ್ತ ಬೆನ್ನತ್ತಿದ ದಕ್ಷಿಣ ಆಫ್ರಿಕಾ 42.3 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 215 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರೀಜಾ ಹೆಂಡ್ರಿಕ್ಸ್ ಹಾಗೂ ಟೋನಿ ಡಿ ಜೋರ್ಜಿ ಮೊದಲ ವಿಕೆಟ್‌ಗೆ 130 ರನ್‌ಗಳ ಜೊತೆಯಾಟ ಆಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 81 ಎಸೆತಗಳಲ್ಲಿ 52 ರನ್ ಗಳಿಸಿದ್ದ ರೀಜಾ ಹೆಂಡ್ರಿಕ್ಸ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಭಾರತೀಯ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಟೋನಿ ಡಿ ಜೋರ್ಜಿ ಶತಕ ಸಿಡಿಸಿ ಸಂಭ್ರಮಿಸಿದರು. ಅಂತಿಮವಾಗಿ 122 ಎಸೆತಗಳಲ್ಲಿ 6 ಸಿಕ್ಸರ್, 9 ಬೌಂಡರಿ ಒಳಗೊಂಡ 119 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಉಳಿದಂತೆ ರಾಸ್ಸೀ ವ್ಯಾನ್ ಡೆರ್ ಡಸ್ಸೆನ್ 36, ಐಡೆನ್ ಮಾರ್ಕ್ರಾಮ್ 2 ರನ್ ಗಳಿಸಿದರು. ಭಾರತದ ಪರ ಅರ್ಶದೀಪ್ ಸಿಂಗ್, ರಿಂಕು ಸಿಂಗ್ ಒಂದೊಂದು ವಿಕೆಟ್ ಪಡೆದರು. ಟೋನಿ ಡಿ ಜೋರ್ಜಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರು ಮಿತ್ರ ಬುಧವಾರ 20 ಡಿಸೆಂಬರ್ 2023

ಪರಿಸರ ಮಾಲಿನ್ಯ ತಡೆಗೆ ಸಮಾಜ ಪ್ರಾಮುಖ್ಯತೆ ಕೊಡುತ್ತಿಲ್ಲ

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕಳವಳ



ಮಂಡ್ಯ, ಡಿ.19– ದಿನದಿಂದ ದಿನಕ್ಕೆ ಪರಿಸರ ಮಾಲಿನ್ಯ ಅತ್ಯಂತ ಗಂಭೀರ ಸ್ವರೂಪ ಪಡೆದು ಕೊಳ್ಳುತ್ತಿದ್ದು, ಪರಿಸರ ಮಾಲಿನ್ಯ ತಡೆಗೆ ಸಮಾಜ ಪ್ರಾಮುಖ್ಯತೆ ಕೊಡುತ್ತಿಲ್ಲ ಎಂದು ಮಾಜಿ ಮುಖ್ಯ ಮಂತ್ರಿ ಹಾಗೂ ಕೇಂದ್ರದ ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಕಳವಳ ವ್ಯಕ್ತಪಡಿಸಿದರು.

ಮಂಗಳವಾರ ಸಂಜೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಡಾ.ಬಿ.ಶಿವಲಿಂಗಯ್ಯ ಅಭಿನಂದನಾ ಸಮಿತಿ ಆಯೋಜಿಸಿದ್ದ ಡಾ.ಬಿ. ಶಿವಲಿಂಗಯ್ಯ ಗೌರವ ಗ್ರಂಥ ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಗ್ರಂಥ ಬಿಡುಗಡೆ ಗೊಳಿಸಿ ಮಾತನಾಡಿದ ಅವರು, ಇತ್ತೀಚೆಗೆ ನೈಸರ್ಗಿಕ ವಾಗಿ ಹಲವು ಬದಲಾವಣೆ ತೀವ್ರ ಗತಿಯಲ್ಲಿ ನಡೆದಿವೆ. ಅಕಾಲಿಕ ಮಳೆ, ಬರ, ಪ್ರವಾಹ ಮುಂತಾದ ವೈರುಧ್ಯಗಳನ್ನು ಕಾಣುತ್ತಿದ್ದೇವೆ. ಇದೆಲ್ಲಕ್ಕೂ ಪ್ರಮುಖ ಕಾರಣ ನಾವು ಪ್ರಕೃತಿ ನಿರ್ಲಕ್ಷಿಸಿರುವುದು. ಡಾ.ಬಿ. ಶಿವಲಿಂಗಯ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಧ್ಯಕ್ಷರಾಗುವವರೆಗೂ ಯಾರಿಗೂ ಅಷ್ಟಾಗಿ ಈ ನಿಯಂತ್ರಣ ಮಂಡಳಿ ಚಟುವಟಿಕೆ ಏನೆಂದು ತಿಳಿದಿರಲಿಲ್ಲ. ಗ್ರಾಮೀಣ ಪ್ರದೇಶವಿರಲಿ, ನಗರ ಪ್ರದೇಶದಲ್ಲೂ ಮಾಲಿನ್ಯ ನಿಯಂತ್ರಣದ ಜಾಗೃತಿ ಮೂಡಿರಲಿಲ್ಲ ಎಂದು ಸ್ಮರಿಸಿದರು.

ಬಿ.ಶಿವಲಿಂಗಯ್ಯ ಅವರು ಮಾಲಿನ್ಯ ನಿಯಂ ತ್ರಣದ ಅಗತ್ಯತೆ ಕುರಿತು ಗಮನ ಸೆಳೆದರು. ನಮ್ಮ ಪರಿಸರದ ಮೇಲೆ ಆಗುತ್ತಿರುವ ಆಘಾತ ಮತ್ತು ಒತ್ತಡವನ್ನು ನಾವು ಗಮನಿಸುತ್ತಿಲ್ಲ. ನಮ್ಮ ಜೀವನ ಶೈಲಿಯಲ್ಲಿ ಕೊಂಚ ಬದಲಾವಣೆ ತರದ ಹೊರತು ಪರಿಸರವನ್ನು ನೈಸರ್ಗಿಕವಾಗಿ ಬೆಳೆಸಲು ಸಾಧ್ಯವಾಗದು. ಪರಿಸರವನ್ನು ಹೀಗೆ ನಿರ್ಲಕ್ಷಿಸಿ ದರೆ ಮುಂದೆ ದೊಡ್ಡ ಅನಾಹುತ ಸಂಭವಿಸಬ ಹುದು. ಹಾಗೆ ಆಗದ ರೀತಿ ನಾವು ಪ್ರಕೃತಿಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದರು.

ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿ, ಮಂಡ್ಯದ ಕ್ರಿಯಾಜ್ಞಾನಕ್ಕೆ ಬಿ.ಶಿವಲಿಂಗಯ್ಯ ಅವರು ನಿದರ್ಶನ. ಸಮಾಜಕ್ಕೆ ಅವರು ನೀಡಿ ರುವ ಕೊಡುಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿದೆ. ಅವರು ರಚಿಸಿರುವ 'ಕಾವೇರಿ ಪ್ರಕೃತಿಯ ಪ್ರಸಾದ– ಮನುಷ್ಯರ ವಿವಾದ' ಓದುಗರಿಗೆ ಅನೇಕ ಮಾಹಿತಿ ನೀಡುತ್ತವಲ್ಲದೆ, ಜ್ಞಾನದ ಕಣಜವಾಗಿ ಕಂಡು ಬರುತ್ತದೆ ಎಂದು ಬಣ್ಣಿಸಿದರು.

ಮಳೆ ನೀರಿನಿಂದ ಉಂಟಾಗುವ ಪ್ರವಾಹ ನಿರ್ವ ಹಣೆ ಹೇಗೆ ಎಂಬ ಕುರಿತು ಡಾ.ಬಿ.ಶಿವಲಿಂಗಯ್ಯ ಅವರು 1980ರಲ್ಲೇ ಕೆನಡಾದಲ್ಲಿ ಪ್ರಬಂಧ ಮಂಡಿಸಿ ದ್ದರು ಎಂಬುದು ಎಲ್ಲರಿಗೂ ಅಚ್ಚರಿಯ ಸಂಗತಿ. ಇಂದು ಬೆಂಗಳೂರು, ಚೆನ್ನೈನಂತಹ ನಗರಗಳಲ್ಲಿ ಮಳೆ ನೀರಿನ ಪ್ರವಾಹ ಜನ ಜೀವನವನ್ನೇ ಸ್ತಬ್ಧ ಗೊಳಿಸುತ್ತಿವೆ. ಈಗ ಸರ್ಕಾರಗಳು ಇದರ ನಿರ್ವಹಣೆ ಹೇಗೆ ಎಂದು ತಲೆಕೆಡಿಸಿಕೊಂಡಿದ್ದರೆ, ಶಿವಲಿಂಗಯ್ಯ ಅವರು 40 ವರ್ಷಗಳ ಹಿಂದೆಯೇ ಆ ಬಗ್ಗೆ ಅಧ್ಯಯನ ನಡೆಸಿದ್ದರೆಂದರೆ ಅವರ ಕ್ರಿಯಾಶಕ್ತಿಯನ್ನು ನಾವು ಅರಿಯಬಹುದು. ಹಾಗಾಗಿ ಅವರಿಗೆ ಸಾಕಷ್ಟು ಅವಕಾಶಗಳು ಸಿಗ ಬೇಕಿತ್ತು. ಎಸ್.ಎಂ.ಕೃಷ್ಣ ಅವರಿಗೆ ಪ್ರಧಾನಮಂತ್ರಿ ಯಾಗುವ ಅವಕಾಶ ಬಂದಿತ್ತು. ಆದರೆ ಕೈ ತಪ್ಪಿತಲ್ಲ. ಹಾಗೆ ಶಿವಲಿಂಗಯ್ಯ ಅವರಿಗೂ ಅವ ಕಾಶಗಳು ಕೈತಪ್ಪಿವೆ ಎಂದು ಅಭಿಪ್ರಾಯಪಟ್ಟರು.

ತವರಿನ ಅಭಿನಂದನೆ ಸ್ವೀಕರಿಸಲು ಸಿದ್ಧನಿಲ್ಲ: ಎಸ್‌ಎಂಕೆ

ಭಾರತ ಸರ್ಕಾರ ಪದ್ಮವಿಭೂಷಣ ಪ್ರಶಸ್ತಿ ನೀಡಿದ ಬಳಿಕ ನನಗೆ ತವರಿನ ಅಭಿನಂದನೆ ಸಲ್ಲಿಸಬೇಕೆಂಬ ನಿಟ್ಟಿನಲ್ಲಿ ಮಂಡ್ಯದ ಕರ್ನಾಟಕ ಸಂಘದ ಪ್ರೊ.ಜಯಪ್ರಕಾಶ್‌ಗೌಡರು, ಮೇಲುಕೋಟೆ ಶಾಸಕರಾಗಿದ್ದ ಸಿ.ಎಸ್.ಪುಟ್ಟರಾಜು, ಮದ್ದೂರಿನ ಶಾಸಕರಾಗಿದ್ದ ಡಿ.ಸಿ.ತಮ್ಮಣ್ಣ ಮುಂತಾದವರು ಬಂದು ನನಗೆ ದಿನಾಂಕ ಕೊಡುವಂತೆ ವಿನಂತಿಸಿದ್ದರು.

ಆದರೆ ನಾನು ಯೋಚಿಸಿದೆ. ಚುನಾವಣೆಗಳು ಹತ್ತಿರ ಬರುತ್ತಿವೆ. ಆನಂತರ ಈ ಬಗ್ಗೆ ಪ್ರಸ್ತಾವನೆ ಮಾಡೋಣ ಎಂದಷ್ಟೇ ಹೇಳಿದ್ದೆ. ಇವರೆಲ್ಲಾ ಪ್ರಯತ್ನ ಪಟ್ಟರೂ ನನ್ನಿಂದ ಪ್ರತಿಕ್ರಿಯೆ ಸಿಕ್ಕಿರಲಿಲ್ಲ. ಹಾಗಾಗಿ ಅಭಿನಂದನಾ ಸಮಾರಂಭ ನಡೆಯಲಿಲ್ಲ. ಜಿಲ್ಲೆಯ ಜನತೆಯ ಅಖಂಡ ಆಶೀರ್ವಾದದಿಂದ ನನಗೆ ಈ ಪದ್ಮವಿಭೂಷಣ ಗೌರವ ಸಂದಿದೆ. ಅದಕ್ಕಾಗಿ ಈ ಗೌರವವನ್ನು ನನ್ನ ಜಿಲ್ಲೆಯ ಜನರಿಗೆ ಅರ್ಪಿಸುತ್ತಿದ್ದೇನೆ ಎಂದು ವಿನಮ್ರರಾಗಿ ನುಡಿದರು.

ಇದುವರೆಗೆ ನಾನೇನಾಗಿದ್ದೇನೆಯೋ ಅದಕ್ಕೆಲ್ಲ ಕಾರಣ ಮಂಡ್ಯದ ಜನ ನನ್ನನ್ನು ಬೆಳೆಯಲು ಅನುವು ಮಾಡಿಕೊಟ್ಟರು. ಇದೊಂದು ಋಣ ನನ್ನ ಮೇಲಿದೆ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ.ಬಿ. ಶಿವಲಿಂಗಯ್ಯ ಅವರು, ಸರ್ಕಾರ ನನಗೆ ವಹಿಸಿದ ಎಲ್ಲಾ ಜವಾಬ್ದಾರಿಗಳನ್ನು ಪ್ರಾಮಾಣಿಕ ವಾಗಿ ನಿರ್ವಹಿಸಿದ್ದೇನೆ. ಸರ್ ಎಂ.ವಿಶ್ವೇಶ್ವರಯ್ಯ ಅವರನ್ನು ಆದರ್ಶವಾಗಿಟ್ಟುಕೊಂಡು ಇಂಜಿನಿಯರಿಂಗ್ ಮಾಡಿದೆ. ಸರ್ಕಾರಿ ಸೇವೆಯಲ್ಲಿ ದ್ದಾಗ ಅನೇಕ ಅಡೆತಡೆಗಳು ಬಂದವು. ಆಗೆಲ್ಲಾ ನನ್ನ ನೆರವಿಗೆ ನಿಂತು ನನ್ನಿಂದ ಸಮಾಜಕ್ಕೆ ಕೊಡುಗೆ ಸಲ್ಲುವಂತೆ ಮಾಡಿದವರು ಆಗಿನ ಮುಖ್ಯಮಂತ್ರಿ ಹೆಚ್.ಡಿ. ದೇವೇಗೌಡರು. ಇಂದು ಕರ್ನಾಟಕ ರಾಜ್ಯ ಸೋಲಾರ್ ವ್ಯವಸ್ಥೆಯಲ್ಲಿ ದೇಶದಲ್ಲೇ ನಂ.1 ಆಗಲು ಕಾರಣ ಎಸ್.ಎಂ.ಕೃಷ್ಣ ಎಂದು ಸ್ಮರಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾ ನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಶ್ರೀಮಠದ ಪ್ರಧಾನ ಕಾರ್ಯದರ್ಶಿ ಶ್ರೀಪುರುಷೋತ್ತಮಾ ನಂದನಾಥ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಶಾಸಕ ಗಣಿಗ ರವಿ ಕುಮಾರಗೌಡ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಎಂ.ಎಸ್.ಆತ್ಮಾನಂದ, ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ಕೆ.ಟಿ.ಶ್ರೀಕಂಠೇ ಗೌಡ, ಎಸ್‌ಬಿಐಟಿ ಕಾರ್ಯದರ್ಶಿ ಮೀರಾಶಿವ ಲಿಂಗಯ್ಯ, ಅಭಿನಂದನಾ ಸಮಿತಿ ಅಧ್ಯಕ್ಷ ಡಾ.ರಾಮಲಿಂಗಯ್ಯ ಮತ್ತಿತರರಿದ್ದರು.

---

16 ಸಾವಿರ ರೂ. ವಿದ್ಯುತ್ ಬಾಕಿ ಪಾವತಿಸದ ಹಿನ್ನೆಲೆ

ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಚೇರಿ ವಿದ್ಯುತ್ ಸ್ಥಗಿತ

ಮಂಡ್ಯ, ಡಿ.19– ಸುಮಾರು 16 ಸಾವಿರ ರೂ. ವಿದ್ಯುತ್ ಬಿಲ್ ಪಾವತಿಸದ ಹಿನ್ನೆಲೆಯಲ್ಲಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಮಂಡ್ಯ ನಗರದ ಶಾಸಕರ ಕಚೇರಿಯ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಲಾಗಿದೆ.



ವಿದ್ಯುತ್ ಸಂಪರ್ಕವಿಲ್ಲದೇ ಸಿಬ್ಬಂದಿಗಳು ಪರಿತಪಿಸಿದರೆ, ಮೇಲುಕೋಟೆ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕಿನ ವಿವಿಧ ಗ್ರಾಮಸ್ಥರು ಶಾಸಕರ ಕಚೇರಿಗೆ ಲೆಟರ್‌ಹೆಡ್ ಅಥವಾ ಇನ್ನಿತರ ಕೆಲಸಕ್ಕೆ ಆಗಮಿಸಿದರೆ ಅವರಿಗೆ ಯಾವ ಸೌಲಭ್ಯಗಳನ್ನು ಒದಗಿಸಿ ಕೊಡಲಾಗದ ಪರಿಸ್ಥಿತಿ ಶಾಸಕರ ಕಚೇರಿಯಲ್ಲಿ ಎದುರಾಗಿದೆ. ಹಳೇ ತಾಲೂಕು ಕಚೇರಿಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಚೇರಿ ಇದ್ದು, ಈ ಹಿಂದೆ ಹಳೇ ತಾಲೂಕು ಕಚೇರಿ ಸೆಂಟ್ರಲ್ ಪೊಲೀಸ್ ಠಾಣೆಗೆ ಸೀಮಿತ ವಾಗಿತ್ತು ಬಳಿಕ ಸೆಂಟ್ರಲ್ ಠಾಣೆ ಮಂಡ್ಯದ ಕೆರೆ ಅಂಗಳಕ್ಕೆ ಸ್ಥಳಾಂತರವಾಯಿತು. ಸೆಂಟ್ರಲ್ ಠಾಣೆ ಹಳೇ ತಾಲೂಕು ಕಚೇರಿಯಿಂದ ಸ್ಥಳಾಂತರವಾದ ಬಳಿಕ ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಚೇರಿಯಾಗಿ ಕಟ್ಟಡ ರೂಪಾಂತವಾಯಿತು. ಪ್ರಸ್ತುತ ಕಟ್ಟಡ ಶಾಸಕರ ಕಚೇರಿ, ಸಭಾಂಗಣ, ಆಪ್ತ ಸಹಾಯಕರ ಕೊಠಡಿಯಾಗಿ ಮಾರ್ಪಟ್ಟಿದ್ದು, ಆದರೆ ವಿದ್ಯುತ್ ಮೀಟರ್ ಮಾತ್ರ ಈ ಹಿಂದೆ ಇದ್ದ ಸೆಂಟ್ರಲ್ ಪೊಲೀಸ್ ಠಾಣೆ ಹೆಸರಿನಲ್ಲೇ ಇದ್ದು, ಇದೀಗ ವಿದ್ಯುತ್ ಬಿಲ್ ಕಟ್ಟಬೇಕಾದವರು ಯಾರು ಎಂಬ ಗೊಂದಲ ಸೃಷ್ಟಿಯಾಗಿದೆ. ಇದೇ ಕಟ್ಟಡದಲ್ಲಿ ಜನಸೇವಾ ಕೇಂದ್ರವೂ ಇದ್ದು, ಅಗತ್ಯ ಸೌಲಭ್ಯಗಳ ಧೃಡೀಕರಣಕ್ಕೂ ಸಮಸ್ಯೆಯಾಗಿದೆ. ಈ ಬಗ್ಗೆ ತಹಸೀಲ್ದಾರ್ ಪ್ರತಿಕ್ರಿಯೆ ನೀಡಿದ್ದು, ಕಟ್ಟಡದಲ್ಲಿ ಒಂದೇ ವಿದ್ಯುತ್ ಮೀಟರ್ ಇರುವುದರಿಂದ ಈ ಸಮಸ್ಯೆ ಉದ್ಭವವಾಗಿದ್ದು, ಶೀಘ್ರ ಸಮಸ್ಯೆ ಬಗೆಹರಿಸಿ, ಕಟ್ಟಡಕ್ಕೆ ವಿದ್ಯುತ್ ಪೂರೈಕೆ ಮಾಡಲಾಗುವುದು. ಶಾಸಕರ ಕಚೇರಿ ಹಾಗೂ ಜನಸೇವಾ ಕೇಂದ್ರ ಶೀಘ್ರ ಎಂದಿನಂತೆ ಕಾರ್ಯ ನಿರ್ವಹಿಸಲಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಹುಟ್ಟೂರಿನ ಮಮತೆ ಮರೆಯಲಾರೆ: ಕೃಷ್ಣಮೂರ್ತಿ



ಕಿಕ್ಕೇರಿ, ಡಿ.19– ಹುಟ್ಟೂರಿನ ಪ್ರೀತಿ, ಸನ್ಮಾನಕ್ಕೆ ಬೆಲೆ ಕಟ್ಟಲಾಗದು ಎಂದು ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ ತಿಳಿಸಿದರು.

ಸಿಂಗಾಪುರದಲ್ಲಿ ನಡೆಯುವ 2ನೇ ವಿಶ್ವ ಕನ್ನಡ ಸಮ್ಮೇಳನದ ಗಾಯಕರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಕಿಕ್ಕೇರಿ ಯಲ್ಲಿ ತವರಿನ ಸನ್ಮಾನ ಸ್ವೀಕರಿಸಿ ಮಾತ ನಾಡಿದ ಅವರು, ಬಡ ಕುಟುಂಬದಲ್ಲಿ ಹುಟ್ಟಿ ಅಪ್ಪ ಕೊಟ್ಟ 200 ರೂ.ಗಳಿಂದ ಬೆಂಗಳೂರಿಗೆ ಬಂದು ಕಷ್ಟಪಟ್ಟು ಸಂಗೀತ ಸಾಮ್ರಾಟ್ ಸಿ.ಅಶ್ವಥ್ ಅವರ ಪ್ರೀತಿಯ ಶಿಷ್ಯನಾದೆ. ಕಳೆದ ವರ್ಷ ಜಪಾನ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷ ನಾಗಿ ಕಾರ್ಯಕ್ರಮ ನಡೆಸಲು ತವರಿನ ಹಿರಿಯರ ಆಶೀರ್ವಾದ ಕಾರಣ ಎಂದರು.

ತಾನು ಎಲ್ಲೇ ಇದ್ದರೂ ತನ್ನ ಬೆಳವಣಿಗೆ, ಕೀರ್ತಿಗೆ ತವರಿನ ಜನತೆ ಪ್ರೀತಿ, ಆಶೀ ರ್ವಾದ ಕಾರಣ. ಗಾಯಕನಾಗಿ ತಾನು 50ಕ್ಕೂ ಹೆಚ್ಚು ವಿದೇಶಗಳ ಸುತ್ತಿ, ನೂರಾರು ಪ್ರಶಸ್ತಿ ಪಡೆದರೂ, ಹುಟ್ಟೂರಿನ ಪ್ರೀತಿಯ ಸನ್ಮಾನ ಎಂದೂ ಮರೆಯಲಾರೆ ಎಂದು ಗದ್ಗದಿತರಾದರು.

ಕೆಪಿಸಿಸಿ ಸದಸ್ಯ ಸುರೇಶ್ ಮಾತನಾಡಿ, ನಮ್ಮೂರಿನ ಕವಿ ಮೈಸೂರು ಮಲ್ಲಿಗೆಯ ಕೆ.ಎಸ್.ನರಸಿಂಹಸ್ವಾಮಿ ಕವಿತೆಯನ್ನು ವಿಶ್ವಮಟ್ಟದಲ್ಲಿ ಗುರ್ತಿಸುವಂತೆ ಮಾಡಿದ ಅಪರೂಪದ ಗಾಯಕ ಕೃಷ್ಣಮೂರ್ತಿ. ನಮ್ಮೂರು ಸಂಗೀತ, ಸಾಹಿತ್ಯಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದರು. ಇದೇ ವೇಳೆ ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಪುಷ್ಪಲತಾ ಕೃಷ್ಣಮೂರ್ತಿ ಅವರನ್ನು ಆತ್ಮೀಯವಾಗಿ ಗೌರವಿಸಲಾಯಿತು.

ಮುಖಂಡರಾದ ಅರ್ಚಕ ರಂಗರಾಜು, ನಿವೃತ್ತ ಪ್ರಾಂಶುಪಾಲ ಚಂದ್ರಮೋಹನ್, ಜಾಣೇಗೌಡ, ಶ್ರೀನಿಧಿ, ಮುಟ್ಟಸ್ವಾಮಿ, ಮಹ ದೇವು, ನಾಗರಾಜು, ಸಣ್ಣಪ್ಪ, ಲೋಕೇಶ್, ಕುಮಾರಸ್ವಾಮಿ, ರಮೇಶ್, ಈಶ್ವರ ಮತ್ತಿತರರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಭಾರತೀನಗರ, ಡಿ.19– ಕಾಡುಕೊತ್ತನಹಳ್ಳಿ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಡಿ.20 ರಂದು ಕಾಡುಕೊತ್ತನಹಳ್ಳಿ, ಭುಜುವಳ್ಳಿ, ಕಪರೆಕೊಪ್ಪಲು, ಶೆಟ್ಟಹಳ್ಳಿ, ಅರೆಚಾಕನಹಳ್ಳಿ, ಕರಡಕೆರೆ, ಹನುಮಮತನಗರ, ಗೋಪನಹಳ್ಳಿ, ಯಡಗನಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನೋಟಿಸ್‌ಗೆ ಕ್ಯಾರೇ ಎನ್ನದ ಸ್ಕ್ಯಾನಿಂಗ್ ಸೆಂಟರ್ ಬಂದ್



ನಾಗಮಂಗಲ, ಡಿ.19– ಸ್ಕ್ಯಾನಿಂಗ್ ಮಾಡಿದ ವಿವರ ನೀಡುವಂತೆ ನೋಟಿಸ್ ಜಾರಿ ಮಾಡಿದರೂ, ಅದಕ್ಕೆ ಕ್ಯಾರೇ ಎನ್ನದ ನಗರದ ಕಾವೇರಿ ಡಯಾ ಗ್ನೋಸ್ಟಿಕ್ ಸೆಂಟರ್ ಅನ್ನು ಅಧಿ ಕಾರಿಗಳು ಬಂದ್ ಮಾಡಿದ್ದಾರೆ.

ಇತ್ತೀಚೆಗೆ ಮಂಡ್ಯದ ಆಲೆಮನೆ ಯೊಂದರಲ್ಲಿ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಪ್ರಕರಣ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಅಧಿಕಾರಿಗಳು ಭೇಟಿ ನೀಟಿ ಪರಿಶೀಲಿಸುವಂತೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದರು. ಅದರಂತೆ ತಾಲೂಕು ದಂಡಾಧಿಕಾರಿಗಳು ಹಾಗೂ ಆರೋಗ್ಯಾಧಿ ಕಾರಿಗಳು ಪಟ್ಟಣದ ವಿವಿಧ ಸ್ಕ್ಯಾನಿಂಗ್ ಸೆಂಟ‌ರ್‌ಗಳಿಗೆ ಭೇಟಿ ನೀಡಿ ಪರಿಶೀಲಿ ಸಿದ್ದರು. ಈ ವೇಳೆ ಪಟ್ಟಣದ ಕಾವೇರಿ ಡಯಾಗ್ನೋಸ್ಟಿಕ್ ಸೆಂಟರ್‌ಗೂ ಭೇಟಿ ನೀಡಿ ಪರಿಶೀಲಿಸಿದಾಗ ಸಾರ್ವಜನಿಕ ಆಸ್ಪತ್ರೆ ವೈದ್ಯರ ಚೀಟಿ ದೊರೆತಿದ್ದು, ಅಲ್ಲಿವರೆಗೆ 70 ಮಂದಿ ಗರ್ಭಿಣಿಯರ ಸ್ಕ್ಯಾನಿಂಗ್ ನಡೆಸಲಾಗಿತ್ತು. ಈ ಬಗ್ಗೆ ವಿವರ ನೀಡಲು ಅಲ್ಲಿನ ವೈದ್ಯರು ತಡ ಬಡಾಯಿಸಿದ್ದರು. ಹೀಗಾಗಿ ಇನ್ನೊಂದು ವಾರದೊಳಗೆ ಈ ಬಗ್ಗೆ ವರದಿ ನೀಡು ವಂತೆ ಸ್ಕ್ಯಾನಿಂಗ್ ಸೆಂಟರ್‌ಗೆ ನೋಟಿಸ್ ಜಾರಿ ಮಾಡಲಾಗಿತ್ತು. ಆದರೆ ಇಲ್ಲಿವರೆಗೆ ಯಾವುದೇ ವರದಿ ನೀಡದ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾ ಧಿಕಾರಿ ಡಾ.ಮುಟ್ಟಸ್ವಾಮಿ, ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಸನ್ನ, ಪಾಂಡವ ಪುರ ಎಸಿ ನಂದೀಶ್ ಕಾವೇರಿ ಡಯಾಗ್ನೋ ಸ್ಟಿಕ್ ಸೆಂಟರ್ ಮೇಲೆ ದಾಳಿ ನಡೆಸಿದಾಗ ವೈದ್ಯ ಪಿಂಟೋ ಪರಾರಿಯಾಗಿದ್ದು, ಅಧಿಕಾರಿ ಗಳು ಸೆಂಟರ್ ಅನ್ನು ಬಂದ್ ಮಾಡಿ ದ್ದಾರೆ. ಈ ವೇಳೆ ಆರೋಗ್ಯ ಇಲಾಖೆ ಸಿದ್ದಲಿಂಗಪ್ಪ, ಚಿಕ್ಕಸ್ವಾಮಿ ಇತರರಿದ್ದರು.



ಮೈಸೂರು ಶ್ರೀರಾಂಪುರ ಎರಡನೇ ಹಂತದಲ್ಲಿರುವ ಷಷ್ಠಿಗುಡಿಯಲ್ಲಿ, ಸುಬ್ರಹ್ಮಣ್ಯ ಷಷ್ಠಿ ಹಬ್ಬದ ಸಂದರ್ಭದಲ್ಲಿ ಶಾಸಕ ಜಿ.ಟಿ. ದೇವೇಗೌಡರು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್, ಎಂ.ಮಹದೇವೇಗೌಡ ಮತ್ತು ದೇವಾಲಯ ಪ್ರಮುಖರಾದ ಶ್ರೀಧರ್ ಇತರರು ಗೌಡರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಜಿಎಸ್‌ಟಿ ಎರಡನೇ ತಿದ್ದುಪಡಿ ಮಸೂದೆಗೆ ಲೋಕಸಭೆ ಅಂಗೀಕಾರ



ನವದೆಹಲಿ, ಡಿ.19– ಜಿಎಸ್‌ಟಿ ಮೇಲ್ಮನವಿ ನ್ಯಾಯಾಧಿಕರಣದ ಅಧ್ಯಕ್ಷರು ಮತ್ತು ಸದಸ್ಯರ ವಯೋಮಿತಿ ಯನ್ನು ಹೆಚ್ಚಿಸುವ ಜಿಎಸ್‌ಟಿ ಎರಡನೇ ತಿದ್ದುಪಡಿ ಮಸೂದೆ ಯನ್ನು ಮಂಗಳವಾರ ಲೋಕ ಸಭೆಯಲ್ಲಿ ಅಂಗೀಕರಿಸಲಾಗಿದೆ.

ಇಂದು ಲೋಕಸಭೆಯಲ್ಲಿ ಮಸೂದೆ ಮಂಡಿಸಿ ಮಾತನಾಡಿದ ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಅವರು, ವಿವಿಧ ಹೈಕೋರ್ಟ್ ಗಳು ಅಥವಾ ಸುಪ್ರೀಂಕೋರ್ಟ್‌ಗಳಲ್ಲಿ ಜಿಎಸ್‌ಟಿ ಬೇಡಿಕೆಗಳ ವಿರುದ್ಧ ದಾವೆ ಹೂಡುತ್ತಿರುವ ತೆರಿಗೆದಾರರು ತಮ್ಮ ಪ್ರಕರಣಗಳನ್ನು ಹಿಂಪಡೆದು, ಜಿಎಸ್‌ಟಿ ಮೇಲ್ಮನವಿ ನ್ಯಾಯಾಧಿಕರಣ ಸಂಪರ್ಕಿ ಸಲು ಸ್ವತಂತ್ರರಾಗಿರುತ್ತಾರೆ ಎಂದು ಹೇಳಿದರು. ಕೇಂದ್ರ ಸರಕು ಮತ್ತು ಸೇವಾ ತೆರಿಗೆ(ಎರಡನೇ ತಿದ್ದುಪಡಿ) ಮಸೂದೆ 2023 ಅನ್ನು ಲೋಕಸಭೆಯಲ್ಲಿ ಧ್ವನಿ ಮತದ ಮೂಲಕ ಅಂಗೀಕರಿ ಸಲಾಯಿತು. ಮಸೂದೆಯು ಜಿಎಸ್‌ಟಿ ಮೇಲ್ಮನವಿ ನ್ಯಾಯಾಧಿಕರಣ (ಜಿಎಸ್‌ಟಿಎಟಿ)ದ ಅಧ್ಯಕ್ಷರು ಮತ್ತು ಸದಸ್ಯರ ವಯಸ್ಸಿನ ಮಿತಿಯನ್ನು ಕ್ರಮ ವಾಗಿ 70 ವರ್ಷ ಮತ್ತು 67 ವರ್ಷ ಗಳಿಗೆ ಹೆಚ್ಚಿಸಲು ಅವಕಾಶ ನೀಡುತ್ತದೆ. ಈ ಹಿಂದೆ ಅಧ್ಯಕ್ಷರಿಗೆ 67 ವರ್ಷ ಮತ್ತು ಸದಸ್ಯರಿಗೆ 65 ವರ್ಷ ನಿಗದಿಪಡಿಸಲಾಗಿತ್ತು.




ಮೈಸೂರು ಜಿಲ್ಲಾ ಕನಕದಾಸರ ಜಯಂತ್ಯುತ್ಸವ ಸಮಿತಿ ವತಿಯಿಂದ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರು ಹಾಗೂ ಕೆಪಿಸಿಸಿ ಸದಸ್ಯರಾದ ಕೆ. ಮರೀಗೌಡ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಲಾಯಿತು. ಈ ಸಂದರ್ಭ ಸಮಿತಿಯ ಅಧ್ಯಕ್ಷರೂ ಆದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸಂಚಾಲಕ ಎಂ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಬ್ಯಾಂಕ್ ಎಂ. ಪುಟ್ಟಸ್ವಾಮಿ, ಮಾಜಿ ಮಹಾಪೌರ ಟಿ.ಬಿ. ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯ ಜೆ. ಗೋಪಿ, ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಹ್ಮಣ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ. ಸೋಮಶೇಖರ್, ಅಹಿಂದ ಮುಖಂಡ ಕೆ.ಎಸ್.ಶಿವರಾಮು, ಜೆ.ಜೆ. ಆನಂದ, ಅಪ್ಪುಗೌಡ, ಹರೀಶ್ ಮೊಗಣ್ಣ, ಡೈರಿ ವೆಂಕಟೇಶ್, ವಿಶ್ವ, ಪವನ್, ಸಿದ್ದರಾಮ, ಕುಮಾರ್, ಕಾಗಿನೆಲೆ ಮಹೇಂದ್ರ, ನಾಡನಹಳ್ಳಿ ರವಿ ಮತ್ತಿತರರು ಉಪಸ್ಥಿತರಿದ್ದರು.

ದೆಹಲಿಯ ಗುರುಗಾಂವ್‌ನಲ್ಲಿ ನಡೆಯುವ ಸಮಾವೇಶದಲ್ಲಿ ಉಪನ್ಯಾಸ ನೀಡಲು

ಬೆಂಗಳೂರು ಸಿಐಡಿ ಡಿವೈಎಸ್ಪಿ ಯಶವಂತ್‌ಕುಮಾರ್ ಆಯ್ಕೆ

ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ; ಟ್ರೈ ಪ್ರಶಂಸೆ ಪತ್ರಕ್ಕೆ ಭಾಜನ

ಮೈಸೂರು,ಡಿ.19(ಪಿಎಂ)–ಸೈಬರ್ ಅಪರಾಧಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಮಾತ್ರವಲ್ಲದೆ, ಆ ಮೂಲಕ ಸೈಬರ್ ಅಪರಾಧ ಗಳನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಬೆಂಗ ಳೂರು ಸಿಐಡಿ ಸೈಬರ್ ವಿಭಾಗದ ಡಿವೈಎಸ್‌ಪಿ ಕೆ.ಎನ್.ಯಶ ವಂತ್ ಕುಮಾರ್ ದೆಹಲಿಯ ಗುರುಗಾಂವ್‌ನಲ್ಲಿ ಡಿ.19 ಮತ್ತು 20ರಂದು ನಡೆಯುವ ಸಮಿಟ್‌ನಲ್ಲಿ ಉಪ ನ್ಯಾಸ ನೀಡಲು ಆಯ್ಕೆಯಾಗಿದ್ದಾರೆ.



18ನೇ ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾ (ಡಿಎಸ್‌ಸಿಐ) ವಾರ್ಷಿಕ ಮಾಹಿತಿ ಭದ್ರತಾ ಶೃಂಗಸಭೆಯ ಭಾಗ ವಾಗಿ ಈ ಡಿಸಿಟಲ್ ಫೊರೆನ್ಸಿಕ್ಸ್ ಉಪ ಶೃಂಗಸಭೆ (ಸಮಿಟ್) ನಡೆಯಲಿದ್ದು, ಇದೇ ವೇಳೆ ಅಪರಾಧ ತನಿಖೆಯಲ್ಲಿ ಡಿಜಿಟಲ್ ಸಾಕ್ಷ್ಯ ನಿರ್ವಹಿಸುವ ಸಂಬಂಧ ಮೂಟ್ ಕೋರ್ಟ್ ಸೆಷನ್ ನಡೆಯಲಿದೆ.

ಇದರಲ್ಲಿ ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ತಳವಂತ್ ಸಿಂಗ್, ನಿವೃತ್ತ ವಿಜ್ಞಾನಿ ಕೃಷ್ಣಶಾಸ್ತ್ರಿ ಪೆಂಡ್ಯಾಲ್, ಸುಪ್ರೀಂ ಕೋರ್ಟ್ ನ್ಯಾಯವಾದಿ ವಕುಲ್ ಶರ್ಮಾ, ಭೋಪಾಲ್‌ನ ಎನ್‌ಐಎಲ್‌ಯುನ ಡಾ. ಅತುಲ್‌ಕುಮಾರ್ ಪಾಂಡೆ ಭಾಗವಹಿಸ ಲಿದ್ದಾರೆ. ಇವರ ಜೊತೆಗೆ ಪೊಲೀಸ್ ಅಧಿಕಾರಿ ಯಾಗಿ ಕೆ.ಎನ್. ಯಶವಂತ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಇತ್ತೀಚೆಗೆ ಟ್ರೈ (ಟೆಲಿಕಾಂ ರೆಗ್ಯೂಲೇಟರಿ ಅಥಾರಿಟಿ ಆಫ್ ಇಂಡಿಯಾ) ಆಯೋಜಿಸಿದ್ದ ಸೆಮಿನಾರ್‌ನಲ್ಲಿ ಭಾಗವಹಿಸಿದ್ದ ಕೆ.ಎನ್. ಯಶವಂತ್‌ಕುಮಾರ್, ಸೈಬರ್ ಕ್ರೈಂ ಕಾರ್ಯ ನಿರ್ವಹಣೆ ಮತ್ತು ತಡೆಗಟ್ಟುವ ಕ್ರಮದ ಬಗ್ಗೆ ವಿಸ್ತೃತವಾಗಿ ವಿಚಾರ ಮಂಡಿಸಿದ್ದರು. ಇವರ ವಿಚಾರಧಾರೆ ಕೇಳಿ ಟ್ರೈ ಮೆಚ್ಚುಗೆ ವ್ಯಕ್ತಪಡಿಸಿದ್ದು ಮಾತ್ರವಲ್ಲ, ಪ್ರಶಂಸೆ ಪತ್ರವನ್ನು ಕಳುಹಿಸಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಯಶವಂತ್‌ಕುಮಾರ್ ಅವರಿಗೆ ಶುಭ ಹಾರೈಸಿರುವ ಹೆಚ್.ಎನ್. ವೆಂಕಟೇಶ್ ಸಾರಥ್ಯದ ಲಾಗೈಡ್ ಕನ್ನಡ ಬಳಗವು, ರಾಷ್ಟ್ರಮಟ್ಟದಲ್ಲಿ ರಾಜ್ಯಕ್ಕೆ ಹೆಸರು ತಂದುಕೊಡುತ್ತಿರುವ ಯಶ ವಂತ್‌ಕುಮಾರ್ ಅವರು ಮತ್ತಷ್ಟು ಸಾಧನೆ ಎಂದು ಆಶಿಸಿದ್ದಾರೆ.

ಎಸ್‌ಕೆಡಿಆರ್‌ಡಿಪಿ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಪದಗ್ರಹಣ



ಮೈಸೂರು, ಡಿ.19(ಪಿಎಂ)– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಡಿಆರ್‌ಡಿಪಿ) ಮೈಸೂರು ನಗರ ವಲಯದ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಪದಗ್ರಹಣ ಸಮಾರಂಭವು ಮಂಗಳವಾರ ನಡೆಯಿತು.

ಮೈಸೂರಿನ ಕುಂಬಾರಕೊಪ್ಪಲಿನ ಮಹದೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಸಮಾರಂಭವನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿದರು. ಬಳಿಕ ಮಾತ ನಾಡಿದ ಅವರು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ನಡೆ ಯುತ್ತಿರುವ ವಿವಿಧ ಕಾರ್ಯಕ್ರಮಗಳು ಸಮಾಜದಲ್ಲಿ ಮಹಿಳಾ ಸಮುದಾಯವನ್ನು ಸ್ವಾವಲಂಭಿಯಾಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖಂಡ ಚೇತನ್ ವಿಷಕಂಠೇಗೌಡ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಜನತೆಗೆ ಹತ್ತು ಹಲವು ಅನುಕೂಲ ಆಗುತ್ತಿದ್ದು, ಇದರಿಂದ ಸಮಾಜ ದಲ್ಲಿ ಸುಧಾರಣೆ ಕಾಣಲು ಸಾಧ್ಯವಾಗಿದೆ. ಸರ್ಕಾರದಿಂದ ಆಗಬೇಕಿರುವ ಎಷ್ಟೋ ಕಾರ್ಯಕ್ರಮಗಳು ಈ ಯೋಜನೆಯಿಂದ ಆಗುತ್ತಿರುವುದು ಸಾಮಾನ್ಯ ಸಂಗತಿಯಲ್ಲ. ಇದು ಹೀಗೆಯೇ ಮುಂದುವರೆಯುವ ಮೂಲಕ ಸಮಾಜದ ಶ್ರೇಯೋಭಿವೃದ್ಧಿಗೆ ಸಹಕಾರಿಯಾಗಲಿ ಎಂದು ಹಾರೈಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೈಸೂರು ಪ್ರಾದೇಶಿಕ ನಿರ್ದೇಶಕ ಜಯರಾಮ ನಿಲ್ಲಿತ್ತಾಯ ಮಾತನಾಡಿ, ಯೋಜನೆಯ ಸಂಬಂಧ ವಿವರವಾಗಿ ಮಾಹಿತಿ ನೀಡಿದರು. ಮಹಾ ನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರೇಮ ಶಂಕರೇಗೌಡ, ಕೆ.ವಿ.ಶ್ರೀಧರ್, ಮಾಜಿ ಸದಸ್ಯ ಸ್ನೇಕ್ ಶ್ಯಾಮ್, ಮುಖಂಡರಾದ ಸುರೇಶ್, ಕೇಬಲ್ ನಾಗರಾಜ್, ಎಸ್‌ಕೆಡಿ ಆರ್‌ಡಿಪಿ ಕ್ಷೇತ್ರಯೋಜನಾಧಿಕಾರಿ ಶಕುಂತಲಾ, ಸಂಘಟನೆಯ ಶುಭ ಮಂಗಳಾ, ಸವಿತಾಶೆಟ್ಟಿ, ಯಶೋಧಾ ಮತ್ತಿತರರು ಹಾಜರಿದ್ದರು.


ಕ್ರಿಸ್‌ಮಸ್‌ಗೆ ಹೆಚ್ಚುವರಿ ಕೆಎಸ್‌ಆರ್‌ಟಿಸಿ ಬಸ್; ಟಿಕೆಟ್ ದರದಲ್ಲಿ ಶೇ.10ರಷ್ಟು ಡಿಸ್ಕೌಂಟ್

ಬೆಂಗಳೂರು, ಡಿ.19– ಕ್ರಿಸ್‌ಮಸ್ ಹಬ್ಬದ ನಿಮಿತ್ತ ಪ್ರಯಾಣಿಕರ ಅನುಕೂಲ ಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಹೆಚ್ಚುವರಿ 1000 ವಿಶೇಷ ಬಸ್ ವ್ಯವಸ್ಥೆ ಮಾಡಿದೆ. ಡಿ.22 ರಿಂದ ಡಿ. 24 ರವರೆಗೆ ಬೆಂಗಳೂರಿ ನಿಂದ ವಿವಿಧ ಜಿಲ್ಲೆಗಳು ಮತ್ತು ಅಕ್ಕ– ಪಕ್ಕದ ರಾಜ್ಯಗಳಿಗೆ ಈ ವಿಶೇಷ ಬಸ್‌ಗಳು ಸಂಚರಿಸಲಿವೆ. ಹಾಗೇ ಡಿಸೆಂಬರ್ 25ರಂದು ಈ ವಿಶೇಷ ಬಸ್‌ಗಳು ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಸಂಚರಿಸಲಿವೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ

ಧರ್ಮಸ್ಥಳ, ಕುಕ್ಕೆಸುಬ್ರಮಣ್ಯ, ಶಿವ ಮೊಗ್ಗ, ಹಾಸನ, ಮಂಗಳೂರು, ಕುಂದಾ ಪುರ, ಶೃಂಗೇರಿ, ಹೊರನಾಡು, ದಾವಣ ಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ ಸೇರಿ ದಂತೆ ಹಲವು ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಿಗೆ ಬಸ್‌ಗಳು ಹೊರಡಲಿವೆ. ಇನ್ನು ನೆರೆ ರಾಜ್ಯಗಳಾದ ತಮಿಳುನಾಡು, ಕೇರಳದ ವಿವಿಧ ಸ್ಥಳಗಳಿಗೆ ಹೆಚ್ಚುವರಿ ಬಸ್ ಗಳು ಸಂಚರಿಸಲಿವೆ.

ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಬಸ್‌ಗಳಲ್ಲಿ ಮುಂಗಡ ಟಿಕೆಟ್ ಬುಕ್ಕಿಂಗ್ ಮಾಡಲು ವ್ಯವಸ್ಥೆ ಕಲ್ಪಿಸ ಲಾಗಿದೆ. www.ksrtc.in ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಆನ್‌ಲೈನ್ ಮೂಲಕವೂ ಟಿಕೆಟ್ ಬುಕ್ ಮಾಡಬಹು ದಾಗಿದೆ. ಪ್ರಯಾಣಿಕರು ಮೊದಲೇ ಸೀಟ್ ಕಾಯ್ದಿರಿಸಬಹುದಾಗಿದೆ. ವೆಬ್ ಸೈಟ್ ಮೂಲಕ ಪಡೆಯಬಹುದು. ನಾಲ್ಕು ಹಾಗೂ ನಾಲ್ಕಕ್ಕಿಂತ ಹೆಚ್ಚಿನ ಟಿಕೆಟ್ ಕಾಯ್ದಿರಿಸಿದರೆ ಶೇ.5ರಷ್ಟು ರಿಯಾಯಿತಿ ಇದೆ. ಇನ್ನು ಹೋಗುವ ಹಾಗೂ ಬರುವ ಟಿಕೆಟ್ ಕಾಯ್ದಿರಿಸಿದರೆ ಶೇ.10ರಷ್ಟು ರಿಯಾಯಿತಿ ನೀಡಲಾಗಿದೆ.

ಭದ್ರತಾ ವೈಫಲ್ಯದ ಹಿಂದಿರುವವರಿಗೆ ವಿಪಕ್ಷಗಳ ಬೆಂಬಲ: ಪ್ರಧಾನಿ ಮೋದಿ ಆರೋಪ



ನವದೆಹಲಿ, ಡಿ.19– ಲೋಕಸಭೆಯ ಭದ್ರತಾ ವೈಫಲ್ಯವನ್ನು ವಿರೋಧ ಪಕ್ಷಗಳು ಬೆಂಬಲಿಸುತ್ತಿರುವುದು ದುರದೃಷ್ಟಕರ ಮತ್ತು ಖಂಡನಾರ್ಹ. ಭದ್ರತಾ ವೈಫಲ್ಯಕ್ಕೆ ಕಾರಣವಾದವರಿಗೆ ವಿರೋಧಪಕ್ಷಗಳು ಮೌನ ವಾಗಿ ಮತ್ತು ಪರೋಕ್ಷವಾಗಿ ಬೆಂಬಲ ನೀಡುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಆರೋಪಿಸಿದರು.

2024ರ ಲೋಕಸಭೆ ಚುನಾವಣೆಯಲ್ಲಿ ವಿಪಕ್ಷ ಗಳು ಮತ್ತಷ್ಟು ಸ್ಥಾನಗಳನ್ನು ಕಳೆದುಕೊಳ್ಳಲಿವೆ ಎಂಬುದು ಅವರ ನಡವಳಿಕೆಯಿಂದಲೇ ತಿಳಿಯುತ್ತದೆ ಎಂದರು. ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಪ್ರತಿಭಟನೆ ನಡೆಸುತ್ತಿರುವುದನ್ನು ವಿರೋಧಿಸಿ ತೀವ್ರ ವಾಗ್ದಾಳಿ ನಡೆಸಿದ ಅವರು, ಭದ್ರತಾ ವೈಫಲ್ಯ ಘಟನೆಗೆ ರಾಜಕೀಯ ಬಣ್ಣ ನೀಡುವ ಮೂಲಕ ಈಚಿನ ವಿಧಾನಸಭೆ ಚುನಾವಣಾ ಸೋಲಿನ ಹತಾಶೆಯನ್ನು ವಿಪಕ್ಷಗಳು ಹೊರಹಾಕುತ್ತಿವೆ. ವಿರೋಧ ಪಕ್ಷಗಳ ಗುರಿಯು ನಮ್ಮ ಸರ್ಕಾರ ವನ್ನು ಕೆಳಗಿಳಿಸುವುದಾಗಿದೆ. ಆದರೆ ನಮ್ಮ ಸರ್ಕಾರದ ಗುರಿಯು ದೇಶಕ್ಕೆ ಉಜ್ವಲ ಭವಿಷ್ಯ ಖಾತ್ರಿಪಡಿಸು ವುದಾಗಿದೆ ಎಂದು ಹೇಳಿದರು. ಸಂಸತ್ತಿನ ಭದ್ರತಾ ವೈಫಲ್ಯವನ್ನು ಸಮರ್ಥಿಸಿಕೊಳ್ಳುವ ಕೆಲಸ ನಡೆಯುತ್ತಿದೆ. ಇದು ಭದ್ರತಾ ವೈಫಲ್ಯ ದಷ್ಟೇ ಗಂಭೀರ ಸಮಸ್ಯೆ ಎಂದು ಮೋದಿ ಹೇಳಿರುವುದಾಗಿ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಅವರು ತಿಳಿಸಿದರು.

ನಿರುದ್ಯೋಗ, ಬೆಲೆ ಏರಿಕೆಯು ಸಂಸತ್ತಿನ ಭದ್ರತಾ ವೈಫಲ್ಯಕ್ಕೆ ಕಾರಣ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈಚೆಗೆ ಆರೋಪಿಸಿದ್ದರು. ಈ ಹೇಳಿಕೆ ಹಿನ್ನೆಲೆಯಲ್ಲಿ ಮೋದಿ ಅವರು ಹೀಗೆ ಹೇಳಿದ್ದಾರೆ. ಪ್ರಜಾಪ್ರಭುತ್ವ ಮತ್ತು ಪ್ರಜಾ ಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇರಿಸಿರುವ ಎಲ್ಲರೂ ಭದ್ರತಾ ವೈಫಲ್ಯ ಕೃತ್ಯವನ್ನು ಖಂಡಿಸಬೇಕು ಎಂದಿದ್ದಾರೆ.

ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇರಿಸಿರುವ ಪಕ್ಷವೊಂದು ಬಹಿರಂಗವಾಗಿ ಅಥವಾ ಒಳಗೊಳಗೇ ಇಂಥ ಕೃತ್ಯಗಳನ್ನು ಬೆಂಬಲಿಸಲು ಹೇಗೆ ಸಾಧ್ಯ ಎಂದು ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಪ್ರಶ್ನಿಸಿದರು.

ನಮ್ಮ ಧ್ವನಿಯನ್ನು ಹತೋಟಿಯಲ್ಲಿರಿಸಿಕೊಂಡು ಮತ್ತು ಪ್ರಜಾಪ್ರಭುತ್ವದ ಮಿತಿಯಲ್ಲೇ ನಾವು ವಿಪಕ್ಷಗಳ ಸಂಚನ್ನು ಬಯಲಿಗೆಳೆಯಬೇಕು. ಯಾರು ಸಂಸತ್ ಅಧಿವೇಶನ ದಲ್ಲಿ ಭಾಗಿಯಾಗದಿದ್ದರೂ ನಾವು ಮಾತ್ರ ಸಂಸತ್ ಪ್ರಕ್ರಿಯೆಯಲ್ಲಿ ಭಾಗಿಯಾಗಬೇಕು ಎಂದು ಉಭಯ ಸದನಗಳಲ್ಲಿ ಮಂಡನೆಯಾಗ ಬೇಕಿರುವ ಪ್ರಮುಖ ಮಸೂದೆಗಳನ್ನು ಉಲ್ಲೇಖಿಸಿ ಹೇಳಿದರು.

ಪಿಎಚ್.ಡಿ ಪದವಿ



ಮೈಸೂರು, ಡಿ. 19– ಡಾ. ಹೆಚ್. ಕಮಲಾ ಅವರ ಮಾರ್ಗ ದರ್ಶನದಲ್ಲಿ ಸಿ.ಎಸ್. ಸಿದ್ದ ರಾಜು ಅವರು ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದು ಮರೀಗೌಡರ ಹುಟ್ಟುಹಬ್ಬ; ಅಭಿಮಾನಿಗಳಿಂದ ನಾನಾ ಸೇವಾ ಕಾರ್ಯ

ಮೈಸೂರು, ಡಿ.19– ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯ ಕೆ.ಮರೀಗೌಡರ ಹುಟ್ಟುಹಬ್ಬದ ಅಂಗವಾಗಿ ಅವರ ಬೆಂಬಲಿಗರು ಬುಧವಾರ ವಿವಿಧ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.



ಚಾಮುಂಡಿಬೆಟ್ಟದಲ್ಲಿ ಬೆಳಗ್ಗೆ 8ಕ್ಕೆ ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಲಾಗುವುದು. ನಂತರ ಮುಖಂಡ ಶೇಖರ್ ಅವರು ಜಯನಗರದ ಛಾಯಾ ದೇವಿ ಆಶ್ರಮದ ಮಕ್ಕಳಿಗೆ ಉಪಾಹಾರ ಹಾಗೂ ಹಣ್ಣು ವಿತರಣೆ, ಕೇರಗಳ್ಳಿ ಬಸವೇಗೌಡರು ಶ್ರೀರಾಂಪುರದ ಶ್ರೀ ನವಚೇತನ ಬಸವೇಶ್ವರ ಬುದ್ಧಿಮಾಂದ್ಯ ಕೇಂದ್ರದ ಮಕ್ಕಳಿಗೆ ಉಪಾಹಾರ, ರಮಾಬಾಯಿ ನಗರದಲ್ಲಿ ಶಿವಕುಮಾರ್ ಹಾಗೂ ನಾರಾಯಣ ಅವರಿಂದ ಶಾಲಾ ಮಕ್ಕಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಕೋಟೆಹುಂಡಿ ಗ್ರಾಮಸ್ಥರಿಂದ ಬೆಳಗ್ಗೆ 11.30ಕ್ಕೆ ಕೆ.ಮರೀಗೌಡರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ. ಬಳಿಕ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಪೌರಕಾರ್ಮಿಕರಿಗೆ ಲಕ್ಷ್ಮಣ್ ಪ್ರಭು ಅವರಿಂದ ವಸ್ತ್ರ ವಿತರಿಸಲಾಗುತ್ತದೆ. ಮಧ್ಯಾಹ್ನ 12.30ಕ್ಕೆ ಶ್ರೀರಾಂಪುರದ ಅಶ್ವಿನಿ ಕಲ್ಯಾಣ ಮಂಟಪದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 1.30ಕ್ಕೆ ತಿಲಕ್‌ನಗರದ ಕಿವುಡು ಮತ್ತು ಮೂಗರ ಶಾಲಾ ಮಕ್ಕಳಿಗೆ ಅರಸಿನಕೆರೆ ಸ್ವಾಮಿ ಹಾಗೂ ಹೆಚ್.ಮಹಾದೇವ ಅವರಿಂದ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಮಧ್ಯಾಹ್ನ 2.30 ಕ್ಕೆ ಭರತ್‌ನಗರದಲ್ಲಿ ಅಜ್ಮಲ್ ಅವರಿಂದ ಬಡ ಮಹಿಳೆಯರಿಗೆ ಸೀರೆ ವಿತರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಂಜೆ 5:30ಕ್ಕೆ ಇಲವಾಲದಲ್ಲಿ ಅಭಿನಂದನಾ ಕಾರ್ಯಕ್ರಮ, ಸಂಜೆ 7 ಕ್ಕೆ ರಮಾಬಾಯಿ ನಗರದಲ್ಲಿ ಸಿದ್ದರಾಮ ನೇತೃತ್ವದಲ್ಲಿ ಸನ್ಮಾನ ಕಾರ್ಯಕ್ರಮ, ರಾತ್ರಿ 8ಕ್ಕೆ ಹೂಟಗಳ್ಳಿ ಕೆಹೆಚ್‌ಬಿ ಬಡಾವಣೆಯಲ್ಲಿಯಲ್ಲಿ ನಡೆಯಲಿರುವ ಕನಕ ದಾಸರ ಜಯಂತಿಯಲ್ಲಿ ಅಭಿನಂದನಾ ಸಮಾರಂಭ ನಡೆಲಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸತೀಶ್ ಕುಮಾರ್, ಮರೀಗೌಡರ ಅಭಿಮಾನಿ ಸಂಘದ ಅಧ್ಯಕ್ಷ ಧನಗಳ್ಳಿ ಬಸವರಾಜು ಹಾಗೂ ಉಪಾಧ್ಯಕ್ಷ ಶಿವಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತ ಆಡಂಬರಕ್ಕೆ ಸಾಲ ಮಾಡಿ ಭೂಮಿ ಕಳೆದುಕೊಳ್ಳುತ್ತಿದ್ದಾನೆ

● ಶಾಸಕರೂ ಆದ ಸಹಕಾರಿ ಧುರೀಣ ಜಿ.ಟಿ.ದೇವೇಗೌಡರ ಅತೀವ ನೋವು ● ಎಂತಹ ಸಮಯದಲ್ಲೂ ಭೂಮಿ ಮಾರಾಟ ಮಾಡುವ ತೀರ್ಮಾನಕ್ಕೆ ಬರದಂತೆ ಮನವಿ ● 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಚುಂಚೇಗೌಡರಿಗೆ ಅಭಿನಂದನೆ

ದೊಡ್ಡಬಳ್ಳಾಪುರ, ಡಿ.19– ರೈತರು ಆಡಂಬರದ ಕಾರ್ಯಕ್ರಮಗಳಿಗಾಗಿ ಸಾಲಮಾಡಿ, ಕೊನೆಗೆ ತಮ್ಮ ಜಮೀನನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರಾದ ರಾಜ್ಯ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಚುಂಚೇಗೌಡರಿಗೆ ದೊಡ್ಡಬಳ್ಳಾಪುರದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರೈತರು ಸಾಲ ಮಾಡಿ ಮಕ್ಕಳ ಮದುವೆ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಅದ್ದೂರಿಯಾಗಿ ನಡೆಸುತ್ತಾರೆ. ನಂತರ ಸಾಲ ತೀರಿಸಲಾಗದೆ ಬೆಳೆಯುವ ಭೂಮಿಯನ್ನೇ ಮಾರಾಟ ಮಾಡಿ ಸಾಲ ತೀರಿಸುತ್ತಾರೆ. ಕೊನೆಗೆ ಕುಟುಂಬ ನಿರ್ವಹಣೆಗೆ ಮಗನನ್ನು ಫ್ಯಾಕ್ಟರಿ ಗೇಟ್ ಕಾಯಲು ಕಳಿಸುತ್ತಾರೆ ಎಂದರು.



> ನಾನೂ ಕೂಡ ರೈತ. ನನ್ನ ಮಗಳು ಹಾಗೂ ಮಗನಿಗೆ ತಿರುಪತಿಯಲ್ಲಿ ಸರಳವಾಗಿ ಮದುವೆ ಮಾಡಿದೆ. ಇದರಿಂದ ಬೇರೆಯವರಿಗೂ ಉತ್ತೇಜನವಾಗಬಹುದು ಎಂದುಕೊಂಡಿದ್ದೆ. ಆದರೆ ಯಾರೋ ಒಬ್ಬರು ಅದ್ದೂರಿಯಾಗಿ ಮದುವೆ ಮಾಡುವುದನ್ನು ನೋಡಿ ತಾವೂ ಮಾಡಬೇಕು ಎನ್ನುವವರೇ ಹೆಚ್ಚಿದ್ದಾರೆ. ಇದಕ್ಕಾಗಿ ಚಿನ್ನದಂತಹ ಜಮೀನುಗಳನ್ನು ಮಾರಾಟ ಮಾಡಿಕೊಳ್ಳುತ್ತಾರೆ. ಮುಂದಾದರೂ ರೈತರು ಜಾಗೃತರಾಗಿ ತಮ್ಮ ಜಮೀನುಗಳನ್ನು ಕಾಪಾಡಿಕೊಳ್ಳಬೇಕು.
> –ಜಿ.ಟಿ.ದೇವೇಗೌಡ, ಶಾಸಕ


ಭೀಕರ ಬರಗಾಲದಿಂದ ರಾಜ್ಯದ ರೈತರು ಬೆಳೆದ ಬೆಳೆಗಳೆಲ್ಲಾ ಹಾಳಾಗಿದೆ. ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡದಿದ್ದರೆ ಆ ವರ್ಷದ ಪೂರ್ಣ ಬಡ್ಡಿ ಕಟ್ಟಬೇಕಿರುವುದರಿಂದ ರೈತರು ಕಂಗಾಲಾಗಿದ್ದಾರೆ. ಸಹಿಸಲಾರದೆ ಕೆಲವರು ಕೆಟ್ಟ ನಿರ್ಧಾರ ತೆಗೆದುಕೊಂಡಿದ್ದಾರೆ. ರೈತರನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ರೈತರ ಸಾಲವನ್ನು ಮನ್ನಾ ಮಾಡಬೇಕು. ಇಲ್ಲವೇ 2025ರ ಜನವರಿವರೆಗೆ ಸಾಲ ಮರುಪಾವತಿ ಗಡುವನ್ನು ವಿಸ್ತರಿಸಿ, ಅಲ್ಲಿವರೆಗಿನ ಬಡ್ಡಿಯನ್ನು ಸರ್ಕಾರವೇ ಭರಿಸುವಂತೆ ಬೆಳಗಾವಿ ಅಧಿವೇಶನದಲ್ಲಿ ಸರ್ಕಾರವನ್ನು ಆಗ್ರಹಿಸಿದ್ದೆ. ಆದರೆ ಸಕಾಲಕ್ಕೆ ಸಾಲ ಮರುಪಾವತಿ ಮಾಡಿದರೆ ಮಾತ್ರ ಬಡ್ಡಿ ಮನ್ನಾ ಮಾಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ ಎಂದು ಹೇಳಿದರು.

ಭೀಕರ ಬರಗಾಲದಲ್ಲಿ ಬೆಳೆಯೇ ಇಲ್ಲದಿರುವಾಗ ಸಾಲ ತೀರಿಸಲು ಹೇಗೆ ಸಾಧ್ಯ. ಹಾಗಾಗಿ ಸಾಲ ಮರುಪಾವತಿ ಅವಧಿಯನ್ನು ವಿಸ್ತರಿಸುವುದರ ಜೊತೆಗೆ ಸಹಕಾರ ಸಂಘಗಳು, ವಾಣಿಜ್ಯ ಬ್ಯಾಂಕ್‌ಗಳಲ್ಲಿ ಪಡೆದಿರುವ ಸಾಲದ ಮೇಲಿನ ಒಂದು ವರ್ಷದ ಬಡ್ಡಿಯನ್ನಾದರೂ ಸರ್ಕಾರವೇ ತುಂಬಬೇಕು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರೈತರಿಗೆ ಬಲ ತುಂಬುತ್ತಿರುವ ಸಹಕಾರ ಸಂಘಗಳು ಮತ್ತಷ್ಟು ಬಲಿಷ್ಠಗೊಳ್ಳಬೇಕು. ಇದರಲ್ಲಿ ಸಂಘದ ಕಾರ್ಯದರ್ಶಿ, ಅಧಿಕಾರಿಗಳು, ನಿರ್ದೇಶಕರುಗಳ ಜವಾಬ್ದಾರಿ ಮಹತ್ವದ್ದಾಗಿದೆ. ಹಿಂದೆ ರೈತರಿಗೆ 100 ರೂ. ಸಾಲ ನೀಡಿದರೆ, ಆ ರೈತ ಯಾವ ಬೆಳೆ ಬೆಳೆದ, ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿ, ಸಾಲ ಮರುಪಾವತಿ ಮಾಡಿದನಾ ಎಂದು ನಿರ್ದೇಶಕರುಗಳು ವಿಚಾರಿಸುತ್ತಿದ್ದರು. ಆದರೆ ಈಗಿನ ಯಾವ ಅಧಿಕಾರಿ ಅಥವಾ ನಿರ್ದೇಶಕರು ಆ ಕೆಲಸ ಮಾಡುತ್ತಾರೆ ಎಂದು ಎಚ್ಚರಿಸಿದರು.

ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಮಾಜಿ ಶಾಸಕರಾದ ವಿ.ಕೃಷ್ಣಪ್ಪ, ನರಸಿಂಹಸ್ವಾಮಿ, ಟಿ.ವೆಂಕಟರಮಣಯ್ಯ, ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಂತಯ್ಯ, 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತ ಚುಂಚೇಗೌಡರು, ಸಹಕಾರ ಮಹಾಮಂಡಳದ ನಿರ್ದೇಶಕ ಎ.ಸಿ.ನಾಗರಾಜ್ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಕಾಯಂಗಾಗಿ ಅತಿಥಿ ಉಪನ್ಯಾಸಕರ ಧರಣಿ



ಮೈಸೂರು, ಡಿ.19(ಎಸ್‌ಪಿಎನ್)– ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವಂತೆ ಒತ್ತಾಯಿಸಿ ಕಳೆದೆರಡು ದಿನಗಳಿಂದ ಮೈಸೂರು ವಿವಿ ಸಂಸ್ಕೃತ ವಿಭಾಗದಲ್ಲಿ ಸತ್ಯಾಗ್ರಹ ನಡೆಸುತ್ತಿದ್ದ ಅತಿಥಿ ಉಪನ್ಯಾಸಕರಾದ ಡಾ.ರಾಚೋಟಿಶ್ವರ ಶಿವಾಚಾರ್ಯ ಸ್ವಾಮೀಜಿ, ಮೈಸೂರು ವಿವಿ ಹಿರಿಯ ಅಧಿಕಾರಿಗಳ ಭರವಸೆ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ಸತ್ಯಾಗ್ರಹ ವಾಪಸ್ ಪಡೆದಿದ್ದಾರೆ.

ಜ್ಞಾನಾರ್ಜನೆಯು ಹಣವಂತರ ಸ್ವತ್ತಾಗಿ, ಬಡವರಿಗೆ ವಿದ್ಯೆಯೆನ್ನುವುದು ಕನಸಾಗುವ ಸಂದರ್ಭ ಗೋಚರವಾಗುತ್ತಿದೆ. ಇದಕ್ಕೆ ವಿವಿ ಮತ್ತು ರಾಜ್ಯ ಸರ್ಕಾರದ ಸುತ್ತೋಲೆಗಳೇ ಕಾರಣ. ಸದ್ಯ ವಿವಿಯಲ್ಲಿಯು ಹಣ ಸಂಪಾದನೆ ಗಳಿಸುವ ವಿಭಾಗಗಳಿಗೆ ಮಾತ್ರ ಮನ್ನಣೆ ಎಂಬ ಮನಸ್ಥಿತಿಗೆ ವಿವಿ ಆಡಳಿತ ಮಂಡಳಿ ಬಂದಿದೆ. ಆದರೆ, ಹಣ ಸಂಪಾದಿಸದ ವಿಭಾಗಗಳನ್ನು ಮುಚ್ಚುವ ದುರುದ್ದೇಶದಿಂದ ಈ ಹಿಂದೆ ಕನಿಷ್ಠ ಐದು ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುತ್ತಿದ್ದ ವಿಭಾಗಗಳನ್ನು ಹದಿನೈದಕ್ಕೆ ವಿಸ್ತರಿಸಿ ಸುತ್ತೋಲೆ ಹೊರಡಿಸಿದ ಪರಿಣಾಮ, ಈ ದುಸ್ಥಿತಿ ಬಂದಿದೆ. ಅಲ್ಲದೆ ಹಲವು ವಿಭಾಗಗಳು ಈಗಾಗಲೇ ಮುಚ್ಚಲಾಗಿದೆ ಎಂದಿದ್ದಾರೆ.

ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಶುಲ್ಕವನ್ನು ಹೆಚ್ಚಿಸುವ ವಿಶ್ವವಿದ್ಯಾನಿಲಯವು, ಆದರೆ, ಪ್ರತಿ ವರ್ಷ ವಿವಿಯಲ್ಲಿ ಅತಿಥಿ ಉಪನ್ಯಾಸಕರ ವೇತನ ಹೆಚ್ಚಿಸುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ವಿವಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ. ಉನ್ನತ ಶಿಕ್ಷಣವು ಬಡಮಕ್ಕಳಿಗೆ ಸಿಗುವಂತಾಗಬೇಕಾದರೆ, ವಿವಿಯು ವಿದ್ಯಾರ್ಥಿಗಳ ಶುಲ್ಕವನ್ನು ಕಡಿತಗೊಳಿಸಬೇಕು. ಅದರಲ್ಲೂ ಸಂಸ್ಕೃತ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರನ್ನು ತಕ್ಷಣವೇ ಕಾಯಂಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಾಸನ, ಮಂಡ್ಯ, ಕೊಡಗು ಜಿಲ್ಲೆಗಳಲ್ಲಿ ಪ್ರತ್ಯೇಕ ವಿವಿ ಸ್ಥಾಪನೆಯಾದ ಹಿನ್ನೆಲೆಯಲ್ಲಿ ಮೈಸೂರು ವಿವಿಯ ಹಿಂದಿ, ಸಂಸ್ಕೃತ, ಆಂಥ್ರೋಪಾಲಾಜಿ ವಿಭಾಗಕ್ಕೆ ಈ ಸಾಲಿನ (2023–24ನೇ ಸಾಲಿನಲ್ಲಿ) ಪ್ರವೇಶಾತಿ ಶೂನ್ಯಕ್ಕೆ ಬಂದಿದೆ. ಅಲ್ಲದೆ, ಹಿಂದಿ ವಿಭಾಗಕ್ಕೆ ಓರ್ವ ವಿದ್ಯಾರ್ಥಿ ಪ್ರವೇಶಾತಿ ಪಡೆದಿದ್ದರು ಆ ವಿದ್ಯಾರ್ಥಿಯನ್ನು ಮಹಾರಾಜ ಪಿಜಿ ಕೇಂದ್ರಕ್ಕೆ ವರ್ಗಾಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಮೂರು ವಿಭಾಗದ ಅತಿಥಿ ಉಪನ್ಯಾಸಕರನ್ನು ವಿವಿ ಈ ಬಾರಿ ನೇಮಕಾತಿಯನ್ನೇ ವಿವಿ ಮಾಡಿಕೊಂಡಿಲ್ಲ. ಈ ವಿಭಾಗಗಳಲ್ಲಿ ಹಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರಿಗೆ ಶಾಕ್ ಆಗಿದ್ದು, ಈ ವೃತ್ತಿಯನ್ನೇ ನಂಬಿ ಬದುಕುತ್ತಿದ್ದವರ ಬದುಕು ಅತಂತ್ರ ಸ್ಥಿತಿ ತಲುಪಿದೆ ಎಂದು ಮತ್ತೋರ್ವ ಅತಿಥಿ ಉಪನ್ಯಾಸಕರು 'ಮೈಸೂರು ಮಿತ್ರ'ನಲ್ಲಿ ದೂರಿದರು.

ಸರ್ಕಾರದ ಸವಲತ್ತು ಬಳಸಿಕೊಂಡು ಸ್ವಾವಲಂಬಿಗಳಾಗಿ

ಮಹಿಳೆಯರಿಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಸಲಹೆ



ಮೈಸೂರು, ಡಿ.19–ಮಹಿಳೆಯರು ಸರ್ಕಾರದ ಸವಲತ್ತುಗಳನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ಸಬಲರಾಗುವುದರೊಂದಿಗೆ ಸ್ವಾವಲಂಬಿಗಳಾಗಿ ಬದುಕುವಂತಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು.

ಜ್ಞಾನ ಜ್ಯೋತಿ ಸಂಸ್ಥೆ ವತಿಯಿಂದ ಅಶೋಕಪುರಂನ ನಗರ ಜೀವನೋಪಾಯ ಕೇಂದ್ರ (ಪಶ್ಚಿಮ)ದಲ್ಲಿ ನಡೆದ ಸಮಾರಂಭ ವಿವಿಧ ಯೋಜನೆಯಡಿ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಅವರು, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬಂತೆ ಪ್ರತಿ ಮಗುವಿಗೂ ಶಿಕ್ಷಣ ನೀಡಿ ಮಕ್ಕಳಿಗೆ ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ. ತಾಯಿಯೇ ಮಕ್ಕಳಿಗೆ ಮೊದಲ ಗುರು ಎಂದರು.

ನಾನು ಚಿಕ್ಕಂದಿನಲ್ಲೇ ನನ್ನ ತಂದೆಯನ್ನು ಕಳೆದುಕೊಂಡೆ. ನನ್ನ ತಾಯಿ ನನ್ನನ್ನು ಓದಿಸಿ, ನಿಮ್ಮ ಮುಂದೆ ನಿಲ್ಲಲು ಕಾರಣರಾಗಿದ್ದಾರೆ. ಆದ್ದರಿಂದ ದೇಶದಲ್ಲಿ ಹೆಣ್ಣು ಮಕ್ಕಳು ಭ್ರೂಣ ಹತ್ಯೆ ವಿರುದ್ಧ ಹೋರಾಡಬೇಕು. ಮಹಿಳೆಯರ ಮೇಲೆ ದೌರ್ಜನ್ಯ, ಶೋಷಣೆ ನಿಲ್ಲಬೇಕು. ಮಹಿಳೆಯರು ಪತ್ರಿಕೆಗಳನ್ನು ಓದುವ ಮೂಲಕ ಜ್ಞಾನ ಹೆಚ್ಚಿಸಿಕೊಂಡು ಜಾಗೃತರಾಗಬೇಕು. ನಿಮ್ಮ ಮಕ್ಕಳನ್ನು ಐ.ಎ.ಎಸ್, ಕೆ.ಎ.ಎಸ್. ಅಧಿಕಾರಿಗಳನ್ನಾಗಿ ಮಾಡಿ, ಸಮಾಜದ ಮುಖ್ಯವಾಹಿನಿಗೆ ತನ್ನಿರಿ ಎಂದರು.

ಶಾಸಕ ಶ್ರೀವತ್ಸ ಮಾತನಾಡಿ, ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ನಾವು ಅಂದುಕೊಂಡಂತೆ ದೇಶ ಅಭಿವೃದ್ಧಿಯಾಗಿಲ್ಲ. ಕೇಂದ್ರ ಸರ್ಕಾರ ಮಹಿಳೆಯರಿಗೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು, ಆ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ತರಬೇತಿಗಳನ್ನು ಪಡೆದುಕೊಂಡು ಸ್ವಾವಲಂಬಿಗಳಾಗಿ ಬದುಕಿ ಎಂದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ವಲಯದ ಆಯುಕ್ತ ಹೆಚ್. ನಾಗರಾಜು ನಗರಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯಮೂರ್ತಿ, ಜ್ಞಾನ ಜ್ಯೋತಿ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಎಂ.ಎಸ್. ಹೇಮಾ ಉಪಸ್ಥಿತರಿದ್ದರು.

ಛತ್ತೀಸ್‌ಗಢ ವಿಧಾನಸಭೆಯ ಸ್ಪೀಕರ್ ಆಗಿ ರಮಣ್ ಸಿಂಗ್ ಆಯ್ಕೆ



ರಾಯ್‌ಪುರ, ಡಿ.19– ಬಿಜೆಪಿಯ ಹಿರಿಯ ಶಾಸಕ ಹಾಗೂ ಛತ್ತೀಸ್‌ಗಢ ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಅವರು ಮಂಗಳವಾರ ರಾಜ್ಯ ವಿಧಾನಸಭೆಯ ಸ್ಪೀಕರ್ ಆಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹೊಸ ವಿಧಾನಸಭೆಯ ಮೊದಲ ಅಧಿವೇಶನ ಇಂದಿನಿಂದ ಆರಂಭವಾಗಿದ್ದು, ಕಲಾಪ ಆರಂಭವಾಗುತ್ತಿದ್ದಂತೆ ಹಂಗಾಮಿ ಸ್ಪೀಕರ್ ರಾಮ್‌ವಿಚಾರ್ ನೇತಮ್ ಅವರು ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರು ಹಾಗೂ ಜಿಜಿಪಿಯ ಒಬ್ಬ ಶಾಸಕರಿಗೆ ಪ್ರಮಾಣ ವಚನ ಬೋಧಿಸಿದರು.

ವರುಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪರಿಶ್ರಮ

ಜನತೆಗೆ ಮಾಜಿ ಶಾಸಕ ಡಾ. ಯತೀಂದ್ರ ಭರವಸೆ



ಮೈಸೂರು,ಡಿ.19(ಎಂಟಿವೈ)– ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಮೂಲಕ ವರುಣ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಮಾಡಲು ಶ್ರಮಿಸುವುದಾಗಿ ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ವರುಣ ಕ್ಷೇತ್ರದ ಯಡಕೊಳ, ಅಂಚೆಹುಂಡಿ, ಶ್ರೀನಿವಾಸಪುರ, ದೇವೇಗೌಡನಹುಂಡಿ, ಕಡವೇಕಟ್ಟೆ ಹುಂಡಿ, ರಂಗನಾಥಪುರ, ಸಿದ್ದರಾಮಯ್ಯನಹುಂಡಿ, ಮುದ್ದೇಗೌಡನಹುಂಡಿ, ಕುಪ್ಪೇಗಾಲ, ಹೊಸಹಳ್ಳಿ ಗ್ರಾಮದಲ್ಲಿ ಕಂದಾಯ ಅದಾಲತ್ ನಡೆಸಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಈ ವೇಳೆ ರಂಗನಾಥಪುರದಲ್ಲಿ ಗ್ರಾಮಸ್ಥರನ್ನುದ್ದೇಶಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ಸಮುದಾಯ ಭವನ, ದೇವಾಲಯ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿದೆ. ಕ್ಷೇತ್ರದ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಡಿಸಲು ಪ್ರಯತ್ನಿಸುತ್ತೇವೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿರಲಿಲ್ಲ. ಆ ಕಾರಣದಿಂದ ಕೆಲವೆಡೆ ಸಮಸ್ಯೆಗಳಿರುವುದನ್ನು ಗುರುತಿಸಲಾಗಿದೆ. ಕ್ಷೇತ್ರದ ಜನರ ಆಶೀರ್ವಾದದಿಂದ ಸಿದ್ದರಾಮಯ್ಯರವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ. ಮೊದಲ ಅವಧಿಯಲ್ಲೂ ಅತ್ಯುತ್ತಮ ಕಾರ್ಯಕ್ರಮಗಳನ್ನು ಜಾರಿಗೊಳಿಸಿ, ರಾಜ್ಯದ ಬಡಜನರಿಗೆ ನೆರವಾಗಿದ್ದರು.

ಈ ಬಾರಿಯೂ ಈಗಾಗಲೇ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಕೋಟ್ಯಾಂತರ ಜನರಿಗೆ ನೆರವಾಗಿದ್ದಾರೆ. ವರುಣ ಕ್ಷೇತ್ರವನ್ನು ಈ ಅವಧಿಯಲ್ಲಿ ಸಮಗ್ರವಾಗಿ ಅಭಿವೃದ್ಧಿ ಮಾಡಲಿದ್ದಾರೆ. ಸರ್ಕಾರದ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಕೆ.ಎನ್.ವಿಜಯ್, ಆಪ್ತ ಸಹಾಯಕರಾದ ಶಿವಸ್ವಾಮಿ, ಪ್ರದೀಪ್‌ಕುಮಾರ್, ಮುಖಂಡರಾದ ಪುಟ್ಟಣ್ಣ, ಕೆಂಪೀರಯ್ಯ, ಬಸವರಾಜು, ಎಂ.ಟಿ.ರವಿಕುಮಾರ್, ಮಂಜುಳಾ ಮಂಜುನಾಥ್, ಸಿದ್ದರಾಮು, ಶಿವಸ್ವಾಮಿ, ಮಾರ್ಬಳ್ಳಿ ಕುಮಾರ್, ಹಿನಕಲ್ ಉದಯ್, ಗ್ರಾಮದ ಮುಖಂಡರು, ಅಧಿಕಾರಿಗಳು ಪಾಲ್ಗೊಂಡಿದ್ದರು.

ಚಿರತೆ ದಾಳಿಗೆ ಕರು ಬಲಿ

ಮಲ್ಕುಂಡಿ, ಡಿ.19– ಚಿರತೆಯೊಂದು ದಾಳಿ ಮಾಡಿ ಕೊಟ್ಟಿಗೆಯಲ್ಲಿ ಕಟ್ಟಿಹಾಕಲಾಗಿದ್ದ ಕರುವೊಂದನ್ನು ಅರೆಬರೆ ತಿಂದು ಪರಾರಿಯಾಗಿರುವ ಘಟನೆ ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಹದೇವಸ್ವಾಮಿ ತಮ್ಮ ಕೊಟ್ಟಿಗೆಯಲ್ಲಿ ಕರುವನ್ನು ಕಟ್ಟಿಹಾಕಿ ನಿದ್ರೆಗೆ ಜಾರಿದ್ದರೆನ್ನಲಾಗಿದೆ. ರಾತ್ರಿ ದಾಳಿ ಮಾಡಿದ ಚಿರತೆ ಕರುವನ್ನು ಅರೆಬರೆ ತಿಂದು ಬಿಸಾಡಿ ಹೋಗಿದೆ. ಇದರಿಂದ ಗ್ರಾಮಸ್ಥರಲ್ಲಿ ಭಯ ಉಂಟಾಗಿದೆ. ರೈತರು ಬರಗಾಲದಲ್ಲೂ ಕಷ್ಟಪಟ್ಟು ಜಾನುವಾರುಗಳನ್ನು ಸಾಕುತ್ತಿದ್ದು, ಅದನ್ನೇ ನಂಬಿ ಜೀವನ ಸಾಗಿಸುತ್ತಿದ್ದಾರೆ. ಅದನ್ನು ಕಾಡುಪ್ರಾಣಿಗಳು ಬಿಡದೆ ಬಲಿ ಪಡೆಯುತ್ತಿವೆ. ಹೀಗಾದರೆ ರೈತರು ಜೀವನ ಸಾಗಿಸುವುದು ಹೇಗೆ? ಎಂಬ ಪ್ರಶ್ನೆಯಾಗಿದೆ ಅರಣ್ಯ ಅಧಿಕಾರಿಗಳು ತಕ್ಷಣ ಚಿರತೆಯನ್ನು ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ



ಮೈಸೂರಿನ ನಿವೇದಿತನಗರದ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಕರ್ಣಾಟಕ ಬ್ಯಾಂಕಿನ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಡಾ. ಅರುಣ್ ಅವರು ಮಂಗಳವಾರ ಬಿಡುಗಡೆಗೊಳಿಸಿದರು. ಈ ವೇಳೆ ಪಾಲಂದಿರ ಸೋಮಣ್ಣ, ಕುಟ್ಟಿಮಡ ಕಾರ್ಯಪ್ಪ, ಬೊಳ್ಳೆಪಂಡ ನಂಜಪ್ಪ, ಮಂದನೆರವಂಡ ನಾಣಯ್ಯ, ತಂಬುಕುತ್ತಿರ ಪಾವನ, ಮಾಚಿಮಂಡ ಸುಬ್ರಮಣಿ, ಸೀನಿಯರ್ ಮ್ಯಾನೇಜರ್ ಅಜಿತ್, ಬ್ರಾಂಚ್ ಮ್ಯಾನೇಜರ್ ಸುರೇಶ್ ಹಾಗೂ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಭಾರತೀಯರ ನಿರ್ಲಕ್ಷ್ಯದಿಂದಾಗಿ ಪವಿತ್ರ ಗ್ರಂಥಗಳು ವಿದೇಶಿಯರ ಪಾಲಾದವು

ಗ್ರಾಮೀಣ ಬ್ಯಾಂಕ್ ಮಾಜಿ ಅಧಿಕಾರಿ ಪ್ರಸನ್ನ ಪ್ರಕಾಶ್ ಅಭಿಮತ



ಮೈಸೂರು, ಡಿ.19(ಎಸ್‌ಪಿಎನ್)– ಸಂಶೋಧನಾ ಕ್ಷೇತ್ರದಲ್ಲಿ ವೇದ–ಉಪನಿಷತ್, ರಾಮಾಯಣ, ಮಹಾಭಾರತ ಹಾಗೂ ಸಂಸ್ಕೃತದ ಅನೇಕ ಗ್ರಂಥಗಳನ್ನು ಭಾರತೀಯರು ನಿರ್ಲಕ್ಷ್ಯ ಮಾಡಿದ್ದಕ್ಕೆ ಪ್ರಸ್ತುತ ಈ ಸಂಶೋಧನೆ ಜರ್ಮನಿ, ರಷ್ಯಾ ಕ್ಷೇತ್ರದ ಪಾಲಾಗಿವೆ ಎಂದು ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ಹಿರಿಯ ವ್ಯವಸ್ಥಾಪಕ ಪ್ರಸನ್ನ ಪ್ರಕಾಶ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಮೈಸೂರು ನೃತ್ಯ ವಿದ್ಯಾಪೀಠ ಹಾಗೂ ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್ ಸಹಯೋಗದೊಂದಿಗೆ ನಡೆದ ನೃತ್ಯಾರಾಧನೆ, ದಾಸಸ್ಮರಣೆ ಕಾರ್ಯಕ್ರಮದಲ್ಲಿ 'ಮಾತೃಭೂಮಿ' ವಿಷಯ ಕುರಿತು ಮಾತನಾಡಿದರು.

ಪ್ರಸ್ತುತ ಭಾರತೀಯ ಕಲೆಗಳಿಗೆ ಉತ್ತೇಜನ ನೀಡುವ ಅಗತ್ಯತೆ ಇದೆ. ಶತ ಶತಮಾನಗಳಿಂದ ವಿದೇಶಿಗರು ನಮ್ಮ ನೆಲದ ಮೇಲೆ ಆಕ್ರಮಣ ಮಾಡಿ, ನಮ್ಮ ಸಂಸ್ಕೃತಿಯನ್ನು ಹಾಳು ಮಾಡಿದ್ದರು. ಆದರೂ ನಮ್ಮ ಹಿರಿಯರು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದರು. ಇದು ಸಾಧ್ಯವಾಗಿದ್ದು, ನಮ್ಮ ನೆಲವನ್ನು ಮಾತೃಭೂಮಿಯನ್ನು ಗೌರವಿಸಿದ್ದರ ಫಲವಾಗಿ ನಮ್ಮ ಸಂಸ್ಕೃತಿ ಉಳಿದಿದೆ ಎಂದರು.

ನಾವು ಸಂಸ್ಕೃತವನ್ನು ನಿರ್ಲಕ್ಷಿಸಿದ ಪರಿಣಾಮ ಈ ನೆಲದ ಸಂಸ್ಕೃತಿ ಉಳಿವಿಗೆ ಹಿನ್ನಡೆಯಾಗಿದೆ. ಇನ್ನಾದರೂ ಇಂದಿನ ಪೀಳಿಗೆಗೆ ರಾಮಾಯಣ, ಮಹಾಭಾರತ, ವೇದ–ಉಪನಿಷತ್‌ಗಳ ಕಲಿಕೆಗೆ ಪ್ರಾಮುಖ್ಯತೆ ನೀಡಬೇಕು ಎಂದು ಪೋಷಕರಲ್ಲಿ ಮನವಿ ಮಾಡಿದರು.

ಭಾರತ ಎಂದರೆ ಭಾವ, ರಾಗ, ತಾಳ ಎಂದು ಎಲ್ಲರೂ ಭಾವಿಸಿದ್ದೇವೆ. ಅದೇ ರೀತಿ ಶರಣರು, ದಾಸರು, ದಾರ್ಶನಿಕರು ಈ ನೆಲವನ್ನು ಮಾತೃಭೂಮಿ ಎಂದು ಗೌರವಿಸಿರುವುದಕ್ಕೆ ವಿಶ್ವದಲ್ಲೇ ನಮ್ಮ ಸಂಸ್ಕೃತಿಗೆ ವಿಶೇಷ ಅರ್ಥ, ಗೌರವ ಲಭಿಸುತ್ತಿದೆ ಎಂದರು.

ಈ ವೇಳೆ ನೃತ್ಯ ವಿದ್ಯಾಪೀಠದ ಸಬ್ ಜೂನಿಯರ್, ಜೂನಿಯರ್ ಹಾಗೂ ಸೀನಿಯರ್ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿನಿಯರಿಂದ ಭರತನಾಟ್ಯ ಪ್ರದರ್ಶಿಸಿ, ಪ್ರೇಕ್ಷಕರ ಮನ ಸೆಳೆದರು.

ಈ ವೇದಿಕೆಯಲ್ಲಿ ನಂದಿನಿ ನೃತ್ಯಾಲಯ (ಟ್ರಸ್ಟ್) ನಿರ್ದೇಶಕ ವಿದ್ವಾನ್ ಕಣ್ಣನ್ ರಾಮಾನುಜಂ, ಹಾಸನ ಜಿಲ್ಲೆಯ ಹೊಳೆನರಸೀಪುರದ ಸ್ವರ್ಣ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲೆ ಶೋಭಾ ಬಾಲಕೃಷ್ಣ, ಎಲ್ ಅಂಡ್ ಟಿ. ಟೆಕ್ನಾಲಜಿ ಸರ್ವೀಸಸ್ ವ್ಯವಸ್ಥಾಪಕ ಜಿ.ಕೆ.ಕಮಲ ಉಪಸ್ಥಿತರಿದ್ದರು.

ಸಂಘಟಿತರಾಗಿ ಹೋರಾಡದಿದ್ದರೆ ಮಹಿಳೆಯರಿಗೆ ಉಳಿಗಾಲವಿಲ್ಲ

● ಗಾರ್ಮೆಂಟ್ಸ್ ಲೇಬರ್ ಯೂನಿಯನ್ ರಾಜ್ಯಾಧ್ಯಕ್ಷೆ ರುಕ್ಮಿಣಿ ಅಭಿಪ್ರಾಯ ● ಮೈಸೂರು ಕಾಂಗ್ರೆಸ್ ಭವನದಲ್ಲಿ ಕಾರ್ಮಿಕ ಎಂಬ ಸೂರ್ಯ ರಕ್ಷಣೆ ಮತ್ತು ಹೊಣೆ ಕುರಿತ ಸಮ್ಮೇಳನ

ಮೈಸೂರು, ಡಿ.19(ಬಿಎಲ್‌ಯು)– ಸರ್ಕಾರ ಹಾಗೂ ಮಾಲೀಕರಿಂದ ನ್ಯಾಯಯುತವಾಗಿ ಸಿಗಬೇಕಾದ ಸವಲತ್ತು ಪಡೆಯಲು ಸಂಘಟಿತರಾಗಿ ಹೋರಾಟ ಮಾಡದಿದ್ದರೆ ಮಹಿಳೆಯರಿಗೆ ಉಳಿಗಾಲವಿಲ್ಲ ಎಂದು ಕರ್ನಾಟಕ ರಾಜ್ಯ ಗಾರ್ಮೆಂಟ್ಸ್ ಲೇಬರ್ ಯೂನಿಯನ್ ರಾಜ್ಯಾಧ್ಯಕ್ಷೆ ವಿ.ಪಿ.ರುಕ್ಮಿಣಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗ ಹಾಗೂ ಜಿಲ್ಲಾ ಕಾನೂನು ವಿಭಾಗ ಜಂಟಿಯಾಗಿ ಆಯೋಜಿಸಿದ್ದ ಕಾರ್ಮಿಕ ಎಂಬ ಸೂರ್ಯ ರಕ್ಷಣೆ ಮತ್ತು ಹೊಣೆ ಕುರಿತ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಶೇಕಡ 75 ರಷ್ಟು ದುಡಿಯುವ ವರ್ಗಕ್ಕೆ ನ್ಯಾಯಯುತವಾಗಿ ಸಿಗಬೇಕಾದ ಸವಲತ್ತು ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಆದರೆ ಹೋರಾಟದ ಮೂಲಕ ಸವಲತ್ತು ಪಡೆಯಲು ಮಹಿಳೆಯರು ಸಂಘಟಿತರಾಗಿಲ್ಲ. ಹಾಗಾಗಿ ನಮ್ಮ ಬೇಡಿಕೆಗಳು ಈಡೇರಿಲ್ಲ. ಆದ ಕಾರಣ ದುಡಿಯುವ ಮಹಿಳಾ ವರ್ಗ ಸಂಘಟಿತರಾಗಿ ಹೋರಾಟ ಮಾಡಬೇಕು. ಇಲ್ಲದಿದ್ದರೆ ಮಹಿಳೆಯರಿಗೆ ಉಳಿಗಾಲವಿಲ್ಲ ಎಂದು ಹೇಳಿದರು.

ದೊಡ್ಡ ಪ್ರಮಾಣದ ದೇಶೀಯ ಹಾಗೂ ಬಹು ರಾಷ್ಟ್ರೀಯ ಕಂಪನಿಗಳು ಗಟ್ಟಿಯಾಗಿ ನೆಲೆಯೂರಿವೆ. ತಮಗಿರುವ ಪ್ರಭಾವದಿಂದ ಆ ಕಂಪನಿಗಳು ದೇಶದ ಕಾನೂನು ಪಾಲಿಸುತ್ತಿಲ್ಲ. ಇದರಿಂದ ನ್ಯಾಯಯುತವಾಗಿ ನೀಡಬೇಕಾದ ಸವಲತ್ತು ನೀಡದೆ ವಂಚಿಸುತ್ತಿವೆ. ಆಳುವ ಸರ್ಕಾರ ಕೂಡ ನಮ್ಮ ಪರವಾಗಿಲ್ಲ ಎಂದು ರುಕ್ಮಿಣಿ ಆರೋಪಿಸಿದರು.

ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಕಾರ್ಮಿಕರ ಪರವಾಗಿ ನಿಲ್ಲಲಿಲ್ಲ. ಬದಲಿಗೆ ಮಾಲೀಕರಿಗೆ ಅನುಕೂಲವಾಗುವ ಬಹಳಷ್ಟು ಕಾನೂನು ನಿಯಮ ಬದಲಾವಣೆ ಮಾಡಿತು ಎಂದು ದೂರಿದರು.

ಆದರೆ ಈಗಿನ ಸಿದ್ದರಾಮಯ್ಯ ಸರ್ಕಾರ ಮಹಿಳೆಯರ ಪರವಾಗಿ ಗ್ಯಾರಂಟಿ ಯೋಜನೆ ರೂಪಿಸಿದೆ. ಪಂಚ ಗ್ಯಾರಂಟಿಯಿಂದ ತಿಂಗಳಿಗೆ ಮಹಿಳೆಯರಿಗೆ ಕನಿಷ್ಠ 6 ಸಾವಿರ ರೂಪಾಯಿ ಸಿಗಲಿದೆ ಆದ ಕಾರಣ ಯಾವ ರೀತಿಯ ಕೇಂದ್ರ ಸರ್ಕಾರ ಅಧಿಕಾರಕ್ಕೆ ತರಬೇಕೆಂದು ಗಂಭೀರವಾಗಿ ಯೋಚಿಸಿ ಎಂದು ರುಕ್ಮಿಣಿ ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಸಂಘದ ರಾಜ್ಯಾಧ್ಯಕ್ಷ ಪ್ರವೋದ್ ಚಿಕ್ಕಮಣ್ಣೂರು, ಅಂಬಾನಿ, ಅದಾನಿ ಹೇಳಿದಂತೆ ಕಾರ್ಮಿಕ ಕಾಯ್ದೆಗಳು ರೂಪುಗೊಳ್ಳುತ್ತಿವೆ. ಇದರಿಂದ ಹಲವು ಕಾರ್ಮಿಕ ವಿರೋಧಿ ನೀತಿಗಳು ಜಾರಿಗೆ ಬಂದಿವೆ. ಇದರಿಂದ ಕಾರ್ಮಿಕರ ಬದುಕು ಕತ್ತಿ ಮೇಲಿನ ನಡಿಗೆಯಂತಾಗಿದೆ ಎಂದು ದೂರಿದರು.

ರಾಜ್ಯದ ಪ್ರಗತಿಪರ ಹಾಗೂ ಜಾತ್ಯಾತೀತ ಕಾರ್ಮಿಕ ಸಂಘಟನೆಗಳು ಒಗ್ಗೂಡುವ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ರೂಪಿಸಬೇಕಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಇದೇ ವೇಳೆ ಅಭಿಪ್ರಾಯಪಟ್ಟರು.

ರಾಜ್ಯ ಕಾರ್ಮಿಕ ವಿಭಾಗದ ಉಪಾಧ್ಯಕ್ಷೆ ಹರಣಿ ಗೌಡ, ಜಿಲ್ಲಾ ಕಾನೂನು ವಿಭಾಗದ ಅಧ್ಯಕ್ಷ ತಿಮ್ಮಯ್ಯ, ಜಿಲ್ಲಾ ಕಾರ್ಮಿಕ ವಿಭಾಗದ ಅಧ್ಯಕ್ಷ ಮಂಜು ಕೋಟೆ, ನಗರ ಕಾರ್ಮಿಕ ವಿಭಾಗದ ಅಧ್ಯಕ್ಷ ಇಷ್ತಿಯಾನ್, ಮುಖಂಡರಾದ ಎಡತಲೆ ಮಂಜುನಾಥ್, ಸಿದ್ದರಾಜು, ಶಿವಪ್ರಸಾದ್, ಪಾಳ್ಯ ಸುರೇಶ್, ಗಂಗಾಧರ್, ಮನೋನ್ಮಣಿ, ಮೈತ್ರಿ, ಉತ್ತನಳ್ಳಿ ಶಿವಣ್ಣ, ಪುಟ್ಟಸ್ವಾಮಿ, ಸಿದ್ದರಾಜು, ರೇವಣ್ಣ, ಭರತ್, ಪ್ರೇಮ್, ಸುರೇಶ್ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

50 ಲಕ್ಷ ರೂ. ದರೋಡೆ ಪ್ರಕರಣದ 6 ಆರೋಪಿಗಳ ಬಂಧನ

- 3 ಲಕ್ಷ ರೂ., ಕಾರು, ಪಿಕ್‌ಅಪ್ ವಾಹನ ವಶ
- ದೇವರಪುರದಲ್ಲಿ ಡಿ.9ರಂದು ನಡೆದಿದ್ದ ದರೋಡೆ



ಮಡಿಕೇರಿ, ಡಿ.19–ಗೋಣಿಕೊಪ್ಪ ಸಮೀಪದ ದೇವರಪುರದಲ್ಲಿ ಡಿ.9ರ ರಾತ್ರಿ ವಾಹನ ಅಡ್ಡಗಟ್ಟಿ 50 ಲಕ್ಷ ರೂ. ದರೋಡೆ ನಡೆಸಿದ್ದ 6 ಆರೋಪಿಗಳನ್ನು ಕೊಡಗು ಪೊಲೀಸರು ಬಂಧಿಸಿ, 3 ಲಕ್ಷ ರೂ. ನಗದು, 1 ಕಾರು ಮತ್ತು ಒಂದು ಪಿಕ್‌ಅಪ್ ವಾಹನ ವಶಪಡಿಸಿಕೊಂಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ವಿರಾಜಪೇಟೆಯ ಆರ್ಜಿ ಗ್ರಾಮದ ನಾಗೇಶ್, ಬಿಟ್ಟಂಗಾಲದ ಪ್ರಶಾಂತ್, ಗಾಂಜಾ ರಮೇಶ್ ಮತ್ತು ಕ್ಲೀನರ್ ರಮೇಶ್, ಕೇರಳದ ತಲಚೇರಿಯ ಹಾರುನ್ ಹಾಗೂ ಜಂಶದ್ ಬಂಧಿತರು. ಈ ಪೈಕಿ ವಿರಾಜಪೇಟೆ ತಾಲೂಕಿನ ಮಲೆತಿರಿಕೆ ಬೆಟ್ಟದ ನಿವಾಸಿ ಪೆರೋಲ್ ದಿನೇಶ್ ಪ್ರಮುಖ ಆರೋಪಿಯಾಗಿದ್ದು, ಡಿ.9ರಂದು ಕೇರಳ ಮೂಲದ ಗುತ್ತಿಗೆದಾರ ಶಂಜದ್ ಎಂಬವರು 50 ಲಕ್ಷ ರೂ. ದರೋಡೆ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಮೈಸೂರಿನಲ್ಲಿ ಚಿನ್ನ ಮಾರಿ ಕೇರಳಕ್ಕೆ ಮರಳುತ್ತಿದ್ದ ವೇಳೆ 4 ವಾಹನಗಳಲ್ಲಿ ಆಗಮಿಸಿದ 10 ರಿಂದ 15 ಜನರ ತಂಡ ಶಂಜದ್ ಮೇಲೆ ಹಲ್ಲೆ ನಡೆಸಿ, ಕಾರು ಸಹಿತ ಹಣವನ್ನು ದರೋಡೆ ಮಾಡಿದ್ದರು ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ದೇವರಪುರ ದರೋಡೆ ಪ್ರಕರಣ ಬೇಧಿಸಲು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ವಿರಾಜಪೇಟೆ ಡಿವೈಎಸ್‌ಪಿ ಮಂಜಪ್ಪ, ಮೂವರು ವೃತ್ತ ನಿರೀಕ್ಷಕರು ಮತ್ತು 7 ಪೊಲೀಸ್ ಅಧಿಕಾರಿಗಳು ಸೇರಿ ಒಟ್ಟು 40 ಪೊಲೀಸರ ತಂಡ ನೇಮಿಸಲಾಗಿತ್ತು. ಕೇರಳ ಮೂಲದ ಹಾರುನ್ ಮತ್ತು ಜಂಶದ್ ಅವರು ಪ್ರಕರಣ ಸಂಬಂಧ ಬಂಧಿಸಲಾಗಿದೆ ಎಂದರು.

ಮತ್ತಷ್ಟು ಆರೋಪಿಗಳ ಬಂಧನ: ಈ ದರೋಡೆ ಪ್ರಕರಣ ಸಂಬಂಧ 10ಕ್ಕೂ ಹೆಚ್ಚು ಆರೋಪಿಗಳು ಪಾಲ್ಗೊಂಡಿರುವ ಶಂಕೆ ಇದ್ದು, ಎಲ್ಲರನ್ನೂ ಬಂಧಿಸಲಾಗುವುದು. ಪ್ರಕರಣದ ದೂರುದಾರ ಶಂಜದ್ ಮೊದಲಿಗೆ 750 ಗ್ರಾಂ ಚಿನ್ನ ಮಾರಾಟ ಮಾಡಿದ್ದ 50 ಲಕ್ಷ ರೂ. ಅನ್ನು ಕೊಂಡೊಯ್ಯುವಾಗ ದರೋಡೆ ನಡೆದೆ ಎಂದು ಹೇಳಿಕೆ ನೀಡಿದ್ದಾರೆ. ಆದರೆ, ಪೊಲೀಸರು ಮೈಸೂರಿನ ಅಶೋಕಪುರ ರಸ್ತೆಯ ಚಿನ್ನಾಭರಣ ವ್ಯಾಪಾರಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ವೇಳೆ 993 ಗ್ರಾಂ ಚಿನ್ನವನ್ನು 61 ಲಕ್ಷದ 70 ಸಾವಿರ ರೂ. ವ್ಯವಹರಿಸಿರುವುದಾಗಿ ಹೇಳಿದ್ದಾರೆ. ಈ ವಹಿವಾಟಿಗೆ ಯಾವುದೇ ದಾಖಲಾತಿ ಕೂಡ ನೀಡಿಲ್ಲದಿರುವುದು ವಿಚಾರಣೆಯಿಂದ ಬೆಳಕಿಗೆ ಬಂದಿದೆ ಎಂದು ಹೇಳಿದರು.

ವಿವಿಧ ಇಲಾಖೆಗೆ ಮಾಹಿತಿ: ಯಾವುದೇ ದಾಖಲಾತಿಗಳಿಲ್ಲದೇ ಚಿನ್ನ ಮಾರಾಟ ಹಾಗೂ ಲಕ್ಷಾಂತರ ರೂ. ವ್ಯವಹಾರ ನಡೆಸಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ 993 ಗ್ರಾಂ ಚಿನ್ನವನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ. ಈ ಕುರಿತು ಆದಾಯ ತೆರಿಗೆ ಇಲಾಖೆ, ಸೇಲ್ಸ್ ಟ್ಯಾಕ್ಸ್, ಕಸ್ಟಮ್ಸ್, ಜಿಎಸ್‌ಟಿ ಸೇರಿದಂತೆ ವಿವಿಧ ಇಲಾಖೆಗಳಿಗೆ ಮಾಹಿತಿ ನೀಡಲಾಗಿದೆ ಎಂದು ವಿವರಿಸಿದರು.

ಕೊಂಬೆ ಬಿದ್ದು ಕಾರ್ಮಿಕ ಮಹಿಳೆ ಸಾವು

ಸುಂಟಿಕೊಪ್ಪ, ಡಿ.19–ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಮರದ ಕೊಂಬೆ ಬಿದ್ದು ಕಾರ್ಮಿಕ ಮಹಿಳೆ ಮೃತಪಟ್ಟಿರುವ ಘಟನೆ ಮಂಗಳವಾರ ಸಮೀಪದ ಡಿ.ಪನ್ಯ ತೋಟದಲ್ಲಿ ನಡೆದಿದೆ.



ತೋಟದ ಲೈನ್ ಮನೆಯ ನಿವಾಸಿ ಕಾರ್ಮಿಕ ಬಪ್ಪಯ್ಯ ಅವರ ಪತ್ನಿ ಲಕ್ಷ್ಮೀ(48) ಮೃತ ಪಟ್ಟಿದ್ದು, ಈಕೆ ಎಂದಿನಂತೆ ಬೆಳಗ್ಗೆ 11.30ರಲ್ಲಿ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಮರದ ಕೊಂಬೆ ತಲೆಯ ಮೇಲೆ ಬಿದ್ದಿದೆ. ಪರಿಣಾಮ ಲಕ್ಷ್ಮೀ ಗಂಭೀರವಾಗಿ ಗಾಯಗೊಂಡಿದ್ದಾರೆ. ತಕ್ಷಣ ಈಕೆಯನ್ನು ಸುಂಟಿಕೊಪ್ಪ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ, ಮಡಿಕೇರಿ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದಾರೆ. ಈ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತರಿಗೆ ಪತಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ.

ಹತ್ಯೆ ಅಪರಾಧಿಗೆ ಜೀವಾವಧಿ ಶಿಕ್ಷೆ

ಮಡಿಕೇರಿ, ಡಿ.19–ಮಹಿಳೆಯನ್ನು ಕತ್ತಿಯಿಂದ ಕಡಿದು ಹತ್ಯೆ ಮಾಡಿದ ಅಪರಾಧಿಗೆ ಮಡಿಕೇರಿಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.



ಮದೆನಾಡು ಸಮೀಪದ ಜೋಡುಪಾಲ ಅಬ್ಬಿಕೊಲ್ಲಿಯಲ್ಲಿ ವಾಸವಿದ್ದ ಕೆ.ಕೆ.ಆನಂದ್ ಶಿಕ್ಷೆಗೆ ಗುರಿಯಾಗಿದ್ದು, ಈತ ಪಕ್ಕದ ಮನೆಯ ಹೊನ್ನಮ್ಮನನ್ನು ಕಾಲುದಾರಿ ವಿಚಾರವಾಗಿ 2019ರ ಡಿ.16ರಂದು ಕತ್ತಿಯಿಂದ ಹತ್ಯೆ ಮಾಡಿದ್ದ. ಈ ಘಟನೆ ಸಂಬಂಧ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೆ.ಕೆ.ಆನಂದ್ ವಿರುದ್ಧ ಪ್ರಕರಣ ದಾಖಲಾಗಿತ್ತು. ನಂತರ ಅಂದಿನ ವೃತ್ತನಿರೀಕ್ಷಕ ದಿವಾಕರ್ ಹಾಗೂ ಠಾಣಾಧಿಕಾರಿ ಹೆಚ್.ವಿ.ಚಂದ್ರಶೇಖರ್ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಹೆಚ್.ಸಿ.ಶ್ಯಾಮ್ ಪ್ರಸಾದ್ ಅವರು ಅಪರಾಧಿ ಕೆ.ಕೆ.ಆನಂದ್‌ಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದರು. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಕೆ.ಜಿ.ಅಶ್ವಿನಿ ವಾದ ಮಂಡಿಸಿದ್ದರು.

ಗನ್ ಕಾರ್ನಿವಲ್ ತೋಕ್ ನಮ್ಮೆ ಸಂಭ್ರಮ

ಕೊಳಕೇರಿಯ ನೂರಂಬಡ ನಾಡ್‌ನಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಆಯೋಜನೆ



ಮಡಿಕೇರಿ, ಡಿ.19–ವಿಶ್ವ ಸಂಸ್ಥೆಯ ಜಾಗತಿಕ ಅಲ್ಪಸಂಖ್ಯಾತ ಜನಾಂಗಗಳ ಹಕ್ಕುಗಳ ದಿನದ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ 14ನೇ ವರ್ಷದ 'ಗನ್ ಕಾರ್ನಿವಲ್ ತೋಕ್ ನಮ್ಮೆ' ನಾಪೋಕ್ಲುವಿನ ಕೊಳಕೇರಿಯ ನೂರಂಬಡ ನಾಡ್‌ನಲ್ಲಿ ಸಂಭ್ರಮದಿಂದ ನಡೆಯಿತು.

ಕೊಳಕೇರಿಯ ನೂರಂಬಡ ನಾಡ್‌ನ ರಮ್ಮಿ ನಾಣಯ್ಯ ಹಾಗೂ ರೀನಾ ನಾಣಯ್ಯ ಅವರ ಕಾವೇರಿ ಎಸ್ಟೇಟ್‌ನ ನದಿ ದಂಡೆಯಲ್ಲಿ ನಡೆದ ನಮ್ಮೆಯಲ್ಲಿ ಕೋವಿಗಳನ್ನು ಸಾಂಪ್ರದಾಯಿಕ ಹೂವುಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹಾಗೂ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರು ತೋಕ್ ನಮ್ಮೆಗೆ ಸಾಕ್ಷಿಯಾದರು.

ನಮ್ಮೆಯ ನೇತೃತ್ವ ವಹಿಸಿ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ, ಜನಪದೀಯ ಹಬ್ಬವಾಗಿ ತೋಕ್ ನಮ್ಮೆಯನ್ನು ಉತ್ಸಾಹದಿಂದ ಸಾರ್ವತ್ರಿಕವಾಗಿ ಆಚರಿಸುವ ಮೂಲಕ ಕೋವಿ ಹೊಂದುವ ಕೊಡವರ ಹಕ್ಕನ್ನು ಪ್ರತಿಪಾದಿಸಲಾಗುತ್ತಿದೆ. ಕೋವಿ ಕೊಡವ ಧಾರ್ಮಿಕ–ಜನಾಂಗೀಯ ಸಂಸ್ಕಾರವಾಗಿದೆ. ಇದೇ ಕಾರಣಕ್ಕೆ ಪ್ರಸ್ತುತ ಮತ್ತು ಭವಿಷ್ಯದಲ್ಲೂ ಈ ನಮ್ಮ ಹಕ್ಕು ಮುಂದುವರಿಯುತ್ತದೆ. ಕೊಡವರು ಬಂದೂಕನ್ನು ಹೊಂದಲು ವಿನಾಯಿತಿ ನೀಡಲಾಗಿದೆ. ನಮ್ಮ ಹಕ್ಕಿನ ಕುರಿತು ಇಡೀ ವಿಶ್ವಕ್ಕೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ 'ತೋಕ್ ನಮ್ಮೆ' ಯಂತಹ ಕಾರ್ಯಕ್ರಮ ಮೂಲಕ ಕೋವಿಗಳನ್ನು ಪ್ರದರ್ಶಿಸಿ ಹಕ್ಕನ್ನು ಶಾಶ್ವತಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಕೊಡವ ವಿಭೂಷಣ ಪ್ರಶಸ್ತಿ: ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ 9 ಸಾಧಕರಿಗೆ ತೋಕ್ ನಮ್ಮೆ ಪ್ರಯುಕ್ತ ಸಿಎನ್‌ಸಿ ಸಂಘಟನೆ ಕೊಡವ ವಿಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಪ್ಪನೆರವಂಡ ಕಿರಣ್ ಸುಬ್ಬಯ್ಯ, ನಿವೃತ್ತ ಪ್ರಾಂಶುಪಾಲ ಡಾ.ಚೌರಿರ ಜಗತ್ ತಿಮ್ಮಯ್ಯ, ಮಾಚೆಟ್ಟಿರ ಚೋಟು ಕಾವೇರಪ್ಪ ಆಕಾಶವಾಣಿಯ ನಿವೃತ್ತ ಉದ್ಘೋಷಕಿ ಕೂಪದಿರ ಶಾರದ ನಂಜಪ್ಪ, ಪ್ರಗತಿಪರ ಕೃಷಿ ಬಾಚರಣಿಯಂಡ ಹ್ಯಾರಿ ತಮ್ಮಯ್ಯ, ಪತ್ರಕರ್ತ ಕಾಯಪಂಡ ಶಶಿ ಸೋಮಯ್ಯ, ಐಮಂಡ ರೂಪೇಶ್ ನಾಣಯ್ಯ, ನಿವೃತ್ತ ಯೋಧ ಬಚ್ಚಮಂಡ ಬೆಲ್ಲು ಪೂವಪ್ಪ ಹಾಗೂ ನಂದಿನೆರವಂಡ ಟಿಪ್ಪು ಬಿದ್ದಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇದೇ ವೇಳೆ ಮಕ್ಕಳು, ಮಹಿಳೆಯರು ಹಾಗೂ ಪುರುಷರಿಗಾಗಿ ಗುಂಡು ಹಾರಿಸುವ ಸ್ಪರ್ಧೆ ನಡೆಯಿತು. ನಮ್ಮೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಬಂದೂಕುಗಳನ್ನು ಪ್ರದರ್ಶಿಸಿದ ಕೊಡವರು ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ತಮ್ಮ ಕೋವಿ ಹೊಂದುವ ಹಕ್ಕನ್ನು ಪ್ರತಿಪಾದಿಸಿದರು. ಅಲ್ಲದೆ ಕೊಡವ ಲ್ಯಾಂಡ್ ಪರ ಘೋಷಣೆ ಕೂಗಿದರು. ಕಲಿಯಂಡ ಮೀನಾ ಪ್ರಕಾಶ್, ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಬಾಚಮಂಡ ಕಸ್ತೂರಿ ಪೂವಪ್ಪ, ಪೆಮ್ಮುಡಿಯಂಡ ಇಂದಿರಾ ಅಪ್ಪಣ್ಣ, ಅಪ್ಪಚ್ಚಿರ ರೀನಾ ನಾಣಯ್ಯ, ಲೆಫ್ಟಿನೆಂಟ್ ಕರ್ನಲ್ ಪಾರ್ವತಿ, ನುದಿನೆರ ವಂಡ ನಿಶಾ ಅಚ್ಚಯ್ಯ, ಮಂದಪಂಡ ರಚನಾ ಮನೋಜ್, ಪುಲ್ಲೇರ ಸ್ವಾತಿ ಕಾಳಪ್ಪ, ನಂದೇಟಿರ ಕವಿತಾ, ಮಂದ ಪಂಡ ರಮ್ಯ ಸೂರಜ್, ಅಜ್ಜಿನಿಕಂಡ ಪ್ರೇಮಾ, ಅಪ್ಪನೆರವಂಡ ಸ್ವಾತಿ ಕಿರಣ್, ಚೋಳಪಂಡ ಜ್ಯೋತಿ ನಾಣಯ್ಯ, ಕಲಿಯಂಡ ಪ್ರಕಾಶ್, ಬಾಚಮಂಡ ರಾಜ ಪೂವಣ್ಣ, ಅಪ್ಪಚ್ಚಿರ ರಮ್ಮಿ ನಾಣಯ್ಯ, ಜಮ್ಮಡ ಮೋಹನ್, ಬಾಚಿರಾಣಿಯಂಡ ಚಿಪ್ಪಣ್ಣ, ಅಜ್ಜಿಕುಟ್ಟೀರ ಲೋಕೇಶ್, ಕಿರಿಯಮಾಡ ಶರಿನ್, ಚಂಬಂಡ ಜನತ್, ಚಿಯಕಪೂವಂಡ ಮುತ್ತಪ್ಪ, ಕಾಟುಮಣಿಯಂಡ ಉಮೇಶ್, ನೂರಾರು ಮಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಕೊಡವ ಲ್ಯಾಂಡ್ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಕೊಡವರು ಎಸ್‌ಟಿ ಟ್ಯಾಗ್ ಹೊಂದುವುದರಲ್ಲಿ ತಪ್ಪಿಲ್ಲ

ಮಡಿಕೇರಿ, ಡಿ.19–ಬುಡಕಟ್ಟು ಜನರು ದೇಶದ ಮಾಲೀಕರು, ತಮ್ಮ ಸಂಸ್ಕೃತಿ ಮತ್ತು ಸಂಸ್ಕಾರದ ಉಳಿವಿಗಾಗಿ ಕೊಡವರು ಎಸ್‌ಟಿ ಟ್ಯಾಗ್ ಹೊಂದುವುದರಲ್ಲಿ ತಪ್ಪಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಾಪೋಕ್ಲು ಕೊಳಕೇರಿಯ ನೂರಂಬಡ ನಾಡ್‌ನಲ್ಲಿ ನಡೆದ 'ಗನ್ ಕಾರ್ನಿವಲ್ ತೋಕ್ ನಮ್ಮೆ'ಯಲ್ಲಿ ಮಾತನಾಡಿದ ಅವರು, ಕೊಡವರು ತಮ್ಮತನವನ್ನು ಉಳಿಸಿಕೊಳ್ಳಲು ಎಸ್‌ಟಿ ಟ್ಯಾಗ್ ಅನ್ನು ಪಡೆಯಲೇಬೇಕು. ಬುಡಕಟ್ಟು ಜನರು ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಪ್ರಬಲರಾಗಿದ್ದಾರೆ. ಮೇಘಾಲಯ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್‌ನಲ್ಲಿ ರಾಜಕೀಯ ಮೀಸಲಾತಿಯ ಮೂಲಕ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಕೊಡವರು ಕೂಡ ತಮ್ಮ ಹಕ್ಕನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕು ಎಂದರು.

ಕೊಡಗನ್ನು ಚಿಕ್ಕದೆಂದು ಹೇಳಿಕೊಳ್ಳಬೇಡಿ, ಪಾಂಡೀಚೇರಿಯಲ್ಲಿ ಕೇವಲ 2 ಲಕ್ಷ ಜನಸಂಖ್ಯೆ ಇದ್ದು, ಕ್ಷೇತ್ರಗಳಲ್ಲಿ 10 ರಿಂದ 15 ಸಾವಿರ ಮತದಾರರು ಮಾತ್ರ ಇದ್ದಾರೆ. ಗೋವಾದಲ್ಲಿ ಕೂಡ ಇದೇ ಪರಿಸ್ಥಿತಿ ಇದೆ. ತಮ್ಮ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಉಳಿಸಿಕೊಳ್ಳಲು ಇವುಗಳೆಲ್ಲವು ಸ್ವತಂತ್ರವಾಗಿವೆ. ಕೊಡವರಿಗೆ ಎಸ್‌ಟಿ ಟ್ಯಾಗ್ ಬೇಕಿರುವುದು ಉದ್ಯೋಗ ಮೀಸಲಾತಿ ಅಥವಾ ಇನ್ಯಾವುದೋ ಕಾರಣಕ್ಕಾಗಿ ಅಲ್ಲ. ಬದಲಿಗೆ ಎಲ್ಲರು ಸರಿಸಮಾನವಾಗಿ ನೋಡಲಿ, ಸಂಸ್ಕೃತಿ ಉಳಿಯಲಿ ಎನ್ನುವ ಕಾರಣಕ್ಕಾಗಿ ಬೇಕಾಗಿದೆ. ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಸಹಕಾರ ಪಡೆದು ಎಸ್‌ಟಿ ಟ್ಯಾಗ್ ಪಡೆಯಿರಿ ಎಂದು ಬಿ.ಕೆ.ಹರಿಪ್ರಸಾದ್ ಸಲಹೆ ನೀಡಿದರು.

ಬೇತು ಗ್ರಾಮದ ಮಕ್ಕಿ ಶಾಸ್ತಾವು ಉತ್ಸವ



ನಾಪೋಕ್ಲು, ಡಿ.19–ಸಮೀಪದ ಬೇತು ಗ್ರಾಮದ ಮಕ್ಕಿ ಶಾಸ್ತಾವು ದೇವರ ವಾರ್ಷಿಕ ಉತ್ಸವ ಎರಡು ದಿನ ವಿಜೃಂಭಣೆಯಿಂದ ನೆರವೇರಿತು. ಮಂಗಳವಾರ ದೇವಾಲಯದ ಆವರಣದಲ್ಲಿ ನಡೆದ ಎರಡು ಪ್ರಮುಖ ಕೋಲಗಳೊಂದಿಗೆ ಉತ್ಸವ ಸಂಪನ್ನಗೊಂಡಿತು. ಮಕ್ಕಿ ಶಾಸ್ತಾವು ಸನ್ನಿಧಿಯಲ್ಲಿ ಬೆಳಗ್ಗೆ ಅಜ್ಜಪ್ಪ ಕೋಲ ಹಾಗೂ ಮಧ್ಯಾಹ್ನ ವಿಷ್ಣುಮೂರ್ತಿ ಕೋಲಗಳು ತಮ್ಮ ಸಾಂಪ್ರದಾಯಿಕ ವೇಷಭೂಷಣಗಳೊಂದಿಗೆ ಮೇಲೇರಿ (ಕೆಂಡಸೇವೆ) ಗಮನ ಸೆಳೆದವು. ಇದೇ ವೇಳೆ ಗ್ರಾಮಸ್ಥರು ಹಾಗೂ ಪರ ಊರಿನ ಅಧಿಕ ಭಕ್ತರು ಉತ್ಸವದಲ್ಲಿ ಪಾಲ್ಗೊಂಡು ದೇವರಿಗೆ ಹರಕೆ, ಸೇವೆಗಳನ್ನು ಸಮರ್ಪಿಸಿದರು.

ದೇವಾಲಯ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು ಉತ್ಸವದ ಅಂಗವಾಗಿ ಡಿ.16ರಂದು ಹರಕೆಯ ನಾಯಿ ಒಪ್ಪಿಸಲಾಯಿತು. ಡಿ.17ರಂದು ಕೊಟ್ಟಿ ಹಾಡಿ, ಡಿ.18ರಂದು ರಾತ್ರಿ ದೀಪಾರಾಧನೆ, ತೆರೆ ಹಾಗೂ ಮಂಗಳವಾರ ವಿವಿಧ ಭೂತಾರಾಧನೆ ಹಾಗೂ ಮೇಲೇರಿ ವಾರ್ಷಿಕ ಹಬ್ಬ ನಡೆಯಿತು. ದೇವಾಲಯದ ಅರ್ಚಕ ಮಕ್ಕಿ ದಿವಾಕರ ಪೂಜಾ ಕಾರ್ಯ ನೆರವೇರಿಸಿದರು.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

- ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅರಾಜಕತೆ ಸೃಷ್ಟಿ
- ಮಾಜಿ ಶಾಸಕ ಎನ್.ಮಹೇಶ್ ಆರೋಪ



ಚಾಮರಾಜನಗರ, ಡಿ.19–ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ರಾಜ್ಯದಲ್ಲಿ ಅರಾಜಕತೆಗೆ ದಾರಿ ಮಾಡಿಕೊಡಲಾಗಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಭಿತ್ತಿಪತ್ರ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು. ಮಾಜಿ ಶಾಸಕ ಎನ್.ಮಹೇಶ್, ಹೆಣ್ಣು ಭ್ರೂಣ ಹತ್ಯೆ, ಮಹಿಳೆಯನ್ನು ಬೀದಿಗೆ ಎಳೆದು ವಿವಸ್ತ್ರಗೊಳಿಸಿದ್ದು, ಶಾಲಾ ಮಕ್ಕಳಿಂದ ಶೌಚಗುಂಡಿ ಸ್ವಚ್ಛಗೊಳಿಸಿರುವ ಘಟನೆಗಳು ತಲೆತಗ್ಗಿಸುವಂತಾಗಿದೆ. ಬೆಳಗಾವಿಯಲ್ಲಿ ಅಧಿವೇಶನ ನಡೆಯುವಾಗಲೇ ಮಹಿಳೆಯನ್ನು ಬೀದಿಗೆ ಎಳೆದು ವಿವಸ್ತ್ರಗೊಳಿಸಿದ್ದು, ಮಂಡ್ಯದ ಆಲೆಮನೆಯಲ್ಲಿ ನೂರಾರು ಹೆಣ್ಣು ಭ್ರೂಣ ಹತ್ಯೆ ನಡೆದಿರುವುದು ಸರ್ಕಾರದ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಆರು ತಿಂಗಳಲ್ಲೇ ಗ್ಯಾರಂಟಿಗಳ ಕಥೆ ಗೊತ್ತಾಗಿದೆ. ರಾಜ್ಯ ದಿವಾಳಿ ಹಾಗೂ ಅರಾಜಕತೆಯತ್ತ ಸಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸುವ ಬಗ್ಗೆ ಅನುಮಾನ ಮೂಡಿದೆ. ಜನರ ನೋವು, ಸಂಕಷ್ಟಗಳಿಗೆ ಸ್ಪಂದಿಸದೇ ದರ್ಬಾರ್ ಮಾಡಲಾಗುತ್ತಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ದಲಿತರು, ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿವೆ ಎಂದು ದೂರಿದರು.

ಮಹಿಳೆಯ ವಿವಸ್ತ್ರಗೊಳಿಸಿರುವುದು ರಾಜ್ಯದ ಮರ್ಯಾದೆ ಹರಾಜಾಗಿದೆ. ಹೆಣ್ಣು ಭ್ರೂಣ ಹತ್ಯೆ ಮಾಡಿದವರ ವಿರುದ್ಧ ಯಾವುದೇ ಪ್ರಕರಣ ದಾಖಲಿಸದೆ ಆರೋಪಿಗಳಿಗೆ ರಕ್ಷಣೆ ನೀಡಲಾಗುತ್ತಿದೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಸಿದ್ದರಾಮಯ್ಯನವರೇ ವಿಧಾನಸಭೆಯಲ್ಲಿ ಎಲ್ಲದಕ್ಕೂ ದುಡ್ಡು ಎಲ್ಲಿಂದ ತರಲಿ, ಚುನಾವಣೆ ಸಂದರ್ಭದಲ್ಲಿ ಏನೋ ಹೇಳಿದ್ದೇವೆ, ಹೇಳಿದಂತೆ ನಡೆದುಕೊಳ್ಳಲು ದುಡ್ಡು ಬೇಡವಾ ಎಂದು ಹೇಳಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ನಿರಂಜನಕುಮಾರ್, ಎಸ್.ಬಾಲರಾಜು, ಬಿಜೆಪಿ ಜಿಲ್ಲಾಧ್ಯಕ್ಷ ನಾರಾಯಣಪ್ರಸಾದ್, ಪ್ರಧಾನ ಕಾರ್ಯದರ್ಶಿಗಳಾದ ಮಂಗಲ ಶಿವಕುಮಾರ್, ಕೆರೆಹಳ್ಳಿ ಮಹದೇವಸ್ವಾಮಿ, ಮುಖಂಡರಾದ ಎಂ.ರಾಮಚಂದ್ರ, ನೂರೊಂದು ಶೆಟ್ಟಿ, ವೆಂಕಟರಮಣಸ್ವಾಮಿ, ಕುಲಗಾಣ ಶಾಂತಮೂರ್ತಿ, ಜನಧ್ವನಿ ವೆಂಕಟೇಶ್, ನಾಗರಾಜೇಗೌಡ, ಬಾಲಸುಬ್ರಹ್ಮಣ್ಯಂ, ರಾಜು, ನಗರಸಭಾ ಸದಸ್ಯರಾದ ಶಿವರಾಜ್, ಮಮತಾ, ಕುಮುದಾ, ಸುರೇಶ್ ನಾಯಕ, ಮಹದೇವನಾಯಕ, ಕಲಾವತಿ, ಗೀತಾ, ರಾಜು, ಬಸವಣ್ಣ, ರಂಗಸ್ವಾಮಿ, ನಟರಾಜು. ಮೂಡ್ನಾಕೂಡು ಪ್ರಕಾಶ್, ವಿರಾಟ್ ಶಿವು, ವೇಣುಗೋಪಾಲ್, ಪ್ರಸನ್ನ, ಶಿವಣ್ಣ, ಸೂರ್ಯ, ಮಹದೇವಸ್ವಾಮಿ, ಮಂಜುನಾಥ್ ಭಾಗವಹಿಸಿದ್ದರು.

ಬ್ರಿಡ್ಜ್ ಅಗಲೀಕರಣಕ್ಕೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಡಿ.19–ನಗರದ ನಂಜನಗೂಡು ರಸ್ತೆಯ ಬ್ರಿಡ್ಜ್ ಅಗಲೀಕರಣಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಡುವಂತೆ ಆಗ್ರಹಿಸಿ ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಬ್ರಿಡ್ಜ್ ಬಳಿ ವೇದಿಕೆ ಅಧ್ಯಕ್ಷ ಸುರೇಶ್ ವಾಜಪೇಯಿ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಸರ್ಕಾರ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ವಿರುದ್ಧ ಘೋಷಣೆ ಕೂಗಿದರು. ಚಾಮರಾಜನಗರ–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ದಿನನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಆದರೆ, ಬ್ರಿಡ್ಜ್ ಅಗಲೀಕರಣ ಆಗಿಲ್ಲದಿರುವುದರಿಂದ ಅಪಘಾತಗಳು ಸಂಭವಿಸಿವೆ. ಆದ್ದರಿಂದ ಬ್ರಿಡ್ಜ್ ಅಗಲೀಕರಣಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದರು. ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಯಾವುದೇ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ. ಕೂಡಲೇ ಬ್ರಿಡ್ಜ್ ಅಗಲೀಕರಣ ಮಾಡದಿದ್ದರೆ ಕಪ್ಪು ಬಾವುಟ ಪ್ರದರ್ಶನ ಮಾಡಲಾಗುವುದು. ಶಾಸಕರು ಸೇತುವೆ ಅಗಲೀಕರಣಗೊಳಿಸಿ ಅಭಿವೃದ್ಧಿ ಮಾಡದಿದ್ದರೆ ಚಾಮರಾಜನಗರ ಬಂದ್‌ಗೆ ಕರೆ ನೀಡಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ವೇದಿಕೆಯ ಟೌನ್ ಅಧ್ಯಕ್ಷ ಆಟೋ ಮಂಜುನಾಥ್, ಬಂಗಾರ ನಾಯಕ, ಯಶವಂತ್, ಆಟೋ ಸೋಮೇಶ, ಮಾರ್ಕೆಟ್ ರಘು, ಸುನೀಲ್ ಇತರರು ಭಾಗವಹಿಸಿದ್ದರು.

ಶ್ರೀಗಂಧದ ತುಂಡುಗಳ ವಶ



ಹನೂರು, ಡಿ.19–ಪಟ್ಟಣದ ಮುತ್ತು ಗ್ಯಾರೇಜ್ ಮುಂಭಾಗ ನಿಂತಿದ್ದ ವಾಹನವೊಂದರಲ್ಲಿದ್ದ ಶ್ರೀಗಂಧದ ತುಂಡುಗಳನ್ನು ಅರಣ್ಯಾಧಿಕಾರಿಗಳು ಸೋಮವಾರ ವಶಪಡಿಸಿಕೊಂಡು, ಆರೋಪಿಗಳ ಪತ್ತೆ ಕಾರ್ಯ ಕೈಗೊಂಡಿದ್ದಾರೆ.

ಗ್ಯಾರೇಜ್ ಬಳಿ ನಿಂತಿದ್ದ ವಾಹನವನ್ನು (ಕೆಎ–22, ಎಂ–8108) ವಲಯ ಅರಣ್ಯಾಧಿಕಾರಿ ಪಿ.ಈ.ಪ್ರವೀಣ್, ಉಪವಲಯ ಅರಣ್ಯಾಧಿಕಾರಿಗಳಾದ ಕೆ.ಪ್ರಸಾದ್ ಹಾಗೂ ಹೆಚ್.ಬಿ.ಹೇಮಂತ್‌ಕುಮಾರ್ ಪರಿಶೀಲಿಸಿದಾಗ ಶ್ರೀಗಂಧದ ತುಂಡುಗಳು ಸಿಕ್ಕಿವೆ. ಆದರೆ, ಆರೋಪಿಗಳು ಪತ್ತೆಯಾಗಿಲ್ಲ. ಕಾರ್ಯಾಚರಣೆಯಲ್ಲಿ ಗಸ್ತು ಅರಣ್ಯಪಾಲಕರಾದ ಪರಶುರಾಮ ಭಜಂತ್ರಿ, ಅನಿಲ್‌ಕುಮಾರ್, ಪಿ.ಸುರೇಶ್ ಸಿಬ್ಬಂದಿ ಭಾಗವಹಿಸಿದ್ದರು.

ಮಲ್ಲಮ್ಮ ನಿಧನ

ಬೇಗೂರು(ಗುಂಡ್ಲುಪೇಟೆ), ಡಿ.19–ಸಮೀಪದ ಹೊರೆಯಾಲ ಗ್ರಾಮದ ನಿವಾಸಿ ಮಲ್ಲಮ್ಮ (96) ಸೋಮವಾರ ರಾತ್ರಿ ನಿಧನರಾದರು.



ಮೃತರು ತಾಪಂ ಮಾಜಿ ಸದಸ್ಯ ನೀಲಕಂಠಪ್ಪ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಜಮೀನಿನಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಿತು.

ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್, ಮುಖಂಡರಾದ ಹಂಗಳ ನಂಜಪ್ಪ ಕಬ್ಬಳ್ಳಿ ಮಹೇಶ್, ಎಪಿಎಂಸಿ ಸದಸ್ಯ ರಂಗಪುರ ನಾಗರಾಜು, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಬಸವರಾಜು, ಕಾಂಗ್ರೆಸ್ ಮುಖಂಡ ಕಮರಳ್ಳಿ ಕುಮಾರ್, ದೊಡ್ಡಹುಂಡಿ ನಾಗೇಂದ್ರ, ಜಗದೀಶ್, ಕುರುಬರಹುಂಡಿ ಲೋಕೇಶ್, ನಂದಿನಿ ಮಿಲ್ಕ್ ಪಾರ್ಲರ್ ಹೆಚ್.ವಿ. ನಾಗೇಶ, ಗಂಗಾಧರಪ್ಪ, ಕೆಂಪರಾಜು, ಆಟೋ ಮಹೇಶ್ ಅಂತಿಮ ದರ್ಶನ ಪಡೆದರು.

ಎಲ್ಲಾ ಧರ್ಮಗಳು ಶಾಂತಿ, ಪ್ರೀತಿಯ ಸಂಕೇತ: ಪುಟ್ಟರಂಗಶೆಟ್ಟಿ



ಚಾಮರಾಜನಗರ, ಡಿ.19–ಪ್ರಪಂಚದ ಎಲ್ಲಾ ಧರ್ಮಗಳು ಶಾಂತಿ, ನೆಮ್ಮದಿ ಹಾಗೂ ಸಾಮರಸ್ಯ ಜೀವನ ತತ್ವವನ್ನು ಸಾರುತ್ತವೆ. ಯೇಸು ಕ್ರಿಸ್ತನು ಸಹ ಶಾಂತಿ ಪ್ರಿಯನಾಗಿ, ಸಮಾಜಕ್ಕೆ ಒಳಿತು ಬಯಸುವ ಮೂಲಕ ಕ್ರೈಸ್ತ ಧರ್ಮವನ್ನು ಸ್ಥಾಪನೆ ಮಾಡಿದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಮಸಗಾಪುರದಲ್ಲಿ ಚಾಮರಾಜನಗರ ಪ್ರಾದೇಶಿಕ ಪರಿಷತ್ತು ವತಿಯಿಂದ ನಡೆದ ಏರಿಯಾ ಕ್ರಿಸ್ಮಸ್ ಸಮಾರಂಭ ಉದ್ಘಾಟಿಸಿ, ಏರಿಯಾದ ಧರ್ಮ ಗುರುಗಳನ್ನು ಅಭಿನಂದಿಸಿ ಮಾತನಾಡಿದ ಅವರು, ಯೇಸುಕ್ರಿಸ್ತ ಸಾರಿದ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ಯಾವುದೇ ಧರ್ಮ, ಜಾತಿ ಇರಲಿ ಮೊದಲು ನಾವು ಮಾನವರಾಗಿ ವರ್ತನೆ ಮಾಡೋಣ. ಈ ಭಾಗದಲ್ಲಿ ಕ್ರೈಸ್ತ ಸಮುದಾಯದವರು ಬಹಳ ಹೆಚ್ಚಿನ ರೀತಿಯಲ್ಲಿ ನನ್ನನ್ನು ಪ್ರೋತ್ಸಾಹಿಸಿ, ನಾಲ್ಕನೇ ಬಾರಿ ಗೆಲುವಿನಲ್ಲಿ ಶ್ರಮ ವಹಿಸಿದ್ದಾರೆ. ನಿಮ್ಮೆಲ್ಲರ ಪ್ರೀತಿ, ವಿಶ್ವಾಸ ಹೀಗೆ ಇರಲಿ. ಭಗವಾನ್ ಯೇಸು ಕ್ರಿಸ್ತ ನಿಮ್ಮೆಲ್ಲರ ಜೀವನದಲ್ಲಿ ಸುಖ ಶಾಂತಿ ನೆಮ್ಮದಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸಿದರು.

ಕೆಎಸ್‌ಡಿನ ಧರ್ಮಾಧ್ಯಕ್ಷ ರೈಟ್.ರೆವ. ಹೇಮಚಂದ್ರಕುಮಾರ್, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಉಮೇಶ್, ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ್ ಮಾತನಾಡಿದರು. ಸಿಎಸ್ಐಎಸ್‌ನ ಕಾರ್ಯದರ್ಶಿ ವಿಲಿಯ್ ಕ್ಯಾರಿ, ಖಜಾಂಚಿ ವೆಲ್ಸನ್ ಪಾಲಣ್ಣ, ಚಾಮರಾಜನಗರ ವಲಯ ಅಧ್ಯಕ್ಷ ಪ್ರಕಾಶ್ ದಾಸರು, ಉಪಾಧ್ಯಕ್ಷ ದೆಬೋರ್ ಶಾಂತ ಕುಮಾರಿ, ಕಾರ್ಯದರ್ಶಿ ತಾಪಂ ಮಾಜಿ ಸದಸ್ಯ ಎಸ್. ರಾಜು, ಖಜಾಂಚಿ ಶ್ಯಾಮಲ್ ಅಪ್ಪಾಜಿ ಎಲ್ಲಾ ಏರಿಯಾ ಸಭಾ ಪಾಲಕರು ಇದ್ದರು.

ಲಾರಿ ನಿಲ್ದಾಣಕ್ಕೆ ಸ್ಥಳ ನೀಡುವಂತೆ ಮನವಿ



ಚಾಮರಾಜನಗರ, ಡಿ.19– ನಗರದಲ್ಲಿ ಲಾರಿ ನಿಲ್ದಾಣಕ್ಕೆ ಸ್ಥಳಾವಕಾಶದ ಕೊರತೆ ಇದ್ದು, ನಿಲ್ದಾಣಕ್ಕೆ ಸೂಕ್ತ ಸ್ಥಳ ಕೊಡಿಸುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಚಾಮರಾಜನಗರದ ಲೋಕಲ್ ಲಾರಿ ಮಾಲೀಕರ ಸಂಘದ ಸದಸ್ಯರು ಮಂಗಳವಾರ ಮನವಿ ಮಾಡಿದರು.

ಸಂಘದ ಅಧ್ಯಕ್ಷ ಜೀಯಾವುಲ್ಲಾ ಮಾತನಾಡಿ, ಚಾಮರಾಜನಗರದ ಲಾರಿ ಮಾಲೀಕರಿಗೆ ಲಾರಿಗಳನ್ನು ನಿಲ್ಲಿಸಲು ನಿರ್ದಿಷ್ಟ ಜಾಗವಿಲ್ಲದೆ ರಸ್ತೆಬದಿಗಳಲ್ಲಿ ನಿಲ್ಲಿಸುತ್ತಿದ್ದೇವೆ. ಆದ್ದರಿಂದ ಸೂಕ್ತ ಸ್ಥಳ ಕಲ್ಪಿಸಿದರೆ, ಅಲ್ಲಿ ಲಾರಿ ಹಾಗೂ ಟೆಂಪೋಗಳನ್ನು ನಿಲ್ಲಿಸಲು ಅನುಕೂಲವಾಗುತ್ತದೆ ಎಂದು ಮನವಿ ಮಾಡಿದರು.

ನಂತರ ಲಾರಿ ಮಾಲೀಕರ ಸಂಘದ ಮನವಿಗೆ ಸ್ಪಂದಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ನಗರದ ಗಾಳಿಪುರ ರಸ್ತೆಗೆ ಹೊಂದಿಕೊಂಡಂತಿರುವ ರಿಂಗ್‌ರೋಡ್ ಬಳಿ ಸ್ಥಳ ಪರಿಶೀಲಿಸಿದರು. ನಂತರ ಮಾತನಾಡಿದ ಶಾಸಕರು, ಈ ಸ್ಥಳವನ್ನು ಲಾರಿ ಹಾಗೂ ಟೆಂಪೋಗಳನ್ನು ನಿಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ವ್ಯವಸ್ಥೆ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಇಸ್ರತ್ ಪಾಷಾ, ಸದಸ್ಯರು ಹಾಜರಿದ್ದರು.

ಡಿ.23, 24ರಂದು ದಾವಣಗೆರೆಯಲ್ಲಿ ವೀರಶೈವ–ಲಿಂಗಾಯತ ಅಧಿವೇಶನ



ಚಾಮರಾಜನಗರ, ಡಿ.19–ದಾವಣಗೆರೆಯಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆಯ 24ನೇ ಅಧಿವೇಶನ ಡಿ.23 ಮತ್ತು 24ರಂದು ನಡೆಯಲಿದ್ದು, ಈ ಅಧಿವೇಶನಕ್ಕೆ ಜಿಲ್ಲೆಯಿಂದ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷೆ ಡಾ.ಗೀತಾ ಮಹದೇವ ಪ್ರಸಾದ್ ತಿಳಿಸಿದರು.

1904ರಲ್ಲಿ ಹಾನಗಲ್ ಕುಮಾರ ಸ್ವಾಮೀಜಿ ಅವರಿಂದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆ ಸ್ಥಾಪನೆಗೊಂಡಿದ್ದು, ವೀರಶೈವ–ಲಿಂಗಾಯತ ಸಂಘಟನೆ ಮತ್ತು ಶ್ರೇಯೋಭಿವೃದ್ಧಿಗಾಗಿ ಶ್ರಮಿಸಲಾಗುತ್ತಿದೆ. ಮಹಾಸಭೆಯಲ್ಲಿ 1.75 ಲಕ್ಷಕ್ಕೂ ಹೆಚ್ಚು ಸದಸ್ಯರಿದ್ದು, ಸಮಾಜ ಸಂಘಟನೆಗೆ ಅತ್ಯಂತ ಮಹತ್ವ ಪಡೆದುಕೊಂಡಿದೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕವಾಗಿ ಸಮುದಾಯದ ಸಂಘಟನೆ ಉದ್ದೇಶದಿಂದ ಡಿ.23 ಮತ್ತು 24ರಂದು ದಾವಣಗೆರೆಯಲ್ಲಿ ಮಹಾ ಅಧಿವೇಶನ ಏರ್ಪಡಿಸಲಾಗಿದೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಧಿವೇಶನದಲ್ಲಿ ನಾಡಿನ ವಿವಿಧ ಮಠಾಧೀಶರು, ಸಾಹಿತಿಗಳು, ಕಲಾವಿದರು, ಮುಖಂಡರು, ಮಹಿಳಾ ಪ್ರತಿನಿಧಿಗಳು ಎಲ್ಲಾ ಜಿಲ್ಲೆಗಳ ಶರಣ–ಶರಣೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಅಧಿವೇಶನದಲ್ಲಿ 10 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ. ಜಿಲ್ಲೆಯಿಂದ ಬಸ್ ಹಾಗೂ ವಾಹನಗಳಲ್ಲಿ ಸಮುದಾಯದವರು ಹೆಚ್ಚು ತೆರಳಲಿದ್ದಾರೆ. ಮಹಿಳೆಯರಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಪ್ರಧಾನ ಕಾರ್ಯದರ್ಶಿ ಡಿ. ನಾಗೇಂದ್ರ, ತಾಲೂಕು ಅಧ್ಯಕ್ಷ ಹೊಸೂರು ನಟೇಶ್, ಜಿಲ್ಲಾ ನಿರ್ದೇಶಕರಾದ ಕಾಡಹಳ್ಳಿ ಮಧು, ಪ್ರಮೋದ್ ಇದ್ದರು.

ಮೂರನೇ ಪುಟದಿಂದ

ಕಟ್ಟೆಚ್ಚರ; ಸರ್ಕಾರ ಸೂಚನೆ

ರಾಜ್ಯ ಸರ್ಕಾರ ಇಂದಿಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಿದೆ. ಗಡಿ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ತಾಂತ್ರಿಕ ಸಲಹಾ ಸಮಿತಿ ನೀಡಿರುವ ಶಿಫಾರಸುಗಳನ್ನು ರಾಜ್ಯ ಸರ್ಕಾರ ಇಂದು ಆದೇಶದ ಮೂಲಕ ಹೊರಡಿಸಿ ಸಾರ್ವಜನಿಕರು ಕಟ್ಟುನಿಟ್ಟಾಗಿ ಪಾಲಿಸುವಂತೆ ಮನವಿ ಮಾಡಿದೆ. 60 ವರ್ಷ ಹಾಗೂ ಅದಕ್ಕೂ ಮೇಲ್ಪಟ್ಟವರು, ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು, ಗರ್ಭಿಣಿಯರು, ಎದೆ ಹಾಲುಣಿಸುವ ತಾಯಂದಿರು, ಹೊರಾಂಗಣ ಪ್ರದೇಶಗಳಿಗೆ ತೆರಳುವಾಗ ಮಾಸ್ಕ್ ಧರಿಸಬೇಕು.

ಅಗತ್ಯ ಗಾಳಿ-ಬೆಳಕಿನ ವ್ಯವಸ್ಥೆ ಇಲ್ಲದ ಹಾಗೂ ಹೆಚ್ಚು ಜನಸಂದಣಿ ಇರುವ ಪ್ರದೇಶಗಳಿಗೆ ತೆರಳದಂತೆ ಸಲಹೆ ಮಾಡಿದೆ. ಜ್ವರ, ಕೆಮ್ಮು, ನೆಗಡಿ, ಉಸಿರಾಟದ ತೊಂದರೆ ಇತ್ಯಾದಿ ಲಕ್ಷಣಗಳು ಕಂಡುಬಂದರೆ ತಕ್ಷಣವೇ ವೈದ್ಯಕೀಯ ಸಲಹೆ ಪಡೆಯಬೇಕು ಮತ್ತು ಮಾಸ್ಕ್ ಧರಿಸಬೇಕು. ವೈಯಕ್ತಿಕ ಸ್ವಚ್ಛತೆ, ಕೈಗಳನ್ನು ಆಗಾಗ್ಗೆ ಸೋಪಿನಿಂದ ತೊಳೆಯುವ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

ಆರೋಗ್ಯ ಸಮಸ್ಯೆಗಳು ಕಂಡುಬಂದರೆ ಮನೆಯಲ್ಲಿರುವುದು ಸೂಕ್ತ, ಅದರಲ್ಲೂ ಮಕ್ಕಳು ಮತ್ತು ಹಿರಿಯರನ್ನು ಇಂತಹ ಸಮಯದಲ್ಲಿ ಭೇಟಿ ಮಾಡಬೇಡಿ. ವಿದೇಶಗಳಿಗೆ ಪ್ರಯಾಣ ಸಂದರ್ಭದಲ್ಲಿ ಎಚ್ಚರಿಕೆಯಿಂದಿದ್ದು, ವಿಮಾನ ನಿಲ್ದಾಣದಲ್ಲಿ ಹಾಗೂ ವಿಮಾನದ ಒಳಗೆ ಮಾಸ್ಕ್ ಧರಿಸುವುದು, ಹೆಚ್ಚಿನ ಗಾಳಿ-ಬೆಳಕು ಇಲ್ಲದ ಮತ್ತು ಜನದಟ್ಟಣೆ ಸ್ಥಳಗಳಿಗೆ ತೆರಳದಿರುವುದು ಸೇರಿದಂತೆ ಇತರ ಅಗತ್ಯ ಮುಂಜಾಗ್ರತಾ ಕ್ರಮ ವಹಿಸುವಂತೆ ಸಲಹೆ ಮಾಡಿದೆ. ತಜ್ಞರ ಸಲಹೆಯಂತೆ ಇಂದು ಆರೋಗ್ಯ ಇಲಾಖೆ ಅಧಿಕಾರಿಗಳು ನಗರಪಾಲಿಕೆ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳ ಜೊತೆ ವಿಡಿಯೊ ಸಂವಾದ ನಡೆಸಿ ಕೋವಿಡ್ ಬಗ್ಗೆ ಮಾಹಿತಿ ಮತ್ತು ಸಲಹೆ ಸೂಚನೆಗಳನ್ನು ನೀಡಿದೆ. ಕೋವಿಡ್ ರೋಗಿಗಳಿಗೆ ವಿಶೇಷ ವಾರ್ಡ್ ಹಾಗೂ ಮೂಲಸೌಕರ್ಯಗಳನ್ನು ಸಿದ್ಧಪಡಿಸಿಕೊಳ್ಳಿ, ಮಿಗಿಲಾಗಿ ಆಕ್ಸಿಜನ್ ಕೊರತೆ ಆಗದಂತೆ ನೋಡಿಕೊಳ್ಳಿ ಹಾಗೂ ಸರ್ಕಾರದ ಮಾರ್ಗಸೂಚಿಯಂತೆ ಪರೀಕ್ಷಾ ಕಿಟ್‌ಗಳನ್ನು ಖರೀದಿಸುವಂತೆಯೂ ತಿಳಿಸಿದೆ.

ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ

ಬರುವ ಖಾಸಗಿ ವಾಹನಗಳನ್ನು ತಪಾಸಣೆ ಮಾಡಿ ಬಿಡಲಾಗುತ್ತಿದೆ. ಇಲಾಖೆ ಸೂಚನೆಯಂತೆ ತಪಾಸಣೆ ಮಾಡಲಾಗುತ್ತಿದೆ. ಕೋವಿಡ್ ಸೋಂಕಿನ ಲಕ್ಷಣ ಕಂಡುಬಂದರೆ ಅಂತಹವರಿಗೆ ವಿರಾಜಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ನಂತರ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಕಳಿಸಲಾಗುತ್ತದೆ. ಇಲ್ಲಿಯವರೆಗೆ ನಡೆದ ತಪಾಸಣೆಯ ಸಂದರ್ಭ ಯಾರಿಗೂ ಸೋಂಕಿನ ಲಕ್ಷಣ ಕಂಡುಬಂದಿಲ್ಲ ಎಂದು ತಿಳಿಸಿದರು.

ಕೇರಳ ಗಡಿಯಲ್ಲಿ ಅರಣ್ಯ ಇಲಾಖೆ ಕ್ರಮ: ಕೇರಳದಲ್ಲಿ ಕೊರೊನಾ ವೈರಸ್ ರೂಪಾಂತರ ತಳಿಯಿಂದ ಸೋಂಕು ಹರಡುತ್ತಿದ್ದು, ಇತ್ತ ಚಾಮರಾಜನಗರ ಗಡಿಯಲ್ಲಿ ಆರೋಗ್ಯ ಇಲಾಖೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ. ಹೀಗಾಗಿ ಆರೋಗ್ಯ ಇಲಾಖೆ ಸಿಬ್ಬಂದಿ ಮಾಡಬೇಕಿದ್ದ ಕೆಲಸವನ್ನು ಅರಣ್ಯ ಇಲಾಖೆ ಸಿಬ್ಬಂದಿ ಮಾಡುತ್ತಿದ್ದಾರೆ. ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಜಾಗೃತಿ ಕಾರ್ಯ ಆರಂಭಿಸಿದ್ದಾರೆ. ಕೇರಳದಿಂದ ಬರುವ ವಾಹನ ಸವಾರರಿಗೆ ಮಾಸ್ಕ್ ಹಾಕಲು ಸೂಚನೆ ನೀಡುತ್ತಿದ್ದಾರೆ.

ಬೇಗ ಕೊಡಿ ಪರಿಹಾರ

ಎನ್‌ಡಿಆರ್‌ಎಫ್‌ನಿಂದ 4663.12 ಕೋಟಿ ರೂ. ಇನ್‌ಪುಟ್ ಸಬ್ಸಿಡಿ ನೀಡಿ ಎಂದು ಕೋರಿದ್ದಾರೆ. ಪ್ರಧಾನಿ ಭೇಟಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಅವರು, ಇನ್‌ಪುಟ್ ಸಬ್ಸಿಡಿ ಜೊತೆಗೆ 12,577 ಕೋಟಿ ರೂ. ತುರ್ತು ಪರಿಹಾರ, 566.78 ಕೋಟಿ ರೂ. ಕುಡಿಯುವ ನೀರಿಗಾಗಿ, 363.68 ಕೋಟಿ ರೂ. ಜಾನುವಾರುಗಳ ಸಂರಕ್ಷಣೆಗಾಗಿ ಒದಗಿಸುವಂತೆ ಮನವಿ ಮಾಡಿದ್ದೇವೆ ಎಂದರು.

ಇದೆಲ್ಲದಕ್ಕೂ ಮಿಗಿಲಾಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅಧ್ಯಕ್ಷತೆಯ ಹೈ ಪವರ್ ಕಮಿಟಿ ಸಭೆಯನ್ನು ತುರ್ತಾಗಿ ನಡೆಸಿ, ಶೀಘ್ರ ಬರ ಪರಿಹಾರ ಒದಗಿಸಲು ಮನವಿ ಮಾಡಿದ್ದಾಗಿ ತಿಳಿಸಿದರು. ರಾಜ್ಯದಲ್ಲಿ ರೈತರ ದತ್ತಾಂಶವನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ದಾಖಲಿಸಲಾಗಿದ್ದು, ಪಿಎಂ-ಕಿಸಾನ್ ಯೋಜನೆಗೆ ಇದನ್ನು ಪರಿಗಣಿಸಲಾಗುತ್ತಿದೆ. ಇದರನ್ವಯ ರಾಜ್ಯದಲ್ಲಿ 83 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರಿದ್ದು, ಪರಿಹಾರ ವಿತರಣೆಗೆ ಈ ದತ್ತಾಂಶವನ್ನು ಪರಿಗಣಿಸುವಂತೆ ಮನವಿ ಮಾಡಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಬರಪೀಡಿತ ತಾಲೂಕುಗಳಲ್ಲಿ ಉದ್ಯೋಗದ ಮಾನವ ದಿನಗಳನ್ನು 100 ರಿಂದ 150 ದಿನಕ್ಕೆ ಹೆಚ್ಚಿಸಬೇಕು. ಭಾರತ ಸರ್ಕಾರದ ಬರ ಅಧ್ಯಯನ ತಂಡವು ಅಕ್ಟೋಬರ್ 4 ರಿಂದ 9ರವರೆಗೆ ರಾಜ್ಯಕ್ಕೆ ಭೇಟಿ ನೀಡಿ, ಬರ ಪರಿಸ್ಥಿತಿಯ ವರದಿ ಸಲ್ಲಿಸಿದೆ. ನಂತರದ ದಿನಗಳಲ್ಲಿ ಇನ್ನೂ 21 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಅಕ್ಟೋಬರ್ 20 ರಂದು ಕೇಂದ್ರ ಕೃಷಿ ಸಚಿವಾಲಯಕ್ಕೆ ಎನ್.ಡಿ.ಆರ್.ಎಫ್. ಅಡಿ 17,901.73 ಕೋಟಿ ರೂ. ಪರಿಹಾರ ಒದಗಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಪ್ರಧಾನಿ ನಮ್ಮ ಮನವಿಯನ್ನು ಸಮಾಧಾನದಿಂದ ಕೇಳಿದರು, ಅಮಿತ್ ಷಾ ಅವರಿಗೆ ಸೂಚನೆ ನೀಡಲು ಮನವಿ ಮಾಡಿದ್ದೇವೆ ಎಂದರು.

ಕುಡಿಯುವ ನೀರಿನ ಯೋಜನೆ : ಮೇಕೆದಾಟು, ಕುಡಿಯುವ ನೀರಿನ ಯೋಜನೆ ರಾಜ್ಯದ ಗಡಿಯ ಒಳಗೆ ನಿರ್ಮಾಣ ಆಗುವ ಯೋಜನೆ. ತಮಿಳುನಾಡು ಸರ್ಕಾರ ರಾಜಕೀಯ ಕಾರಣಕ್ಕೆ ತಕರಾರು ಮಾಡುತ್ತಿದೆ. ಈ ಯೋಜನೆಯಿಂದ ತಮಿಳುನಾಡಿಗೇ ಹೆಚ್ಚು ಅನುಕೂಲವಾಗಲಿದೆ. ನಮಗೆ ಕುಡಿಯುವ ನೀರಿನ ಜೊತೆಗೆ 400 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತದೆ. ವಿದ್ಯುತ್ ಉತ್ಪಾದನೆ ಬಳಿಕ ಉಳಿಯುವ ನೀರು ಸಹಾ ತಮಿಳುನಾಡಿಗೇ ಹರಿಯುತ್ತದೆ. ಇದರಿಂದಲೂ ಅವರಿಗೇ ಅನುಕೂಲವಾಗಲಿದೆ. ಮೇಕೆದಾಟು ಯೋಜನೆ ಪೂರ್ಣಗೊಂಡ ನಂತರ ಬೆಂಗಳೂರು ಮತ್ತು ರಾಮನಗರ ಜಿಲ್ಲೆಗೆ ಕುಡಿಯುವ ನೀರಿಗೆ ಅನುಕೂಲ ಆಗಲಿದೆ. ಆದ್ದರಿಂದ ಮೇಕೆದಾಟು ಯೋಜನೆಗೆ ಬೇಗ ಅನುಮತಿ ಕೊಡಿಸುವಂತೆ ಪ್ರಧಾನಿಗಳ ಒತ್ತಾಯಿಸಿದ್ದೇವೆ.

ಮಹದಾಯಿಗೂ ಅನುಮತಿಸಿ : ಮಹದಾಯಿ ವಿಚಾರದಲ್ಲಿ ಈಗಾಗಲೇ ಗೆಜೆಟ್ ಕೂಡ ಆಗಿದೆ, ಬೇರೆ ಅಡೆ ತಡೆ ಏನೂ ಇಲ್ಲ. ಪರಿಸರ ಸಚಿವಾಲಯದ ಕ್ಲಿಯರೆನ್ಸ್ ಮಾತ್ರ ಬಾಕಿ ಇದೆ. ಇದನ್ನು ಕೇಂದ್ರವೇ ಕೊಡಬೇಕು, ಇದುವರೆಗೂ ಕೊಟ್ಟಿಲ್ಲ. ಟೆಂಡರ್ ಕರೆದು ಅಂದಾಜು ಕೂಡ ಸಿದ್ಧವಾಗಿದೆ. ಕೇಂದ್ರ ಕ್ಲಿಯರೆನ್ಸ್ ಕೊಟ್ಟ ಕೂಡಲೇ ಕಾಮಗಾರಿ ಆರಂಭಿಸಲಾಗುವುದು. ಆದ್ದರಿಂದ ಬೇಗ ಅನುಮತಿ ಕೊಡಿಸುವಂತೆ ಕೋರಿದ್ದೇವೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಬಜೆಟ್‌ನಲ್ಲಿ 5,300 ಕೋಟಿ ರೂ. ಘೋಷಿಸಿದ್ದರು. ಈ ಘೋಷಣೆ ಆಧಾರದಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹಾ 5,300 ಕೋಟಿ ರೂ. ಘೋಷಿಸಿದ್ದರು. ಇವತ್ತಿನವರೆಗೂ ಒಂದು ರೂಪಾಯಿ ಕೂಡ ಬಂದಿಲ್ಲ. ಇದು ಕೇಂದ್ರ ಮತ್ತು ಹಿಂದಿನ ಬಿಜೆಪಿ ಸರ್ಕಾರದ ಕಮಿಟ್‌ಮೆಂಟ್. ನೀವೇ ಕೊಟ್ಟಿರುವ ಮಾತಿನಂತೆ ಹಣ ಬಿಡುಗಡೆ ಮಾಡಿ ಎಂದು ಒತ್ತಾಯಿಸಿದ್ದೇವೆ ಎಂದರು.

ಕೊನೆಗೂ ಸೆರೆ ಸಿಕ್ಕ ಚಿರತೆ

ಕಾರಣ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿ ಚಿರತೆ ಇರುವ ಮಾಹಿತಿ ತಿಳಿದಂದಿನಿಂದ ಶಾಲಾ ಆವರಣದಲ್ಲಿ ಓಡಾಡಲು ಭಯ ಪಡುತ್ತಿದ್ದರು. ಅಲ್ಲದೆ ವಿದ್ಯಾಶಾಲಾದಲ್ಲಿ ಸಾಕಿರುವ ಹಸುಗಳ ಮೇಲೂ ಚಿರತೆ ಎಲ್ಲಿ ದಾಳಿ ಮಾಡುವುದೋ ಎಂಬ ಆತಂಕವಿತ್ತು.

ಹಾಗಾಗಿ ಚಿರತೆ ಸೆರೆಗೆ ಕಾರ್ಯೋನ್ಮುಖರಾದ ಚಿರತೆ ಕಾರ್ಯಪಡೆಯ ಸಿಬ್ಬಂದಿ ಅಂದೇ ಬೋನಿಟ್ಟಿದ್ದರು. ಚಿರತೆಯ ಸೆರೆಗೆ ಬೋನಿನಲ್ಲಿ ಕುರಿ ಇರಿಸಲಾಗಿತ್ತು. ಜೊತೆಗೆ ಚಿರತೆ ಹೆಜ್ಜೆ ಗುರುತು ಇರುವ ಸ್ಥಳಗಳಲ್ಲಿ ಕ್ಯಾಮರಾ ಟ್ರ್ಯಾಪ್‌ಗಳನ್ನು ಅಳವಡಿಸಿದ್ದರು. ದಿನದ 24 ಗಂಟೆಯೂ ಚಿರತೆ ಸೆರೆಗೆ ಅರಣ್ಯ ಇಲಾಖೆಯವರು ರಾಮಕೃಷ್ಣ ವಿದ್ಯಾಶಾಲದಲ್ಲೇ ಮೊಕ್ಕಾಂ ಹೂಡಿದ್ದರು. ಆದರೆ, ವಿದ್ಯಾಶಾಲಾ ಆವರಣದಲ್ಲೇ ಸುಳಿದಾಡುತ್ತಿದ್ದರೂ ವಾರ ಕಳೆದರೂ ಚಿರತೆ ಬೋನಿನತ್ತ ಸುಳಿಯಲಿಲ್ಲ. ಆದರೆ ನಿನ್ನೆ ರಾತ್ರಿ ಸುಮಾರು 11.30 ಗಂಟೆಯಲ್ಲಿ ಬೋನಿನಲ್ಲಿದ್ದ ಕುರಿ ಭಕ್ಷಿಸುವ ಆಸೆಗೆ ಬಿದ್ದು ಕೊನೆಗೂ ಸೆರೆಯಾಗಿದೆ. ಸುಮಾರು 4 ವರ್ಷದ ಚಿರತೆ ದೃಢಕಾಯವಾಗಿದೆ.

ಚಿರತೆ ಕಾರ್ಯಪಡೆಯ ಆರ್‌ಎಫ್‌ಓ ಸಂತೋಷ್ ಹೂಗಾರ್, ಎಸಿಎಫ್ ಲಕ್ಷ್ಮಿಕಾಂತ ನೇತೃತ್ವದ ತಂಡ ಕೊನೆಗೂ ಚಿರತೆಯನ್ನು ಸೆರೆ ಹಿಡಿದಿದೆ. ನಿನ್ನೆ ರಾತ್ರಿಯೇ ಚಿರತೆಯನ್ನು ರಾಮಕೃಷ್ಣ ವಿದ್ಯಾಶಾಲಾದಿಂದ ಸಾಗಿಸಲಾಗಿದೆ. ಇದರಿಂದ ವಿದ್ಯಾಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

ರಾಮಕೃಷ್ಣ ವಿದ್ಯಾಶಾಲಾದಿಂದ ಚಿರತೆಯನ್ನು ನೇರವಾಗಿ ಅಶೋಕಪುರಂನ ಅರಣ್ಯ ಭವನಕ್ಕೆ ಕೊಂಡ್ಯೊಯ್ಯಲಾಗಿದೆ. ಅಲ್ಲಿ ಅರಣ್ಯ ಇಲಾಖೆಯಲ್ಲಿನ ಪಶು ವೈದ್ಯರು ಚಿರತೆಯ ಆರೋಗ್ಯ ತಪಾಸಣೆ ನಡೆಸಿದರು. ಅಲ್ಲಿಂದ ಕೂರ್ಗಳ್ಳಿಯ ಪ್ರಾಣಿಗಳ ಪುನರ್ವಸತಿ ಕೇಂದ್ರಕ್ಕೆ ತರಲಾಗಿದೆ. ಅಲ್ಲಿ ಚಿರತೆಗೆ ಮೈಕ್ರೋ ಚಿಪ್ ಅಳವಡಿಸಿ ಅಭಯಾರಣ್ಯಕ್ಕೆ ಬಿಡಲಾಗಿದೆ. ರಾಮಕೃಷ್ಣ ವಿದ್ಯಾಶಾಲಾದಲ್ಲಿ ಚಿರತೆ ಸೆರೆಯಾದರೂ ಭೀತಿ ಹೋಗಿಲ್ಲ. ಮತ್ತೊಂದು ಚಿರತೆ ಏನಾದರೂ ಇರಬಹುದೇ ಎಂದು ಅರಣ್ಯ ಇಲಾಖೆಯವರು ಇಂದು ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ಪರಿಶೀಲನೆ ನಡೆಸಿದರು. ಆದರೆ ಯಾವುದೇ ಸುಳಿವು ಸಿಗಲಿಲ್ಲ.

ಮೈಸೂರಿಗೆ ವನ್ಯಜೀವಿಗಳ ಪ್ರವೇಶ, ಬೋನು ಹೊಸದಲ್ಲ!

ಕೆಲ ವರ್ಷದ ಹಿಂದೆ ಎರಡು ಕಾಡಾನೆಗಳು ನಗರದ ಹೃದಯ ಭಾಗಕ್ಕೆ ದಾಳಿಯಿಟ್ಟು, ಎಟಿಎಂವೊಂದರ ಮುಂದೆ ಕಾರ್ಯನಿರತ ಸೆಕ್ಯೂರಿಟಿ ಗಾರ್ಡ್, ರಸ್ತೆ ಬದಿ ಕಟ್ಟಿ ಹಾಕಲಾಗಿದ್ದ ಹಸುವನ್ನು ಬಲಿ ಪಡೆದಿದ್ದವು. ಈ ಘಟನೆ ಮೈಸೂರು ನಗರವನ್ನೇ ತಲ್ಲಣಗೊಳಿಸಿತ್ತು. ಇದಾದ ನಂತರ ನಗರದ ಹೊರವಲಯದ ಕೈಗಾರಿಕಾ ಪ್ರದೇಶಗಳಲ್ಲಿ ಚಿರತೆ ಹಾವಳಿ ಪ್ರಾರಂಭವಾಯಿತು. ಇದೇ ಬಿಇಎಂಎಲ್ ಆವರಣದಲ್ಲಿ ಚಿರತೆಯೊಂದು ಸೆರೆ ಸಿಕ್ಕಿತ್ತು. ಇತ್ತೀಚೆಗೆ ಸಿಎಫ್‌ಟಿಆರ್‌ಐ ಬಳಿಗೂ ಚಿರತೆ ಕಾಣಿಸಿಕೊಂಡ ವಿಚಾರ ಸದ್ದು ಮಾಡಿತ್ತು. ಇವೆಲ್ಲದರ ಮಧ್ಯೆ ಮೈಸೂರಿಗೆ ಅನತಿ ದೂರದ ಮೈಸೂರು-ನಂಜನಗೂಡು ಗಡಿಭಾಗದ ಗ್ರಾಮಗಳಲ್ಲಿ ಹುಲಿರಾಯ ಹೊಂಚು ಹಾಕುತ್ತಿರುವುದು ಬೆಳಕಿಗೆ ಬಂದಿದೆ. ಅದರ ಸೆರೆಗೆ ವ್ಯಾಪಕ ಕಾರ್ಯಾಚರಣೆ ಕೈಗೊಂಡಿದ್ದರೂ ಇದುವರೆಗೆ ಫಲ ಸಿಕ್ಕಿಲ್ಲ.

ಮೈಸೂರಲ್ಲಿ 3 ದಿನಗಳ ಸಿರಿಧಾನ್ಯ ಮೇಳ ಆರಂಭ

ನೂರಾರು ಬಗೆಯ ಸಿರಿಧಾನ್ಯ, ತೆನೆಗಳು, ಸಾವಯವ ಕೃಷಿ ಉತ್ಪನ್ನ, ಸಸಿಗಳ ಪ್ರದರ್ಶನ-ಮಾರಾಟ






ಮೈಸೂರು, ಡಿ. 19 (ಆರ್‌ಕೆ)- ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ 3 ದಿನಗಳ ಸಿರಿಧಾನ್ಯ ಮೇಳ ಇಂದಿನಿಂದ ಆರಂಭವಾಗಿದೆ.

ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ ಆಯೋಜಿಸಿರುವ ಮೇಳವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಉದ್ಘಾಟಿಸಿದರು. ಈ ಸಂದರ್ಭ ಸಾವಯವ ಕೃಷಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮನುಷ್ಯನ ಆರೋಗ್ಯದಲ್ಲಿ ವ್ಯತ್ಯಾಸವಾಗುತ್ತಿರುವುದಕ್ಕೆ ರಾಸಾಯನಿಕ ಗೊಬ್ಬರ, ಕೀಟನಾಶಕ ಬಳಸಿ ಬೆಳೆದ ಆಹಾರ ಪದಾರ್ಥಗಳ ಸೇವನೆ ಕಾರಣವಾಗಿದೆ ಎಂದರು.

ಪೌಷ್ಟಿಕ ಆಹಾರ ಒದಗಿಸುವ ಸಾವಯವ ಕೃಷಿಯಿಂದ ಬೆಳೆದ ಸಿರಿಧಾನ್ಯಗಳೇ ಪ್ರಸ್ತುತ ನಾವು ಅನುಭವಿಸುತ್ತಿರುವ ಆರೋಗ್ಯ ಸಮಸ್ಯೆಗೆ ಪರಿಹಾರವಾಗಿದ್ದು, ಜನರಿಂದಲೂ ಬೇಡಿಕೆ ಬರುತ್ತಿರುವುದರಿಂದ ಸರ್ಕಾರ ಸಾವಯವ ಕೃಷಿ ಮತ್ತು ಸಿರಿಧಾನ್ಯ ಮಾರಾಟಕ್ಕೆ ಉತ್ತೇಜನ ನೀಡುತ್ತಿದೆ ಎಂದು ಅವರು ನುಡಿದರು.

ಪ್ರತಿ ಜಿಲ್ಲೆಯ 10,000 ಎಕರೆ ಪ್ರದೇಶದಲ್ಲಿ ಸಾವಯವ ಕೃಷಿ, ಸಿರಿಧಾನ್ಯ ಬೆಳೆಯಲು ಕೃಷಿ ಮತ್ತು ತೋಟಗಾರಿಕೆ ಮೂಲಕ ಸಹಾಯ ಧನ ನೀಡಲಾಗುತ್ತಿದ್ದು ರಾಸಾಯನಿಕ ಗೊಬ್ಬರ ಬಳಸದೇ ಬೆಳೆ ಬೆಳೆಯಲು ರೈತರು ಮುಂದಾಗಬೇಕು. ಸಿರಿಧಾನ್ಯಗಳ ದಾಸ್ತಾನು, ಸಂಸ್ಕರಣೆ ಹಾಗೂ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸರ್ಕಾರ ಯೋಜನೆಗಳನ್ನು ಜಾರಿಗೊಳಿಸಿದೆ ಎಂದ ಸಚಿವರು, ಸಂಘ-ಸಂಸ್ಥೆಗಳು, ರೈತ ಸಂಘಟನೆಗಳು ಸಾವಯವ ಕೃಷಿಗೆ ಪ್ರೋತ್ಸಾಹ, ಜಾಗೃತಿ ಮೂಡಿಸುವಂತೆ ಸಲಹೆ ನೀಡಿದರು.

ಅಧಿಕ ಪೋಷಕಾಂಶದಿಂದ ಸಮೃದ್ಧವಾಗಿರುವ ಸಿರಿಧಾನ್ಯಗಳನ್ನು ಹೆಚ್ಚು ನೀರಿಲ್ಲದ ಭೂಮಿಯಲ್ಲೂ ಬೆಳೆಯಬಹುದಾಗಿದೆ. ಪರಿಸರ ಮತ್ತು ಆರೋಗ್ಯಕ್ಕೆ ಪೂರಕವಾದ ಸಿರಿಧಾನ್ಯಗಳು ಮುಂದಿನ ಪೀಳಿಗೆಗೂ ಉಪಯುಕ್ತವಾಗಿವೆ. ಇಡೀ ಜಗತ್ತು 2023 ಅನ್ನು ಸಿರಿಧಾನ್ಯ ವರ್ಷ ಎಂದು ಆಚರಿಸುತ್ತಿರುವುದರಿಂದ ಸ್ವಸಹಾಯ ಗುಂಪುಗಳು, ರೈತ ಕಂಪನಿಗಳು, ಸಿರಿಧಾನ್ಯ ಸಂರಕ್ಷಕರು ಈ



ಬೆಳೆಯನ್ನು ಪ್ರೋತ್ಸಾಹಿಸಬೇಕೆಂದು ಡಾ. ಮಹದೇವಪ್ಪ ಇದೇ ಸಂದರ್ಭ ತಿಳಿಸಿದರು.

ರಂಗಕರ್ಮಿ ಅಕ್ಷತಾ ಪಾಂಡವಪುರ ಅವರು ಸಹಜ ಸಮೃದ್ಧ ಸಂಸ್ಥೆ ಹೊರ ತಂದಿರುವ 'ಪೌಷ್ಟಿಕ ಪಾಕ' ಪುಸ್ತಕವನ್ನು ಬಿಡುಗಡೆ ಮಾಡಿದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಬಿ.ಎಸ್. ಚಂದ್ರಶೇಖರ್, ಬೆಳಗಾವಿಯ ಸಿರಿಧಾನ್ಯ ಸಂರಕ್ಷಕ ಪ್ರವೀಣ್ ಹೆಬ್ಬಳ್ಳಿ, ದೇವಧಾನ್ಯ ರೈತ ಉತ್ಪಾದಕರ ಕಂಪನಿ ನಿರ್ದೇಶಕಿ ಸಾವಿತ್ರಿ ಕೊಡ್ಲಿ, ಹಾವೇರಿ ಜಿಲ್ಲೆಯ ಸಿರಿಧಾನ್ಯ ಸಂರಕ್ಷಕ ವೀರಭದ್ರಯ್ಯ ಹಿರೇಮಠ, ಸಹಜ ಸಮೃದ್ಧ ನಿರ್ದೇಶಕ ಜಿ. ಕೃಷ್ಣಪ್ರಸಾದ್, ಅನಿತಾ ರೆಡ್ಡಿ, ಸಹಜ ಸೀಡ್ಸ್‌ನ ಕೆ.ಎಸ್. ಮಂಜು ಹಾಗೂ ಇತರರು ಸಿರಿಧಾನ್ಯ ಮೇಳದಲ್ಲಿ ಪಾಲ್ಗೊಂಡಿದ್ದರು.

ಕೊರಲು, ಸಾಮೆ, ನವಣೆ, ಸಜ್ಜೆ, ಜೋಳ, ಉದಲಿ, ಬರಗು, ರಾಗಿ, ಕೆಂಪು ನವಣೆ, ಹಾರಕ, ಎಣ್ಣೆ ಕಾಳುಗಳು, ರಾಮಮುಂಡ್ರಿ, ತೆನೆಗಳ ವೈವಿಧ್ಯತೆ, ಮುಳ್ಳು ಮೆಣಸು, ಅವರೆ, ಪ್ರೋಸೋ, ಕೋಡ್, ಬ್ರೌನ್ ಟಾಪ್, ಭರ್ಮಾ ಬ್ಲಾಕ್, ಗೌರಿಸಣ್ಣ, ರಾಮಚೂಡಿ ಸೇರಿದಂತೆ ನೂರಕ್ಕೂ ಹೆಚ್ಚು ವಿಧದ ಸಿರಿಧಾನ್ಯಗಳು, ಭತ್ತ, ರಾಗಿ, ಜೋಳ ಇನ್ನಿತರ ತೆನೆಗಳು, ಸೀಬೆ, ಪರಂಗಿ, ಸಪೋಟ ಮುಂತಾದ ಹಣ್ಣುಗಳ ತಳಿಗಳು, ಭೂಮಿಯಲ್ಲಿ ಬೆಳೆಯುವ ಗೆಡ್ಡೆ ಗೆಣಸುಗಳನ್ನು ಸಿರಿಧಾನ್ಯ ಮೇಳದಲ್ಲಿ ಪ್ರದರ್ಶಿಸಲಾಗಿದೆ.

ಹಣ್ಣು, ತರಕಾರಿ ಗಿಡಗಳು, ನಮ್ಮ ಪುರಾತನ ಕಾಲದಿಂದ ಬಳಸುತ್ತಿರುವ ಕುಡುಗೋಲು, ತುರಿಯುವ ಮಣೆ, ಬಾವಿಯಿಂದ ನೀರು ಸೇದುವ ರಾಟೆ, ರಾಗಿ ಬೀಸುವ ಕಲ್ಲು, ಕಾರ ಅರೆಯುವ ಒಳಕಲ್ಲು, ಗುದ್ದಲಿ, ಕಳಾರಿ, ಪಿಕಾಸಿಗಳಂತಹ ಅಪರೂಪದ ಹಳೇ ವಸ್ತುಗಳನ್ನೂ ಪ್ರದರ್ಶಿಸಲಾಗಿರುವುದಲ್ಲದೆ, ತೆನೆಗಳಿಂದ ಧಾನ್ಯ ಬೇರ್ಪಡಿಸುವ ಉಪಕರಣದ ಪ್ರಾತ್ಯಕ್ಷಿಕೆ ಮೂಲಕ ಪರಿಚಯಿಸಲಾಗುತ್ತಿದೆ.

ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆವರೆಗೂ ತೆರೆದಿರುವ ಮೇಳಕ್ಕೆ ಉಚಿತ ಪ್ರವೇಶವಿರುವುದರಿಂದ ರೈತರು, ಸಾರ್ವಜನಿಕರು, ಸಾವಯವ ಕೃಷಿ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ವೀಕ್ಷಿಸುತ್ತಿದ್ದಾರೆ. ಡಿ. 21 ರಂದು ಮೇಳ ಮುಕ್ತಾಯಗೊಳ್ಳಲಿದ್ದು, ಆಸಕ್ತರು ಮಂಜು ಅವರನ್ನು (709000 9944) ಸಂಪರ್ಕಿಸುವಂತೆ ಕೋರಲಾಗಿದೆ.

ಸೂಕ್ತ ಕಾಲದಲ್ಲಿ ಹೆಚ್‌ಪಿವಿ ಲಸಿಕೆ, ತಪಾಸಣೆ ಮೂಲಕ ಗರ್ಭಕೋಶದ ಬಾಯಿ ಕ್ಯಾನ್ಸರ್‌ನಿಂದ ಪಾರಾಗಬಹುದು

ಪ್ರಸೂತಿ, ಸ್ತ್ರೀರೋಗ ತಜ್ಞೆ ಡಾ. ರಾಘವಿ ಕರ್ಣಂ ಅಭಿಮತ

ಮೈಸೂರು,ಡಿ.19(ಎಂಟಿವೈ)- ಹೆಚ್‌ಪಿಐ ಸೋಂಕಿನಿಂದ ಉಂಟಾಗುವ ಗರ್ಭಕೋಶದ ಬಾಯಿ ಅಥವಾ ಗರ್ಭಕೋಶ ಕಂಠದ ಕ್ಯಾನ್ಸರ್ ಅಪಾಯಕಾರಿಯಾಗಿದ್ದು, ಆರಂಭಿಕ ಹಂತದಲ್ಲೇ ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಜೀವಹಾನಿ ತಪ್ಪಿಸಬಹುದು ಎಂದು ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ ಡಾ.ರಾಘವಿ ಕರ್ಣಂ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಸಾರ್ವಜನಿಕ ಆರೋಗ್ಯ ಸಂಶೋಧನಾ ಸಂಸ್ಥೆ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆ ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಹೆಚ್‌ಪಿವಿ ಲಸಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಭಾರತ ಸೇರಿದಂತೆ ವಿವಿಧ ರಾಷ್ಟ್ರಗಳಲ್ಲಿ ಗರ್ಭಕೋಶದ ಬಾಯಿ ಕ್ಯಾನ್ಸರ್ ಸಮಸ್ಯೆ ತೀವ್ರ ದುಷ್ಪರಿಣಾಮ ಬೀರುತ್ತಿದೆ. ಇದು ಮಹಿಳೆಯರಿಗೆ ಕಂಟಕವಾಗಿ ಮಾರ್ಪಟ್ಟಿದೆ. ಹ್ಯೂಮನ್ ಪ್ಯಾಪಿಲೋಮ ವೈರಸ್(ಹೆಚ್‌ಪಿವಿ) ಗರ್ಭಕೋಶದ



ಬಾಯಿಯಲ್ಲಿ ಕಾಣಿಸಿಕೊಂಡರೆ ತನ್ನದೇ ರೋಗನಿರೋಧಕ ಶಕ್ತಿಯಿಂದ ಸೋಂಕನ್ನು ಹೋಗಲಾಡಿಸುತ್ತದೆ. ಕೆಲವು ಸಂದರ್ಭದಲ್ಲಿ ಸೋಂಕು ಅಲ್ಲಿಯೇ ಉಳಿದು, ಗರ್ಭಕೋಶದ ಬಾಯಿಯಲ್ಲಿ ಅನಾರೋಗ್ಯಕರ ಬದಲಾವಣೆಗೆ ಕಾರಣವಾಗುತ್ತದೆ. ಆರಂಭಿಕ ಹಂತದಲ್ಲೇ ಸೂಕ್ತ ಚಿಕಿತ್ಸೆ ನೀಡದೇ ಇದ್ದರೆ ಕೆಲವೇ ವರ್ಷಗಳಲ್ಲಿ ಕ್ಯಾನ್ಸರ್ ರೂಪ ತಾಳಿ, ದೇಹದ ಇನ್ನಿತರ ಅಂಗಾಂಗಗಳ ಮೇಲೂ ದುಷ್ಪರಿಣಾಮ ಬೀರಲಿದೆ ಎಂದರು.

ಹೆಚ್‌ಪಿವಿ ಲಕ್ಷಣಗಳು ತಿಳಿಯುವುದೇ ಇಲ್ಲ. ಹೀಗಾಗಿ ಜೀವಕ್ಕೆ ಅಪಾಯ ಉಂಟಾಗುವ ಸಂಭವ ಹೆಚ್ಚಾಗಿದೆ. ಈ ಅಪಾಯಕಾರಿ ರೋಗಕ್ಕೆ ಲಸಿಕೆ ಕಂಡು ಹಿಡಿಯಲಾಗಿದೆ. ಭಾರತದಲ್ಲಿ ಪ್ರತಿ ವರ್ಷ 1.24 ಲಕ್ಷ ಮಹಿಳೆಯರಲ್ಲಿ ಗರ್ಭಕೋಶದ ಬಾಯಿಯ(ಕಂಠದ) ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಅಲ್ಲದೆ, 77 ಮಂದಿ ಸಾವಿಗೀಡಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಲಸಿಕೆ ಪಡೆದುಕೊಳ್ಳುವುದರಿಂದ ಗರ್ಭಕಂಠದ ಕ್ಯಾನ್ಸರ್‌ನಿಂದ ಪಾರಾಗಬಹುದು.

ವ್ಯಾಕ್ಸಿನೇಷನ್‌ಗೆ ಒಳಗಾಗುವುದರಿಂದ ಹಾಗೂ ಹಾಗೂ ಸ್ಕ್ರೀನಿಂಗ್(ತಪಾಸಣೆ) ಮಾಡಿಸಿಕೊಳ್ಳುವುದರಿಂದ ಗರ್ಭಕೋಶ ಬಾಯಿ ಕ್ಯಾನ್ಸರ್‌ನಿಂದ ಪಾರಾಗಬಹುದು ಎಂದರು.

ಈಗಾಗಲೇ ಲಸಿಕೆ ಹಾಕುವ ಅಭಿಯಾನ ಆರಂಭವಾಗಿದ್ದು, ದೇಶದಾದ್ಯಂತ ಲಕ್ಷಾಂತರ ಹೆಣ್ಣು ಮಕ್ಕಳಿಗೆ ಲಸಿಕೆ ಹಾಕಲಾಗಿದೆ. 9 ರಿಂದ 14 ವರ್ಷ ವಯಸ್ಸಿನ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಹೆಚ್‌ಪಿವಿ ಲಸಿಕೆ ಹಾಕಿಸಬಹುದಾಗಿದೆ. ಅಲ್ಲದೆ, 30 ವರ್ಷ ಮೇಲ್ಪಟ್ಟ ಮಹಿಳೆಯರು 3 ರಿಂದ 4 ವರ್ಷಗಳಿಗೊಮ್ಮೆ ತಪಾಸಣೆ ಮಾಡಿಸಿಕೊಂಡರೆ ಈ ಸಮಸ್ಯೆಯಿಂದ ಪಾರಾಗಬಹುದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವಿವಿ ಸಮ ಕುಲಾಧಿಪತಿ ಡಾ.ಬಿ.ಸುರೇಶ್, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯಾಧಿಕಾರಿ ಡಾ.ಎಂ.ಎಸ್.ಜಯಂತ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಬಸವನಗೌಡಪ್ಪ, ಡಾ. ಪೂರ್ಣಿಮಾ ಮದಿವಣ್ಣನ್, ಡಾ.ಸಿ.ಪಿ.ಮಧು, ಸಂಶೋಧನಾಧಿಕಾರಿ ಡಾ.ರಶ್ಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಾಯುವ್ಯ ಚೀನಾದ ಗನ್ಸು, ಕಿಂಗ್ಹೈ ಪ್ರಾಂತ್ಯದಲ್ಲಿ ಪ್ರಬಲ ಭೂಕಂಪ: ನೂರಾರು ಮಂದಿ ಬಲಿ

ಬೀಜಿಂಗ್, ಡಿ19- ಸೋಮವಾರ ಮಧ್ಯರಾತ್ರಿ ವಾಯುವ್ಯ ಚೀನಾದ ಗನ್ಸು ಮತ್ತು ನೆರೆಯ ಕಿಂಗ್ಹೈ ಪ್ರಾಂತ್ಯದ ಜನಾಂಗೀಯ ಕೌಂಟಿಯಲ್ಲಿ ಭೂಕಂಪ ಸಂಭವಿಸಿದ್ದು, ನೂರಾರು ಜನರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಭೂಕಂಪ ಪರಿಹಾರ ಕೇಂದ್ರ ಕಚೇರಿ ತಿಳಿಸಿದೆ.

ಚೀನಾ ಭೂಕಂಪನ ಜಾಲಗಳ ಕೇಂದ್ರದ ಪ್ರಕಾರ, ನಿನ್ನೆ ಮಧ್ಯರಾತ್ರಿ 12 ಗಂಟೆ ಸುಮಾರಿಗೆ ಭೂಕಂಪ ಸಂಭವಿಸಿದ್ದು, 10 ಕಿಲೋಮೀಟರ್ ಆಳದಲ್ಲಿ ಭೂಕಂಪದ ತೀವ್ರತೆಯಿತ್ತು. ಜನರ ಮೂಲ ಸೌಕರ್ಯಕ್ಕೆ ಭಾರಿ ಹಾನಿಯುಂಟಾಗಿದೆ.

ಭೂಕಂಪದ ಕೇಂದ್ರಬಿಂದು ಲಿಯುಗೌ ಟೌನ್‌ಶಿಪ್ ಜಿಶಿಶನ್ ಬಾವೊನ್ ಕೌಂಟಿ ಸೀಟ್‌ನಿಂದ ಸುಮಾರು 8 ಕಿಲೋಮೀಟರ್ ದೂರದಲ್ಲಿದೆ, ಡೊಂಗ್‌ಕ್ಸಿಯಾಂಗ್, ಗನ್ಸುದಲ್ಲಿನ ಲಿನ್ಕ್ಸಿಯಾ ಹುಯಿ ಸ್ವಾಯತ್ತ ಪ್ರಾಂತ್ಯದ ಸಲಾ ಸ್ವಾಯತ್ತ ಕೌಂಟಿಯಾಗಿದೆ. ಕ್ವಿಂಘೈ ಪ್ರಾಂತ್ಯವು ಟಿಬೆಟ್ ಹಿಮಾಲಯ ಪ್ರದೇಶದ ಪಕ್ಕದಲ್ಲಿದೆ, ಇದು ಭೂಖಂಡದ ಫಲಕಗಳ ಸ್ಥಳಾಂತರದಿಂದಾಗಿ ಆಗಾಗ್ಗೆ ಭೂಕಂಪಗಳಿಗೆ ಗುರಿಯಾಗುತ್ತದೆ.

ಇಂಜಿನಿಯರಿಂಗ್ ಕಾಲೇಜುಗಳು ಈಗ ಬರೀ ಬೋಧನೆಗಷ್ಟೇ ಸೀಮಿತವಾಗಿಲ್ಲ; ಅಲ್ಲಿ ನಿರಂತರ ಆವಿಷ್ಕಾರಗಳು ನಡೆಯುತ್ತಿವೆ

- ಎಲ್ ಅಂಡ್ ಟಿ ಸಂಸ್ಥೆಯ ಗ್ಲೋಬಲ್ ಮುಖ್ಯಸ್ಥ ಶಶಿಧರ ಡೊಂಗ್ರೆ ಪ್ರಶಂಸೆ ನುಡಿ
- ಮೈಸೂರು ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್' ಆಯೋಜನೆ





ಮೈಸೂರು,ಡಿ.19(ಎಂಟಿವೈ)- ದಶಕಗಳ ಹಿಂದೆ ಕೇವಲ ಪಠ್ಯ ಪುಸ್ತಕ ಬೋಧನೆಗಷ್ಟೇ ಸೀಮಿತವಾಗಿದ್ದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಇದೀಗ ಆವಿಷ್ಕಾರಗಳು ಹೆಚ್ಚಾಗುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಎಲ್ ಅಂಡ್ ಟಿ ಸಂಸ್ಥೆಯ ಗ್ಲೋಬಲ್ ಮುಖ್ಯಸ್ಥ ಶಶಿಧರ ಡೊಂಗ್ರೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಂಗಳವಾರ ಆಯೋಜಿಸಿದ್ದ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಆವಿಷ್ಕಾರಗಳ ಅಗತ್ಯವಿದೆ. 10 ವರ್ಷಗಳ ಹಿಂದಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಆವಿಷ್ಕಾರದ ಕೊರತೆ ಎದ್ದು ಕಾಣುತ್ತಿತ್ತು. ಕೇವಲ ಪಠ್ಯಕ್ರಮ ಬೋಧನೆಗೆ ಮಾತ್ರ ಇಂಜಿನಿಯರಿಂಗ್ ಕಾಲೇಜುಗಳು ಸೀಮಿತವಾಗಿರುವಂತೆ ಕಂಡು ಬರುತ್ತಿತ್ತು. ಆದರೆ, ಕಾಲ ಬದಲಾದಂತೆ ಇದೀಗ ಕಾಲೇಜುಗಳ ಸ್ಥಿತಿಗತಿ ಬದಲಾಗುತ್ತಿದೆ. ಆವಿಷ್ಕಾರ ಹೆಚ್ಚಾಗುತ್ತಿವೆ. ಇದರಿಂದ ಸಾಧನೆ ಮಾಡುವ ಹಾಗೂ ಹೊಸ ಪ್ರಯೋಗ ಮಾಡುವ ಅವಕಾಶ ನಿರ್ಮಾಣವಾಗಿದೆ ಎಂದರು.

ವಿದ್ಯಾರ್ಥಿಗಳು ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಹಿಡಿಯುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಾವುದೇ ಕ್ಷೇತ್ರದಲ್ಲಿ ನೈಜ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿದರಷ್ಟೇ ಪ್ರಗತಿ ಕಾಣಲು ಸಾಧ್ಯ. ಹ್ಯಾಕಥಾನ್ ಬಹು ದೊಡ್ಡ ಆವಿಷ್ಕಾರಗಳಿಗೆ ಮುನ್ನುಡಿ ಬರೆಯುವ ಕಾರ್ಯಕ್ರಮವಾಗಿದ್ದು, ದಶಕಗಳ ಹಿಂದೆ ಅಮೇರಿಕಾದ ಸ್ಟ್ಯಾನ್ ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಲ್ಯಾರಿ ಪೇಜ್ ಹಾಗೂ ಅವನ ಸ್ನೇಹಿತನ ಕಲ್ಪನೆಯ ಗೂಗಲ್ ಸರ್ಚ್ ಇಂಜಿನ್ ಇಂದು ವಿಶ್ವದ ಬಹು ದೊಡ್ಡ ಕಂಪನಿಯಾಗಿ ಬೆಳೆದಿರುವುದು ಪ್ರೇರಣೆಯಾಗಿರಲಿ ಹಾಗೂ ತಮ್ಮ ಆವಿಷ್ಕಾರಗಳಲ್ಲಿ ನೈತಿಕತೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ ಮಾತನಾಡಿ, ವಿದ್ಯಾರ್ಥಿಗಳು ಅತೀ ಕಡಿಮೆ ಸಮಯದಲ್ಲಿ (24 ಗಂಟೆ ಅಥವಾ 36 ಗಂಟೆ) ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಹಿಡಿಯುವ ಇಂತಹ ಹ್ಯಾಕಥಾನ್ ಚಟುವಟಿಕೆಯಲ್ಲಿ ಯೋಚನಾಶೀಲತೆ, ಕಲಾತ್ಮಕ ಕೌಶಲ್ಯಕ್ಕೆ ಸಾಣೆ ಹಿಡಿಯಲಿದೆ. ಪ್ರತಿ ವಿಜೇತ ತಂಡಕ್ಕೆ 1 ಲಕ್ಷ ರೂ. ಬಹುಮಾನ ದೊರಕಲಿದ್ದು, ದೇಶಾದ್ಯಂತ 2 ಕೋಟಿ ರೂ. ಬಹುಮಾನ ಕೊಡಲಾಗುತ್ತದೆ ಎಂದರು.

ವಿದ್ಯಾವರ್ಧಕ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆ ಡಾ.ಎಂ. ಆರ್. ಪೂಜಾ ಮಾತನಾಡಿ, ವಿದ್ಯಾರ್ಥಿಗಳು ಹಿಮಾಚಲ ಪ್ರದೇಶ ಸರ್ಕಾರ, ಕೇಂದ್ರ ಆರೋಗ್ಯ ಸಚಿವಾಲಯ, ಅಂಚೆ ಇಲಾಖೆ ಹಾಗೂ ವಿವಿಧ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ 5 ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ನಿರತವಾಗಿದ್ದಾರೆ. ವಿದ್ಯಾವರ್ಧಕ ಕಾಲೇಜಿನ ಐದು ತಂಡಗಳು ದೇಶದ ವಿವಿಧ ನೋಡಲ್ ಕೇಂದ್ರಗಳಲ್ಲಿ ಭಾಗವಹಿಸಿದ್ದಾರೆ ಎಂದರು.

ದೆಹಲಿಯಲ್ಲಿ ಚಾಲನೆ: ಕೇಂದ್ರ ಶಿಕ್ಷಣ ಸಚಿವಾಲಯದ ಇನ್ನೊವೇಟಿವ್ ಸೆಲ್ (ಆವಿಷ್ಕಾರ ವಿಭಾಗ) ಹಾಗೂ ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಸಂಸ್ಥೆ (ಎಐಸಿಟಿಇ) ಸಹಯೋಗದಲ್ಲಿ ಆಯೋಜಿಸಿರುವ 4 ದಿನಗಳ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು, ಇದು ದೇಶದ 48 ನೋಡಲ್ ಕೇಂದ್ರಗಳಲ್ಲಿ ಆರಂಭವಾಗಿದೆ. 44 ಸಾವಿರ ತಂಡಗಳಿಂದ 50 ಸಾವಿರಕ್ಕೂ ಹೆಚ್ಚು ಹೊಸ ಆವಿಷ್ಕಾರಗಳನ್ನು ಪರಿಶೀಲಿಸಿ, ಅಂತಿಮ ಘಟ್ಟಕ್ಕೆ 12 ಸಾವಿರ ವಿದ್ಯಾರ್ಥಿಗಳು ಹಾಗೂ 2500 ತರಬೇತುದಾರರು ತಲುಪಿದ್ದಾರೆ. ನವದೆಹಲಿಯಲ್ಲಿ ಎಐಸಿಟಿಇ ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್ ಕಾರ್ಯಕ್ರಮಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಎಐಸಿಟಿಇ ಉಪ ನಿರ್ದೇಶಕ ಡಾ.ನಿಖಿಲ್ ಕಾಂತ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶೈಲರಾಮಣ್ಣವರ್, ಪ್ರಾಧ್ಯಾಪಕ ಪ್ರೊ.ನಿತಿನ್ ಕುಮಾರ್ ಇನ್ನಿತರರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಕಾಲೇಜಿನಲ್ಲಿ ಐಐಟಿ ಖರಗ್‌ಪುರ್, ಐಐಟಿ ರೂರ್ಕಿ, ವಿಐಟಿ, ಐಐಐಟಿ ಬೆಂಗಳೂರು, ಮಹಾರಾಷ್ಟ್ರ ಗುಜರಾತ್, ತಮಿಳುನಾಡು, ಅಸ್ಸಾಂ ಹಾಗೂ ವಿವಿಧ ರಾಜ್ಯಗಳಿಂದ 27 ತಂಡಗಳ ಅಂದಾಜು 200 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ಮಿತ್ರ

ಮೂರನೇ ಪುಟದಿಂದ

3 ದಿನ 'ಬ್ರ್ಯಾಂಡ್ ಮೈಸೂರು ಫೆಸ್ಟ್'

ಪ್ರವಾಸಿಗರು ಹಾಗೂ ಸ್ಥಳೀಯ ವೀಕ್ಷಕರಿಗೆ ಸಮರ್ಪಕ ಪಾರ್ಕಿಂಗ್ ವ್ಯವಸ್ಥೆ, ತಾತ್ಕಾಲಿಕ ಶೌಚಾಲಯದ ವ್ಯವಸ್ಥೆ ಹಾಗೂ ನಿರಂತರ ಸ್ವಚ್ಛತೆಗೆ ಕ್ರಮ ವಹಿಸಲಾಗುತ್ತದೆ.

ಮತ್ತಷ್ಟು ಅನುದಾನದ ಅಗತ್ಯ: ಪ್ರವಾಸೋದ್ಯಮ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಮಾತನಾಡಿ, ಮೈಸೂರಿಗೆ ದೇಶ-ವಿದೇಶಗಳ ಮತ್ತಷ್ಟು ಪ್ರವಾಸಿಗರನ್ನು ಆಕರ್ಷಿಸುವುದರ ಜೊತೆಗೆ ಇಲ್ಲಿನ ಪ್ರವಾಸೋದ್ಯಮ ಉತ್ತೇಜಿಸುವ ಉದ್ದೇಶದೊಂದಿಗೆ ಈಗಾಗಲೇ ಬ್ರ್ಯಾಂಡ್ ಮೈಸೂರು ಲೋಗೊ ಬಿಡುಗಡೆ ಮಾಡಲಾಗಿದೆ. ಇದಕ್ಕೆ ಪೂರಕವಾಗಿ ಜನವರಿಯಲ್ಲಿ ಮೂರು ದಿನ ಮೈಸೂರು ಫೆಸ್ಟ್ ಶೀರ್ಷಿಕೆಯಲ್ಲಿ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಸಾಂಸ್ಕೃತಿಕ ಸಂಭ್ರಮ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮ ನಡೆಸಲು ಯೋಜಿಸಲಾಗಿದೆ. ಇದಕ್ಕೆ ಪ್ರವಾಸೋದ್ಯಮ ಇಲಾಖೆಯಿಂದ 50 ಲಕ್ಷ ರೂ. ಅನುದಾನ ನೀಡಲಿದ್ದು, ಮತ್ತಷ್ಟು ಅನುದಾನದ ಅಗತ್ಯವಿದೆ ಎಂದರು.

ಒಂದು ಕೋಟಿ ಬೇಕಾಗಬಹುದು: ಅನುದಾನ ಸಂಬಂಧ ಪ್ರತಿಕ್ರಿಯಿಸಿದ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮೂರು ದಿನಗಳ ಕಾಲ ಅದ್ಧೂರಿಯಾಗಿ ಕಾರ್ಯಕ್ರಮಗಳನ್ನು ನಡೆಸಬೇಕಾದರೆ 50 ಲಕ್ಷ ಸಾಕಾಗುವುದಿಲ್ಲ. ಹೆಚ್ಚುವರಿ 50 ಲಕ್ಷ ಅನುದಾನಕ್ಕೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಬೇಕು. ಇಲ್ಲವೇ ಪ್ರಾಯೋಜಕತ್ವದ ಮೂಲಕ ಒಂದು ಕೋಟಿ ರೂ. ಸಂಗ್ರಹಿಸಿ, ಕಾರ್ಯಕ್ರಮ ರೂಪಿಸಬಹುದು. ಸ್ಥಳೀಯ ಕಲಾವಿದರ ಜೊತೆಗೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದರನ್ನು ಆಹ್ವಾನಿಸಬೇಕು. ಎಲ್ಲಾ ಕಾರ್ಯಕ್ರಮಗಳ ಅಂತಿಮ ರೂಪುರೇಷೆ ಸಿದ್ಧವಾದ ಕೂಡಲೇ ಜನವರಿ ಮೊದಲ ವಾರ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳ ಸಭೆ ನಡೆಸಿ, ಅಂತಿಮಗೊಳಿಸೋಣ ಎಂದು ಸೂಚನೆ ನೀಡಿದರು.

ಲೋಗೋ ಬಳಸಲು ಮನವಿ: ಮೈಸೂರು ದಸರಾ, ಇಲ್ಲಿನ ಪ್ರವಾಸಿ ತಾಣಗಳು ಸೇರಿದಂತೆ ಹಲವು ಪ್ರೇಕ್ಷಣೀಯ ಸ್ಥಳಗಳು ಹಾಗೂ ಕೆಲ ಉತ್ಪನ್ನಗಳು ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿವೆ. ಮೈಸೂರಿನ ಸಾಂಸ್ಕೃತಿಕ ಸೊಬಗು, ಹೆಮ್ಮೆಯ ಪರಂಪರೆ, ಇಲ್ಲಿನ ಪ್ರವಾಸೋದ್ಯಮ, ವಾಣಿಜ್ಯೋದ್ಯಮವನ್ನು ಉತ್ತೇಜಿಸುವ ಮೂಲಕ ಮೈಸೂರಿನ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಬೇಕು. ಜೊತೆಗೆ ಇತ್ತೀಚೆಗೆ ಅನಾವರಣಗೊಂಡಿರುವ ಬ್ರ್ಯಾಂಡ್ ಮೈಸೂರು ಲೋಗೋವನ್ನು ಜಿಲ್ಲೆಯ ಎಲ್ಲಾ ಸರ್ಕಾರಿ ಸಂಸ್ಥೆಗಳು, ಅನುದಾನಿತ ಸಂಸ್ಥೆಗಳು ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಬಳಸುವುದರೊಂದಿಗೆ ಒಳ್ಳೆಯ ಉದ್ದೇಶಕ್ಕೆ ಕೈಜೋಡಿಸಬೇಕು ಎಂದರು.

ಪ್ರತಿ ತಿಂಗಳು ಕಾರ್ಯಕ್ರಮ: ದಸರಾ ಮಹೋತ್ಸವ ಮಾದರಿಯಲ್ಲಿ ಖಾಸಗಿ ಪ್ರಾಯೋಜಕತ್ವ ಪಡೆಯಲು ಸಭೆ ನಡೆಸಲಾಗುವುದು. ಹಲವರು ಪ್ರಾಯೋಜಕತ್ವ ನೀಡಲು ಉತ್ಸುಕರಾಗಿದ್ದಾರೆ. ಕಡಿಮೆ ಬಜೆಟ್‌ನಲ್ಲಿ ಬ್ರ್ಯಾಂಡ್‌ನ ವ್ಯಾಪಕ ಪ್ರಚಾರ ಕಷ್ಟಸಾಧ್ಯ. ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಪ್ರತಿ ತಿಂಗಳು ವಿಶೇಷ ಕಾರ್ಯಕ್ರಮಗಳನ್ನು ನಡೆಸುವ ಚಿಂತನೆ ಇದೆ. ಸೋಮನಾಥಪುರದಲ್ಲಿ ಫೆಬ್ರವರಿಯಲ್ಲಿ ಉತ್ಸವ ನಡೆಸಲು ಕ್ರಿಯಾಯೋಜನೆ ರೂಪಿಸಿ, ಸಲ್ಲಿಸುವಂತೆ ಪ್ರವಾಸೋದ್ಯಮ ಸಚಿವರು ತಿಳಿಸಿದ್ದಾರೆ. ಚುಂಚನಕಟ್ಟೆ ಜಲಪಾತೋತ್ಸವಕ್ಕೂ ಒತ್ತಾಯ ಕೇಳಿಬಂದಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಎಲ್ಲೆಡೆ ಬ್ರ್ಯಾಂಡ್ ಮೈಸೂರು ಲೋಗೋ: ಬ್ರಾಂಡ್ ಮೈಸೂರು-2023 ಸ್ಪರ್ಧೆಯಲ್ಲಿ ಬಿಡುಗಡೆ ಮಾಡಿರುವ ಲೋಗೊ, ಮ್ಯಾಸ್ಕಾಟ್, ಸ್ಮರಣಿಕೆಗಳನ್ನು ಬಳಸುವುದರ ಮೂಲಕ ಮೈಸೂರು ಪ್ರವಾಸೋದ್ಯಮವನ್ನು ಉತ್ತೇಜಿಸಬೇಕು. ಈ ನಿಟ್ಟಿನಲ್ಲಿ ಪೊಲೀಸ್ ಬ್ಯಾರಿಕೇಡ್, ಸಿಗ್ನಲ್ ಬೋರ್ಡ್, ಪೊಲೀಸ್ ಚೌಕಿಗಳಲ್ಲಿ 'ನಮ್ಮ ಪರಂಪರೆ ನಿಮ್ಮ ತಾಣ' ಟ್ಯಾಗ್‌ಲೈನ್ ಒಳಗೊಂಡ ನೂತನ ಲೋಗೋ ಅಳವಡಿಸಲು ಸ್ಥಳಗಳನ್ನು ಗುರುತಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ ವಿವರಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಮುಡಾ ಆಯುಕ್ತ ದಿನೇಶ್ ಕುಮಾರ್, ಪ್ರಾಚ್ಯವಸ್ತು,ಪುರಾತತ್ವ ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು, ಆಯುರ್ವೇದ ಕಾಲೇಜಿನ ಉಪ ನಿರ್ದೇಶಕಿ ಪುಷ್ಪಾವತಿ, ಡಿಸಿಪಿ ಮುತ್ತುರಾಜ್, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ್ ಗೌಡ, ಮೈಸೂರು ವಾಣಿಜ್ಯ ಹಾಗೂ ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮೈಸೂರು ಸಂಘ ಸಂಸ್ಥೆಗಳ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಮೈಸೂರು ಮರ್ಚೆಂಟ್ ಅಸೋಸಿಯೇಷನ್ ಅಧ್ಯಕ್ಷ ಆನಂದ್, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಜೆ.ಪಿ.ಅರಸ್ ಮತ್ತಿತರರು ಭಾಗವಹಿಸಿದ್ದರು.

ನೀರು ಬಿಡಿ: ಸಿಡಬ್ಲ್ಯುಆರ್‌ಸಿ ಆದೇಶ


ಕಾವೇರಿ ಜಲಾನಯನ ಪ್ರದೇಶದಲ್ಲಿ ಈಶಾನ್ಯ ಮಾನ್ಸೂನ್ ಋತುವಿನಲ್ಲಿ ಸಮತೋಲನ ಮಳೆಯನ್ನು ನಿರೀಕ್ಷಿಸಬಹುದು. ಆದ್ದರಿಂದ ಬೆಳೆದಿರುವ ಬೆಳೆಗಳನ್ನು ಉಳಿಸಿಕೊಳ್ಳಲು ಸಾಕಷ್ಟು ಮಣ್ಣಿನ ತೇವಾಂಶವನ್ನು ತಮಿಳುನಾಡಿನ ಕಾವೇರಿ ಜಲಾನಯನ ಪ್ರದೇಶವು ಹೊಂದಿರುತ್ತದೆ. ತಮಿಳುನಾಡಿನ ಕುರುವಾಯಿ ಬೆಳೆ ಡಿಸೆಂಬರ್ ಮೊದಲ ವಾರದ ಅಂತ್ಯದ ವೇಳೆಗೆ ಕಟಾವಾಗಿರುವುದರಿಂದ ಈ ಬೆಳೆಗಳಿಗೆ ನೀರಿನ ಅಗತ್ಯವಿಲ್ಲ. ಮೆಟ್ಟೂರು ಮತ್ತು ಭವಾನಿ ಸಾಗರ ಜಲಾಶಯಗಳು 50.367 ಟಿಎಂಸಿ ಗಮನಾರ್ಹ ಸಂಗ್ರಹವನ್ನು ಹೊಂದಿವೆ. ಇದು ತಮಿಳುನಾಡಿಗೆ ಅಗತ್ಯಕ್ಕಿಂತ ಹೆಚ್ಚಾಗಿರುತ್ತದೆ.

ಕರ್ನಾಟಕದ 4 ಜಲಾಶಯಗಳಿಗೆ ಒಳಹರಿವು ಸ್ಥಗಿತಗೊಂಡಿದ್ದು, ಯಾವುದೇ ಒಳಹರಿವಿನ ನಿರೀಕ್ಷೆಗಳಿಲ್ಲ ಮತ್ತು ಕರ್ನಾಟಕವು ಪ್ರಸ್ತುತ ಬೆಳೆದಿರುವ ಬೆಳೆಗಳ ಅವಶ್ಯಕತೆ, ಕುಡಿಯುವ ನೀರು ಮತ್ತು ಕೈಗಾರಿಕಾ ಅಗತ್ಯಗಳನ್ನು ಈಗಿನ ನೀರಿನ ಸಂಗ್ರಹದಿಂದ ನಿರ್ವಹಿಸಲು ಬದ್ಧವಾಗಿದೆ. ಅನಿಯಂತ್ರಿತ ಜಲಾನಯನ ಪ್ರದೇಶದಿಂದ ಉಂಟಾಗುವ ಕೊಡುಗೆಯನ್ನು ಹೊರತುಪಡಿಸಿ ಬಿಳಿಗುಂಡ್ಲು ತಲುಪಲು ಕರ್ನಾಟಕವು ತನ್ನ ಜಲಾಶಯಗಳಿಂದ ಯಾವುದೇ ನೀರನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಕರ್ನಾಟಕ ತನ್ನ ವಾದ ಮಂಡಿಸಿದೆ.ಇನ್ನು, ತಮಿಳುನಾಡು, ಕರ್ನಾಟಕವು 14 ಟಿಎಂಸಿ ನೀರು ಬಿಡಬೇಕು ಎಂದು ಒತ್ತಾಯಿಸಿದೆ. ಅಂತಿಮವಾಗಿ ಕಾವೇರಿ ನಿಯಂತ್ರಣ ಸಮಿತಿಯು ಡಿಸೆಂಬರ್ ಅಂತ್ಯದವರೆಗೆ 3128 ಕ್ಯುಸೆಕ್ ಮತ್ತು ಮುಂದಿನ ವರ್ಷ ಜನವರಿ ಪೂರ್ಣ ಅವಧಿಗೆ ಪ್ರತಿ ದಿನ 1030 ಕ್ಯುಸೆಕ್ ನೀರು ಹರಿಸುವಂತೆ ಶಿಫಾರಸು ಮಾಡಿದೆ.

ಜೆಎನ್.1 ಕೊರೊನಾ ರೂಪಾಂತರ ತಳಿ ಹಿನ್ನೆಲೆ

ಸ್ವ್ಯಾಬ್ ಟೆಸ್ಟ್, ಜ್ವರ ಸಮೀಕ್ಷೆ; ಆಕ್ಸಿಜನ್ ಸಹಿತ ಆಸ್ಪತ್ರೆ ಸಜ್ಜುಗೊಳಿಸಿ

ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ; ಆಯುಕ್ತರಿಂದ ಅಧಿಕಾರಿಗಳಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಿರ್ದೇಶನ; ಸಚಿವರ ನೇತೃತ್ವದಲ್ಲಿ ಇಂದು ಉನ್ನತ ಮಟ್ಟದ ಸಭೆ: ಕೊರೊನಾ ಮಾರ್ಗಸೂಚಿ ಪ್ರಕಟ



ಮೈಸೂರು, ಡಿ.19(ಆರ್‌ಕೆ)-ರಾಜ್ಯದಲ್ಲಿ ಕೊರೊನಾ ರೂಪಾಂತರ ತಳಿ ಜೆಎನ್.1 ಕಾಣಿಸಿಕೊಂಡಿರುವುದರಿಂದ ಸ್ವ್ಯಾಬ್ ಟೆಸ್ಟ್, ಜ್ವರ ಸಮೀಕ್ಷೆ ಮಾಡುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್‌ಕುಮಾರ್ ಮೈಸೂರಿನ ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಆಯುಕ್ತ ಡಿ. ರಂದೀಪ್‌ರೊಂದಿಗೆ ಬೆಂಗಳೂರಿನಲ್ಲಿ ಇಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಅವರು, ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು, ಇಲಾಖೆ ಅಧಿಕಾರಿಗಳು ಪೂರ್ವ ಸಿದ್ಧತೆಯೊಂದಿಗೆ ಎಂತಹ ಪರಿಸ್ಥಿತಿ ಎದುರಿಸಲು ಸಜ್ಜಾಗಿರಬೇಕೆಂದು ಸೂಚಿಸಿದರು.

ಈ ಹಿಂದೆ ನಿಗದಿಯಾಗಿದ್ದಂತೆ ಮೈಸೂರು ಜಿಲ್ಲೆಯ ಜಿಲ್ಲಾಸ್ಪತ್ರೆ, ತಾಲೂಕು ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಮೈಸೂರಿನ ಕೆಆರ್ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಲ್ಲಿ ಸ್ವ್ಯಾಬ್ ಟೆಸ್ಟ್ ಮಾಡುವಂತೆ ಹಾಗೂ ಗಡಿ ಭಾಗದ ಬಾವಲಿ ಚೆಕ್‌ಪೋಸ್ಟ್, ಡಿ.ಬಿ. ಕುಪ್ಪೆ ಸೇರಿದಂತೆ ಸುತ್ತಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಗಳಲ್ಲಿ ಟೆಸ್ಟ್ ತೀವ್ರಗೊಳಿಸುವಂತೆಯೂ ಅವರು ಸೂಚಿಸಿದ್ದಾರೆ. ಜ್ವರ, ಕೆಮ್ಮು, ನೆಗಡಿ, ಉಸಿರಾಟದ ತೊಂದರೆ, ಡಯಾಬಿಟಿಸ್ ಇರುವವರ ಸ್ವ್ಯಾಬ್ ಟೆಸ್ಟ್ ಮಾಡಿಸಿ ಅವರ ಆರೋಗ್ಯದ ಮೇಲೆ ತೀವ್ರ ನಿಗಾ ಇರಿಸಿ, ಬಹು ರೋಗದಿಂದ ಬಳಲುತ್ತಿರುವವರನ್ನು ಗುರ್ತಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ ಅನಿಲ್‌ಕುಮಾರ್, ತಕ್ಷಣ ಚಿಕಿತ್ಸೆಗೆ ಕ್ರಮ ವಹಿಸಬೇಕೆಂದಿದ್ದಾರೆ. ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿ ಮಾಸ್ಕ್ ಧರಿಸಬೇಕು, ಆಕ್ಸಿಜನ್, ಬೆಡ್‌ಗಳು,



ಔಷಧಗಳನ್ನು ಸಿದ್ಧಪಡಿಸಿಕೊಂಡು ಕೋವಿಡ್ ಪಾಸಿಟಿವ್ ಅಥವಾ ಲಕ್ಷಣಗಳು ಕಂಡುಬಂದವರನ್ನು ದಾಖಲಿಸಿಕೊಳ್ಳಲು ಪ್ರತ್ಯೇಕ ವಾರ್ಡ್, ಸಿಬ್ಬಂದಿ ವ್ಯವಸ್ಥೆ ಮಾಡಿಕೊಳ್ಳಬೇಕು, ಅನಗತ್ಯ ಆತಂಕ ಉಂಟಾಗದಂತೆ ಕ್ರಮ ವಹಿಸಿ ಜನರಲ್ಲಿ ಜಾಗೃತಿ ಮೂಡಿಸುವಂತೆಯೂ ತಿಳಿಸಿದ್ದಾರೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನಾಳೆ (ಡಿ. 20) ಬೆಂಗಳೂರಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಲಿದ್ದು, ನಂತರ ಕೋವಿಡ್ ಮಾರ್ಗಸೂಚಿಗಳನ್ನು ಪ್ರಕಟಿಸಲಾಗುವುದು.

ಕೋವಿಡ್ ಪ್ರಕರಣಗಳ ಹೆಚ್ಚಳ; ಇಂದು ಕೇಂದ್ರ ಆರೋಗ್ಯ ಸಚಿವರಿಂದ ಪರಿಶೀಲನಾ ಸಭೆ



ನವದೆಹಲಿ: ದೇಶದಲ್ಲಿ ಕೋವಿಡ್-19 ಪ್ರಕರಣಗಳ ಹೆಚ್ಚಳದ ಮಧ್ಯೆ, ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಡಿಸೆಂಬರ್ 20ರಂದು ಆರೋಗ್ಯ ಸೌಲಭ್ಯಗಳು ಮತ್ತು ಸೇವೆಗಳ ಪರಿಶೀಲನಾ ಸಿದ್ಧತೆ ಸಭೆಯನ್ನು ನಡೆಸಲಿದ್ದಾರೆ.

ಮನ್ಸುಖ್ ಮಾಂಡವಿಯಾ ಅವರು ಆರೋಗ್ಯ ಸಚಿವರು ಮತ್ತು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ (UTs) ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು (ಆರೋಗ್ಯ), ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆಯನ್ನು ನಡೆಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೋವಿಡ್-19 ಪ್ರಕರಣಗಳಲ್ಲಿ ಹೆಚ್ಚಳವಾಗುತ್ತಿರುವುದರಿಂದ ಮೇಲ್ವಿಚಾರಣೆ ಮತ್ತು ಜಾಗರೂಕರಾಗಿರಲು ಕೇಂದ್ರವು ಸೋಮವಾರ ರಾಜ್ಯಗಳಿಗೆ ಮಾರ್ಗಸೂಚಿಗಳನ್ನು ನೀಡಿತ್ತು. ದೇಶದಲ್ಲಿ ಕೋವಿಡ್‌ನ ಹೊಸ ಜೆಎನ್.1 ರೂಪಾಂತರದ ಮೊದಲ ಪ್ರಕರಣ ಕೇರಳದಲ್ಲಿ ಪತ್ತೆಯಾಗಿತ್ತು. ಹೊಸ ರೂಪಾಂತರವು ಅನೇಕ ದೇಶಗಳಲ್ಲಿ, ವಿಶೇಷವಾಗಿ ಅಮೆರಿಕಾ, ಸಿಂಗಾಪುರ್ ಮತ್ತು ಚೀನಾದಲ್ಲಿ ಉಲ್ಬಣಗೊಳ್ಳುತ್ತಿದೆ.

ಕೆಲವು ದಕ್ಷಿಣದ ರಾಜ್ಯಗಳಲ್ಲಿ, ವಿಶೇಷವಾಗಿ ಕೇರಳದಲ್ಲಿ ಪ್ರಕರಣಗಳು ಹೆಚ್ಚಳವಾಗಿ, ಒಂದು ಸಾವು ಸಹ ವರದಿಯಾಗಿದೆ. ಇನ್ಫ್ಲುಯೆನ್ಸ-ಲೈಕ್ ಇಲ್ನೆಸ್ (ILI) ಮತ್ತು ಉಸಿರಾಟದ ಕಾಯಿಲೆಗಳ ಇತ್ತೀಚಿನ ಏರಿಕೆಯಿಂದಾಗಿ ಆರೋಗ್ಯ ಸೌಲಭ್ಯಗಳು ಮತ್ತು ಸೇವೆಗಳ ಪ್ರತಿಕ್ರಿಯೆಯ ಸಿದ್ಧತೆಯನ್ನು ಸಚಿವರು ಪರಿಶೀಲಿಸುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೆಲವು ರಾಜ್ಯಗಳಲ್ಲಿ ಕೋವಿಡ್ ಸೇರಿದಂತೆ ತೀವ್ರತರವಾದ ಉಸಿರಾಟದ ಕಾಯಿಲೆ (SARI) ಸಹ ಹೆಚ್ಚಾಗುತ್ತಿದೆ. ಆರೋಗ್ಯ ಸಚಿವರು ವೈದ್ಯಕೀಯ ಆಮ್ಲಜನಕ, ಆಸ್ಪತ್ರೆ ಹಾಸಿಗೆಗಳು, ವೆಂಟಿಲೇಟರ್‌ಗಳು, ಔಷಧಗಳು, ರೋಗನಿರ್ಣಯ ಮತ್ತು ಉಲ್ಲೇಖಿತ ಸಾರಿಗೆ ಮತ್ತು ಕಣ್ಗಾವಲು ಕ್ರಮಗಳ ಲಭ್ಯತೆಯ ಸ್ಥಿತಿಯ ಮಾಹಿತಿಯನ್ನು ತೆಗೆದುಕೊಳ್ಳುತ್ತಾರೆ.

ನಿಯಮ ಉಲ್ಲಂಘನೆ ಆರೋಪ

ಮೈಸೂರಿನ ಖಾಸಗಿ ನರ್ಸಿಂಗ್ ಹೋಂಗೆ ಬೀಗ

ಮೈಸೂರು, ಡಿ.19(ಆರ್‌ಕೆ)-ಪ್ರೀ ಕನ್ಸೆಪ್ಷನ್ ಅಂಡ್ ಪ್ರೀ ನೇಟಲ್ ಡಯಾಗ್ನೋಸ್ಟಿಕ್ ಟೆಕ್ನಿಕ್ಸ್ (PCPNDT) ಕಾಯ್ದೆ 1994ರ ನಿಯಮ ಉಲ್ಲಂಘನೆ ಆರೋಪದ ಹಿನ್ನೆಲೆಯಲ್ಲಿ ಮೈಸೂರಿನ ಖಾಸಗಿ ನರ್ಸಿಂಗ್ ಹೋಂಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಇಂದು ಬೀಗ ಹಾಕಿದ್ದಾರೆ.

ಶಿಶು ಭ್ರೂಣ ಹತ್ಯೆ, ಲಿಂಗ ಪತ್ತೆ ಪ್ರಕರಣಗಳು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಮೈಸೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು, ಸಾರ್ವಜನಿಕರಿಂದ ಬಂದ ಮಾಹಿತಿ ಮೇರೆಗೆ ಬೋಗಾದಿಯಲ್ಲಿರುವ ಶ್ರೀದೇವಿ ನರ್ಸಿಂಗ್ ಹೋಂನಲ್ಲಿ ಪರಿಶೀಲಿಸಿದರು. ಅನುಮತಿ ಪಡೆದು ಅಳವಡಿಸಿರುವ ಸ್ಕ್ಯಾನಿಂಗ್ ಯಂತ್ರ ಬದಿಗಿರಿಸಿ, ಮತ್ತೊಂದರಲ್ಲಿ ಸ್ಕ್ಯಾನ್ ಮಾಡಲಾಗುತ್ತಿತ್ತು. ಮತ್ತೊಂದೆಡೆ ಗರ್ಭಿಣಿಯರಿಗೆ ಸ್ಕ್ಯಾನಿಂಗ್, ಭ್ರೂಣ ಬೆಳವಣಿಗೆ ಪತ್ತೆ ಮಾಡಿರುವುದಕ್ಕೆ



ಕಂಪ್ಯೂಟರ್‌ನಲ್ಲಿ ಯಾವುದೇ ಡೇಟಾ ಸಂರಕ್ಷಿಸಿಡದೇ ಪ್ರಕ್ರಿಯೆ ನಡೆಸಲಾಗಿದೆ. ಗೈನಕಾಲಜಿ ತಜ್ಞರಲ್ಲದ ಎಂಬಿಬಿಎಸ್ ಪದವಿ ಹೊಂದಿರುವ ನರ್ಸಿಂಗ್ ಹೋಂ ಮಾಲೀಕರೇ ಸ್ಕ್ಯಾನಿಂಗ್ ಮಾಡುತ್ತಿರುವುದು ಪರಿಶೀಲನೆ ವೇಳೆ ಬೆಳಕಿಗೆ ಬಂದಿತು.

ಅಲ್ಲದೇ ಗರ್ಭಿಣಿಯರ ಆರೋಗ್ಯ ಪರೀಕ್ಷೆ ಇಂತಹ ವೇಳೆ ಮಾಡಿದ ಸ್ಕ್ಯಾನಿಂಗ್, ಅಬಾರ್ಷನ್ ಕುರಿತಂತೆ ಯಾವುದೇ ಮಾಹಿತಿ, ಅಂಕಿ-ಅಂಶಗಳನ್ನು ಸಾಫ್ಟ್‌ವೇರ್‌ನಲ್ಲಿ ಸೇವ್ ಮಾಡದಿರುವುದು, ನಿಯಮಾನುಸಾರ ಆರೋಗ್ಯ ಇಲಾಖೆಗೆ ವಿವರ ನೀಡದೇ ಬೇಕಾಬಿಟ್ಟಿಯಾಗಿ ನರ್ಸಿಂಗ್ ಹೋಂನಲ್ಲಿ ಹೆರಿಗೆ ಮಾಡಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ ಅಲ್ಲಿನ ಒಳರೋಗಿಗಳನ್ನು ಡಿಸ್‌ಚಾರ್ಜ್ ಮಾಡಿ, ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಯಿತು.

ತಪಾಸಣೆ ವೇಳೆ ಕಂಡು ಬಂದ ಲೋಪ-ದೋಷಗಳು, ಜೊತೆಗೆ ನಿಯಮ ಉಲ್ಲಂಘನೆಯ ಮಾಹಿತಿ ಪಡೆದ ಅಧಿಕಾರಿಗಳು, ದಾಖಲೆಗಳನ್ನು ವಶಪಡಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಈ ವೇಳೆ ಆರ್‌ಸಿಹೆಚ್ ಡಾ. ಎಂ.ಎಸ್.ಜಯಂತ್, ಡಾ. ಗೋಪಿನಾಥ್, ಡಾ. ಪುಟ್ಟತಾಯಮ್ಮ, ಕೆಪಿಎಂಇ ವಕೀಲರಾದ ಸುಚಿತ್ರ ಹಾಗೂ ಸಿಬ್ಬಂದಿ ಹಾಜರಿದ್ದರು. ಪಿಸಿಪಿಎನ್‌ಡಿಟಿ ಕಾಯ್ದೆ ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ನರ್ಸಿಂಗ್ ಹೋಂನ ಮುಖ್ಯಸ್ಥರನ್ನು ಅಧಿಕಾರಿಗಳು ವಿಚಾರಣೆಗೊಳಪಡಿಸಿದ್ದಾರೆ.

ಶಿರಡಿ ಪ್ರಧಾನ ಅರ್ಚಕ ಸುಲಾಖೆ ಮಹಾರಾಜ್ ಮೈಸೂರು ಭೇಟಿ



ಮೈಸೂರು: ಮಹಾರಾಷ್ಟ್ರದ ಶಿರಾಡಿ ದೇವಸ್ಥಾನದ ಪ್ರಧಾನ ಅರ್ಚಕ ಶ್ರೀ ಸುಲಾಖೆ ಶಾಸ್ತ್ರಿ ಮಹಾರಾಜರು ಮತ್ತು ಅವರ ಪತ್ನಿ ಮಂಜು ಸುಲಾಖೆ ಅವರು ಜಯಲಕ್ಷ್ಮೀಪುರಂನ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಇಂದು "ಉತ್ಥಾನ ದ್ವಾದಶಿ"ಯ ಮುನ್ನಾದಿನದಂದು ಮುಖ್ಯ ಅತಿಥಿಗಳಾಗಿದ್ದರು. ದಂಪತಿಗಳನ್ನು ದೇವಸ್ಥಾನದ ಸಿ.ಇ.ಓ ಕೆ.ಆರ್.ಯೋಗ ನರಸಿಂಹನ್ (ಮುರಳಿ) ಸತ್ಕರಿಸಿದರು. ವಿವಿಧ ಸಂಘಟನೆಯ ಮುಖಂಡರು ಸನ್ಮಾನಿಸಿದರು ನಂತರ ಭಕ್ತಾದಿಗಳಿಗೆ ಆಶೀರ್ವಾದ ನೀಡಿದರು. ಈ ಸಂದರ್ಭದಲ್ಲಿ ಸೋಮಸುಂದರ್, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ದತ್ತ ಯೋಗ ತಜ್ಞ ಮೋಹನ್, ರಾಮಕೃಷ್ಣ ನಗರದ ಪ್ರಸನ್ನ ಗಣಪತಿ ಮತ್ತು ಶಿರಾಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್‌ನ ಡಾ. ಸೀತಾಲಕ್ಷ್ಮಿ, ಎಕೆಬಿಎಂಎಸ್ ರಾಜ್ಯ ಉಪಾಧ್ಯಕ್ಷ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಾಸುದೇವ ಮಹಾರಾಜರ ಪ್ರತಿಷ್ಠಾನ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು ಮತ್ತು ವಿಪ್ರ ಸದಸ್ಯ ರಾಮಕೃಷ್ಣ. ವಿಕ್ರಮ್ ಅಯ್ಯಂಗಾರ್, ಕೆ.ಎಂ. ನಿಶಾಂತ್, ಚಕ್ರಪಾಣಿ ಇನ್ನಿತರರು ಹಾಜರಿದ್ದರು.

ಶ್ರೀ ಪಂಚಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ

ಮೈಸೂರು, ಡಿ. 19- ಮೈಸೂರಿನ ಲಲಿತ ಮಹಲ್ ಹೋಟೆಲ್ ಮುಂಭಾಗದ ಆವರಣದಲ್ಲಿ ಶ್ರೀ ಪಂಚಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ ಹಾಗೂ ಮಲೆಯಾಳದ ಹುತ್ತೂರಮ್ಮನ ಜಾತ್ರಾ ಮಹೋತ್ಸವ ಡಿ. 24 ರಂದು ಬೆಳಗ್ಗೆ 9.45 ರಿಂದ 12 ಗಂಟೆಯೊಳಗೆ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಡಿ. 19- ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಡಿ. 21 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821-4259259 ಸಂಪರ್ಕಿಸಬಹುದು.

ಮನೋರಂಜನ್ ಮನೆಯಲ್ಲಿ ಎರಡನೇ ದಿನವೂ ದೆಹಲಿ ಪೊಲೀಸರಿಂದ ತನಿಖೆ

ಮೂರನೇ ಪುಟದಿಂದ

ಆತನ ದೈನಂದಿನ ಚಟುವಟಿಕೆ ಹೇಗಿತ್ತು? ಎಂಬ ನಿಟ್ಟಿನಲ್ಲಿ ಇಂದು ತನಿಖೆ ನಡೆಸಲಾಯಿತು ಎನ್ನಲಾಗಿದೆ. ಕೃತ್ಯಕ್ಕೂ ಮುನ್ನ ಮನೋರಂಜನ್ ಮನೆಯಲ್ಲಿದ್ದಾಗ ಮೊಬೈಲ್ ಮೂಲಕ ಏನಾದರೂ ಚರ್ಚೆ ಮಾಡುತ್ತಿದ್ದದ್ದು ತಮ್ಮ ಕಿವಿಗೆ ಬಿದ್ದಿರುವ ನೆನಪಿದೆಯೇ? ಕೊನೆಯದಾಗಿ ಮನೆಯಿಂದ ಹೊರಟಿದ್ದಾಗ, ಎಲ್ಲಿಗೆ ಹೋಗುತ್ತಿದ್ದೇನೆಂದು ಹೇಳಿದ್ದ? ಎಂಬ ಪ್ರಶ್ನೆಗಳು ಮನೋರಂಜನ್ ತಾಯಿ ಮತ್ತು ಸಹೋದರಿ ಮುಂದಿಟ್ಟು ಉತ್ತರ ಪಡೆಯಲಾಗಿದೆ ಎಂದು ತಿಳಿದು ಬಂದಿದೆ.

ವಿಚಾರಣೆ ವೇಳೆ ತನಿಖಾಧಿಕಾರಿಗಳು ಮನೋರಂಜನ್ ತಂದೆ ದೇವರಾಜೇಗೌಡ ಅವರ ಮೊಬೈಲ್ ವಶಕ್ಕೆ ಪಡೆದಿದ್ದರು. ಅಲ್ಲದೆ, ಪ್ರಮುಖವಾಗಿ ಮನೆಯಲ್ಲಿ ನಡೆದ ಎಲ್ಲಾ ತನಿಖಾ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಗಿದೆ ಎಂದು ಹೇಳಲಾಗಿದೆ. ನಿನ್ನೆ ವಿಚಾರಣೆ ವೇಳೆ ಮನೋರಂಜನ್ ಬಳಸುತ್ತಿದ್ದ ನೋಟ್ ಪುಸ್ತಕ, ಪಾಸ್‌ಪೋರ್ಟ್, ಪುಸ್ತಕಗಳ ಸಹಿತ ಕೆಲವು ಮಹತ್ವದ ದಾಖಲೆಗಳನ್ನೂ ವಶಕ್ಕೆ ಪಡೆದು ತನಿಖಾಧಿಕಾರಿಗಳು ತೆರಳಿದ್ದರು. ಮನೋರಂಜನ್, ಆತನ ಕುಟುಂಬದವರು ನೀಡಿರುವ ಹೇಳಿಕೆಗಳಲ್ಲಿ ಸಾಮ್ಯತೆ ಕಂಡು ಬಾರದ ಹಿನ್ನೆಲೆಯಲ್ಲಿ ಇಂದು ವಿಡಿಯೋ ಚಿತ್ರೀಕರಣ ಮಾಡಲಾಗಿದೆ ಎನ್ನಲಾಗಿದೆ. ಪುತ್ರ ದೆಹಲಿಯಲ್ಲಿ ಉದ್ಯೋಗದಲ್ಲಿದ್ದು, ಹೀಗಾಗಿ ಅವನಿಗೆ ಆಗಾಗ್ಗೆ ಅಲ್ಲಿಂದ ಫೋನ್ ಕರೆಗಳು ಬರುತ್ತಿರುತ್ತವೆ. ಮೈಸೂರಿನಲ್ಲಿ ಇರಲು ಅವನಿಗೆ ಸಮಯವೇ ಇಲ್ಲವೆಂದು ಮನೋರಂಜನ್ ತಾಯಿ ನೆರೆಹೊರೆಯೊಂದಿಗೆ ಹೇಳಿಕೊಂಡಿದ್ದರು ಎನ್ನಲಾಗಿದೆ. ಇಂಜಿನಿಯರಿಂಗ್ ಮೊಟಕುಗೊಳಿಸಿ, ಉದ್ಯೋಗವೂ ಇಲ್ಲದೆ, ಹತಾಶೆಯಿಂದ ಒಮ್ಮೆಗೆ ಹಣ ಮಾಡಬೇಕೆಂಬ ನಿಟ್ಟಿನಲ್ಲಿ ಈ ಕೃತ್ಯದಲ್ಲಿ ಭಾಗಿಯಾಗಿರಬಹುದೇ? ಎಂಬ ನಿಟ್ಟಿನಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಲಾಗಿದೆ.

ಮೈಸೂರಲ್ಲೇ ದೆಹಲಿ ಪೊಲೀಸರ ವಾಸ್ತವ್ಯ

● ಇಬ್ಬರು ಪೊಲೀಸ್ ಅಧಿಕಾರಿಗಳ ತನಿಖೆ ಕುತೂಹಲ ● ಸ್ಥಳೀಯ ಪೊಲೀಸರಿಗೂ ಗುಟ್ಟು ಬಿಡದ ದೆಹಲಿ ಖಾಕಿ

ಮೈಸೂರು,ಡಿ.19(ಬಿಎಲ್‌ಯು)-ದೆಹಲಿಯಿಂದ ಆಗಮಿಸಿರುವ ಪೊಲೀಸ್ ಅಧಿಕಾರಿಗಳು ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದಾರೆ. ಆರು ಮಂದಿ ಅಧಿಕಾರಿಗಳ ತಂಡದಲ್ಲಿ ಇಬ್ಬರು ಗುಪ್ತಚರ ಇಲಾಖೆಯ ಅಧಿಕಾರಿಗಳು ಎನ್ನಲಾಗಿದೆ. ಈ ಪೈಕಿ ಇಬ್ಬರು ಮನೋರಂಜನ್ ಮನೆಗೆ ಬಾರದೇ ಪ್ರಕರಣ ಸಂಬಂಧ ಬೇರೆ ಸುಳಿವು ಆಧರಿಸಿ ಕೆಲವು ಸ್ಥಳಗಳಿಗೆ ಭೇಟಿ ನೀಡಿದ್ದರು ಎಂದು ತಿಳಿದು ಬಂದಿದೆ. ಆದರೆ ಯಾವ ಸ್ಥಳಗಳಿಗೆ ಭೇಟಿ ನೀಡಿದ್ದರು? ಯಾವ ಸಾಕ್ಷ್ಯ ಕಲೆ ಹಾಕಿದರು? ಯಾವ ಸುಳಿವು ದೊರಕಿತು? ಎಂಬ ವಿಚಾರಗಳು ತಿಳಿದು ಬಂದಿಲ್ಲ. ಇದರಿಂದ ಅವರ ರಹಸ್ಯ ತನಿಖೆಯ ಹಾದಿ ತೀವ್ರ ಕುತೂಹಲ ಮೂಡಿಸಿದೆ.

ದೆಹಲಿ ಪೊಲೀಸರು ವಿಜಯನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ, ಮನೋರಂಜನ್ ಸಂಬಂಧ ಹಲವು ಮಾಹಿತಿ ಕಲೆ ಹಾಕಿಕೊಂಡಿದ್ದಾರೆ. ಆದರೆ ಅವರ ತನಿಖೆಯ ಯಾವುದೇ ಮಾಹಿತಿಯನ್ನೂ ಸ್ಥಳೀಯ ಪೊಲೀಸರ ಜೊತೆ ಹಂಚಿಕೊಂಡಿಲ್ಲ. ಅಲ್ಲದೆ, ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನಿತರ



ಆರೋಪಿಗಳ ಮನೆಗಳಲ್ಲಿಯೂ ದೆಹಲಿ ಪೊಲೀಸರು ಶೋಧ ಕಾರ್ಯ ನಡೆಸಿದ್ದಾರೆ. ಜೊತೆಗೆ ಆರೋಪಿಗಳ ಮನೆಯಲ್ಲಿ ದೊರೆತಿರುವ ಸಾಕ್ಷ್ಯಗಳ ಹೊಂದಾಣಿಕೆ ಸಂಬಂಧ ಫೋನ್ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ ಎನ್ನಲಾಗಿದೆ. ಮನೋರಂಜನ್ ಪೊಲೀಸ್ ಕಸ್ಟಡಿ ಮುಗಿದ ತರುವಾಯ ನ್ಯಾಯಾಧೀಶರ ಮುಂದೆ ಹಾಜರುಪಡಿಸುವ ದೆಹಲಿ ಪೊಲೀಸರು ಮತ್ತಷ್ಟು ದಿನ ಪೊಲೀಸ್ ಕಸ್ಟಡಿಗೆ ಕೇಳಲಿದ್ದಾರೆ ಎನ್ನಲಾಗಿದೆ. ಆ ವೇಳೆ ಮನೋರಂಜನ್‌ನನ್ನು ಮೈಸೂರಿಗೆ ಕರೆ ತಂದು ಅವನ ಮನೆಯಲ್ಲಿ ಮಹಜರು ನಡೆಸುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ. ಮೈಸೂರಿನಲ್ಲಿರುವ ದೆಹಲಿ ಪೊಲೀಸರು, ನಾಳೆ ಯಾವ ಸ್ಥಳಗಳಿಗೆ ಭೇಟಿ ನೀಡುತ್ತಾರೆ? ಯಾರನ್ನು ವಿಚಾರಣೆಗೊಳಪಡಿಸುತ್ತಾರೆ? ಎಂಬ ಮಾಹಿತಿಗಳು ಲಭ್ಯವಾಗಿಲ್ಲ. ವಿಚಾರಣೆ ವೇಳೆ ಪೊಲೀಸರ ಸರಣಿ ಪ್ರಶ್ನೆಗಳಿಗೆ ಉತ್ತರ ನೀಡಿದ ಶೈಲಜಾ ಮಾನಸಿಕವಾಗಿ ಕುಗ್ಗಿದ್ದಾರೆ ಎನ್ನಲಾಗಿದೆ.

ವಾಹನಕ್ಕಾಗಿ ರಸ್ತೆಬದಿಯಲ್ಲಿ ಕಾದು ನಿಂತ ದೆಹಲಿ ಪೊಲೀಸರು



ಮೈಸೂರು,ಡಿ.19(ಪಿಎಂ)-ಮಂಗಳವಾರ ಮನೋರಂಜನ್ ಮನೆಯಲ್ಲಿ ತನಿಖೆ ನಡೆಸಿ ಹೊರಬಂದ ದೆಹಲಿ ಪೊಲೀಸರು, ತೆರಳಲು ವಾಹನವಿಲ್ಲದೇ 10 ನಿಮಿಷಕ್ಕೂ ಹೆಚ್ಚು ಕಾಲ ರಸ್ತೆಯಲ್ಲೇ ನಿಲ್ಲುವಂತಾಗಿತ್ತು. ಸ್ಥಳೀಯ ಪೊಲೀಸರು, ಮುಂಗಡವಾಗಿ ವಾಹನದ ವ್ಯವಸ್ಥೆ ಮಾಡದ ಕಾರಣ ಅವರು ಕಾದು ನಿಲ್ಲಬೇಕಾಯಿತು.

ಸ್ಥಳೀಯ ಪೊಲೀಸರ ಸಮನ್ವಯದ ಕೊರತೆಯಿಂದ ನಾಲ್ವರು ದೆಹಲಿ ಪೊಲೀಸರು, ಮನೋರಂಜನ್ ಮನೆಯ ರಸ್ತೆಯಲ್ಲಿ ಮುಖ್ಯ ರಸ್ತೆಯವರೆಗೂ ನಡೆದುಕೊಂಡು ಬರಬೇಕಾಯಿತು. ಹೀಗೆ ಸುಮಾರು 50 ಮೀಟರ್ ನಡೆದು ಬಂದರಲ್ಲದೆ, ಕೆಲಕಾಲ ಅಲ್ಲೇ ನಿಂತುಕೊಳ್ಳಲೂ ಬೇಕಾಯಿತು. ಈ ವೇಳೆ ಮಾಧ್ಯಮದವರು ಅವರನ್ನು ವಿಚಾರಣೆ ಸಂಬಂಧ ಮಾತನಾಡಿಸಲು ಯತ್ನಿಸಿದರೂ ಅವರು ಸ್ಪಂದಿಸಲಿಲ್ಲ. ಸ್ವಲ್ಪ ಸಮಯದ ನಂತರದಲ್ಲಿ ಬಂದ ಸ್ಥಳೀಯ ಪೊಲೀಸ್ ಜೀಪ್‌ನಲ್ಲಿ ಅವರು ತೆರಳಿದರು.

ಕೈ ಮುಗಿದು ಬೇಸರ ವ್ಯಕ್ತಪಡಿಸಿದ ದೇವರಾಜೇಗೌಡ



ಮೈಸೂರು,ಡಿ.19(ಪಿಎಂ)-ಹೇಳೊದನ್ನೆಲ್ಲಾ ನಿನ್ನೆಯೇ ಹೇಳಿ ಆಗಿದೆ. ದಯವಿಟ್ಟು ನಿಮ್ಮ ಕೈ ಮುಗೀತೀನಿ ಇಲ್ಲಿಂದ ಹೊರಟು ಹೋಗಿ ಎಂದು ಮನೋರಂಜನ್ ತಂದೆ ದೇವರಾಜೇಗೌಡ ಮಾಧ್ಯಮದವರಲ್ಲಿ ಮನವಿ ಮಾಡಿದರು. ಮಂಗಳವಾರ ತನಿಖಾಧಿಕಾರಿಗಳು ಅವರ ಮನೆಗೆ ಭೇಟಿ ನೀಡುವ ಮುನ್ನ ಮನೆಯಿಂದ ಹೊರ ಹೊರಟ್ಟಿದ್ದ ಅವರಿಗೆ ಮಾಧ್ಯಮದವರು ಎದುರಾದಾಗ, ಹೀಗೆ ಹೇಳುವ ಮೂಲಕ ತಮ್ಮೊಳಗಿನ ಬೇಸರ ವ್ಯಕ್ತಪಡಿಸಿದರು. ನಾನು ಎಲ್ಲಾ ವಿಚಾರಗಳನ್ನು ನಿನ್ನೆಯೇ ಪೊಲೀಸರಿಗೆ ಹೇಳಿದ್ದೇನೆ. ನನ್ನನ್ನೂ ಏನೂ ಕೇಳಬೇಡಿ ಎಂದು ಹೇಳಿ ತಮ್ಮ ದ್ವಿಚಕ್ರ ವಾಹನದಲ್ಲಿ ಸ್ಥಳದಿಂದ ನಿರ್ಗಮಿಸಿದರು.

ಮನೋರಂಜನ್ ಹಣಕಾಸು ಮೂಲದ ಹುಡುಕಾಟದಲ್ಲಿ ತನಿಖಾಧಿಕಾರಿಗಳು



ಮೈಸೂರು,ಡಿ.19(ಬಿಎಲ್‌ಯು)-ಮನೋರಂಜನ್‌ಗೆ ಪುಸ್ತಕ ಖರೀದಿ ಸುಷ್ಟು ಮಾತ್ರ ಹಣ ಕೊಡುತ್ತಿದ್ದೆವೆಂದು ಆತನ ಪೋಷಕರು ದೆಹಲಿ ಪೊಲೀಸರಲ್ಲಿ ಹೇಳಿದ್ದು, ಹಾಗಾದರೆ ದೆಹಲಿಗೆ ಬಹಳಷ್ಟು ಬಾರಿ ಹೋಗಿ ಬರಲು ಆತನಿಗೆ ಹಣದ ಮೂಲ ಎಲ್ಲಿತ್ತು? ಎಂಬ ನಿಟ್ಟಿನಲ್ಲಿ ತನಿಖಾಧಿಕಾರಿಗಳು ಹುಡುಕಾಟ ನಡೆಸುತ್ತಿದ್ದಾರೆ ಎನ್ನಲಾಗಿದೆ.

ಮನೋರಂಜನ್ ಪುಸ್ತಕ ಖರೀದಿಗಾಗಿ ಹೆಚ್ಚೆಂದರೆ 2 ಸಾವಿರ ರೂ. ಕೇಳಿ ಪಡೆಯುತ್ತಿದ್ದ. ನಮಗೆ ತಿಳಿದಿರುವಂತೆ ನನ್ನ ಮಗ ಯಾವುದೇ ಬ್ಯಾಂಕ್ ಖಾತೆ ಹೊಂದಿರಲಿಲ್ಲವೆಂದು ಪೋಷಕರು ತಿಳಿಸಿದ್ದಾರೆ ಎಂದು ತಿಳಿದು ಬಂದಿದೆ. ನನ್ನ ಮಗನಿಗೆ ಯಾವುದೇ ದುಶ್ಚಟಗಳಿರಲಿಲ್ಲ. ಮನೆಯಿಂದ ಹೆಚ್ಚಾಗಿ ಹೊರಗೆ ಹೋಗುತ್ತಿರಲಿಲ್ಲ. ಸ್ನೇಹಿತರ ಸಹವಾಸ ಇರಲಿಲ್ಲ. ಹೀಗಿರುವಾಗ ದುಶ್ಚಟ ಬೆಳೆಸಿಕೊಳ್ಳಲು ಹೇಗೆ ಸಾಧ್ಯವೆಂದು ದೆಹಲಿ ಪೊಲೀಸರನ್ನೇ ಮನೋರಂಜನ್ ತಾಯಿ ಶೈಲಜಾ ಪ್ರಶ್ನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ನಮಗೆ ದೊಡ್ಡ ತೋಟವಿದೆ, ಮನೆ ಬಾಡಿಗೆ ಬರುತ್ತದೆ. ಜಮೀನಿನಲ್ಲಿ ಬರುವ ಆದಾಯದಿಂದ ಸುಖ ಜೀವನ ಮಾಡಬಹುದಿತ್ತು.

ಇಷ್ಟೆಲ್ಲಾ ಆರ್ಥಿಕ ಶಕ್ತಿಯಿರುವ ಕಾರಣ ಕೆಲಸಕ್ಕೆ ಸೇರುವಂತೆ ಯಾವತ್ತೂ ಅವನ ಮೇಲೆ ಒತ್ತಡ ಹೇರಿಲ್ಲ ಎಂದು ವಿವರಿಸಿದ್ದಾರೆ ಎಂದು ತಿಳಿದು ಬಂದಿದೆ. ದೆಹಲಿ ಸೇರಿದಂತೆ ಇತರೆಡೆ ಸಂಪರ್ಕ ಇರುವ ಬಗ್ಗೆ ನಮಗೆ ಎಂದೂ ಅನುಮಾನ ಬಂದಿರಲಿಲ್ಲ ಎಂದು ಶೈಲಜಾ ಸ್ಪಷ್ಟಪಡಿಸಿದ್ದಾರೆನ್ನಲಾಗಿದೆ.

ಮೈಸೂರು ಮಿತ್ರ

ಕಾನೂನಿನ ಅರಿವಿದ್ದರೆ ಅಪರಾಧ ತಡೆ ಸಾಧ್ಯ

ಅಪರಾಧ ತಡೆ ಮಾಸಾಚರಣೆಯಲ್ಲಿ ಎಸ್ಪಿ ಸೀಮಾ ಲಾಟ್ಕರ್ ಅಭಿಪ್ರಾಯ



ತಿ.ನರಸೀಪುರ, ಡಿ.19–ಸಮುದಾಯದ ಜನರಲ್ಲಿ ಕಾನೂನಿನ ಬಗ್ಗೆ ಅರಿವು ಇದ್ದಲ್ಲಿ ಅಪರಾಧ ಪ್ರಕರಣಗಳನ್ನು ತಡೆಯಲು ಸಾಧ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಪೊಲೀಸ್ ಇಲಾಖೆ ಹಮ್ಮಿಕೊಂಡಿದ್ದ ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜನರಲ್ಲಿ ಪೊಲೀಸರೆಂದರೆ ಸಾಮಾನ್ಯವಾಗಿ ಭಯ, ಹಿಂಜರಿಕೆ ಸಹಜವಾಗಿರುತ್ತದೆ. ಭಯ ಬಿಟ್ಟು ಧೈರ್ಯವಾಗಿ ಪೊಲೀಸರೊಂದಿಗೆ ಉತ್ತಮ ಸಂಬಂಧ ಕಾಪಾಡಿಕೊಳ್ಳಬೇಕು ಹಾಗೂ ಅವರಿಗೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ತಮ್ಮ ಕೈಲಾದ ಸಹಕಾರ ನೀಡಬೇಕು, ಕಾನೂನನ್ನು ಯಾರು ಗೌರವಿಸುತ್ತಾರೋ ಅವರು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ. ಕಾನೂನನ್ನು ಇನ್ನೊಬ್ಬರ ಒತ್ತಾಯಕ್ಕಾಗಲಿ ಪೊಲೀಸರಿಗೆ ಭಯಪಟ್ಟು ಪಾಲಿಸುವುದನ್ನು ಬಿಟ್ಟು ತಮ್ಮ ಜೀವದ ರಕ್ಷಣೆಗಾಗಿ ಕಾನೂನು ಪಾಲನೆ ಮಾಡಬೇಕು ಎಂದರು.

ಮೊಬೈಲ್ ಗೀಳಿನಿಂದ ಭವಿಷ್ಯ ಹಾಳು!: ಶಾಲಾ ಕಾಲೇಜಿನ ಮಕ್ಕಳು ಮೊಬೈಲ್ ಗೀಳಿನಿಂದಾಗಿ ಹಲವಾರು ಸಮಸ್ಯೆಗಳಿಗೆ ಸಿಲುಕಿಕೊಂಡಿರುವ ಉದಾಹರಣೆಗಳು ಕಣ್ಣ ಮುಂದಿವೆ. ಫೇಸ್‌ಬುಕ್, ವಾಟ್ಸಪ್ ಗೀಳಿನಿಂದಾಗಿ ಓದಿನ ಕಡೆ ಗಮನ ಕೇಂದ್ರೀಕರಿಸದೇ ಇರುವುದರಿಂದ ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ಮೊಬೈಲ್ ಬಳಕೆ ಕಡಿಮೆ ಮಾಡಿ ಓದಿನ ಕಡೆ ಹೆಚ್ಚು ಗಮನಹರಿಸಿ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

> ತಾಲೂಕಿನಲ್ಲಿ ಎಲ್ಲೇ ಲೈಂಗಿಕ ದೌರ್ಜನ್ಯ ನಡೆದಲ್ಲಿ ತಕ್ಷಣ ಪೊಲೀಸ್ ಠಾಣೆಗೆ ದೂರು ನೀಡುವ ಧೈರ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಹಾಗಾದಾಗ ಮಾತ್ರವೇ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗುತ್ತದೆ. ಯಾರೋ ಅಪರಿಚಿತರು ಕರೆದಾಗ ಹೋಗುವುದು, ಅವರೊಂದಿಗೆ ವ್ಯವಹರಿಸುವುದು ತಪ್ಪು. ದ್ವಿಚಕ್ರ ವಾಹನಗಳನ್ನು ಚಲಾಯಿಸುವಾಗ ಸವಾರರು ತಪ್ಪದೇ ಹೆಲ್ಮೆಟ್ ಧರಿಸಬೇಕು, ನಾಲ್ಕು ಚಕ್ರ ವಾಹನಗಳನ್ನು ಚಲಾಯಿಸುವ ಸವಾರರು ಕಡ್ಡಾಯವಾಗಿ ಸೀಟ್ ಬೆಲ್ಟ್ ಹಾಕಿಕೊಳ್ಳಬೇಕು. ಇದರಿಂದ ಅಪಘಾತ ಸಂಭವಿಸಿದಾಗ ಜೀವಕ್ಕೆ ಅಪಾಯ ಕಡಿಮೆಯಾಗುತ್ತದೆ. ಸಮಾಜದ ರಕ್ಷಣೆಗೆ ಪೊಲೀಸ್ ಇಲಾಖೆ ಸದಾ ಸನ್ನದ್ಧವಾಗಿರುತ್ತದೆ.
> - ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಕಾಲೇಜಿನ ಪ್ರಾಂಶುಪಾಲ ಜಗದೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮಕ್ಕೆ ಮೊದಲು ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ, ದೇವಾಲಯದ ಮುಂಭಾಗ ಸ್ವತಃ ಬೈಕ್ ಸವಾರಿ ಮಾಡುವ ಮೂಲಕ ರ್‍ಯಾಲಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಮಾಹಿತಿದಾರ ರವಿ, ಮಾದೇಶ್, ಶಂಕರ್, ಅನಾಥ ಶವಗಳ ಮುಕ್ತಿದಾತ ಡಾ.ಮಾದೇಶ್, ರೈಸ್ ಮಿಲ್ ಉದ್ಯಮಿ ಮಹಮ್ಮದ್ ನಯಿಮುಲ್ಲಾರವರನ್ನು ಸನ್ಮಾನಿಸಲಾಯಿತು.

ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ರಕ್ಷಿತಾ, ಚಂದನ, ಪವನ,ರಾಜಶೇಖರ್‌ರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ, ಸಬ್ ಇನ್ಸ್‌ಪೆಕ್ಟರ್ ಜಗದೀಶ್ ಧೂಳ್‌ಶೆಟ್ಟಿ, ಪ್ರಾಂಶುಪಾಲೆ ಬಿ.ಪಿ. ಇಂದಿರಾ, ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕ ವೆಂಕಟೇಶ್ ಮೂರ್ತಿ, ವಾಣಿಜ್ಯಶಾಸ್ತ್ರ ವಿಭಾಗದ ರಾಮಮೂರ್ತಿ, ದೈಹಿಕ ಶಿಕ್ಷಣಾಧಿಕಾರಿ ಶಶಿರೇಖಾ, ವಿದ್ಯೋದಯ ಶಿಕ್ಷಣ ಸಂಸ್ಥೆಯ ಉಪನ್ಯಾಸಕ ಮೂಗೂರು ಕುಮಾರಸ್ವಾಮಿ ಹಾಜರಿದ್ದರು.

ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್ ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ

ಸಕ್ರಿಯ ರಾಜಕಾರಣದಿಂದ ದೂರವಿರಲು ನಿರ್ಧಾರ



ಭೇರ್ಯ, ಡಿ.19– ಮೈಸೂರು ಜಿಲ್ಲಾ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಮತ್ತು ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್ ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ಸಕ್ರಿಯ ರಾಜಕಾರಣದಿಂದ ದೂರವಿರಲು ನಿರ್ಧರಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಾತ್ಯಾತೀತ ಜನತಾದಳದಲ್ಲಿ ಕಳೆದ ಸುಮಾರು 18 ವರ್ಷಗಳ ಕಾಲ ಇದ್ದುಕೊಂಡು ನನ್ನ ಕೈಲಾದ ಸೇವೆಯನ್ನು ಮಾಡುತ್ತಾ ಬಂದಿದ್ದೇನೆ. ಪಕ್ಷವು ಸಹಾ ನನ್ನನ್ನು ಗುರುತಿಸಿ ಜಿಲ್ಲಾ ಪಂಚಾಯಿತಿಗೆ ಸ್ಪರ್ಧಿಸಲು ಟಿಕೆಟ್ ನೀಡಿ ಜಿಲ್ಲಾ ಪಂಚಾಯತ್ ಅಧ್ಯಕ್ಷನಾಗಲು ಅವಕಾಶ ಮಾಡಿಕೊಟ್ಟಿತ್ತಲ್ಲದೆ ಪಕ್ಷದಲ್ಲಿ ಕೆಲಸ ಮಾಡಲು ಹಲವಾರು ಅವಕಾಶಗಳನ್ನು ಕಲ್ಪಿಸಿತ್ತು. ಇದು ನನಗೆ ಸಂತೋಷ ತಂದಿದೆ. ಆದರೇ ಈಗ ರಾಜಕೀಯದಿಂದ ದೂರ ಉಳಿಯಲು ಇಚ್ಛಿಸಿದ್ದು, ಯಾರು ದೇಶದ ಅಭಿವೃದ್ಧಿಗೋಸ್ಕರ ಹಾಗೂ ಜನರ ಏಳಿಗೆಗಾಗಿ ಸೇವೆ ಸಲ್ಲಿಸಲು ಪಣತೊಡುವರು, ಅಂತಹವರಿಗೆ ಯಾವುದೇ ಸಾರ್ಥವಿಲ್ಲದೇ ನಿಸ್ವಾರ್ಥದಿಂದ ಜಾತ್ಯಾತೀತವಾಗಿ, ಪಕ್ಷಾತೀತವಾಗಿ, ವ್ಯಕ್ತಿಗತವಾಗಿ ಸೇವೆ ಸಲ್ಲಿಸಲು ತೀರ್ಮಾನಿಸಿರುವೆ ಎಂದಿದ್ದಾರೆ. ಇದರೊಂದಿಗೆ ಇನ್ನು ಮುಂದೆ ಯಾವುದೇ ಚುನಾವಣೆಗೆ ಸ್ಪರ್ಧಿಸುವುದಿಲ್ಲವೆಂದು ಪ್ರಮಾಣೀಸುತ್ತಾ ಈ ನನ್ನ ರಾಜೀನಾಮೆಯನ್ನು ನೀಡುತ್ತಿದ್ದೇನೆ ಎಂದು ಹೇಳಿರುವ ಅವರು, ಇದು ನನ್ನ ಮಾನಸಿಕ ಒಳ ಒತ್ತಡದಿಂದ ತಗೆದುಕೊಂಡಿರುವ ನಿರ್ಧಾರವೇ ಹೊರತು, ಬೇರೆ ಯಾರೂ ಸಹ ಕಾರಣರಾಗಿರುವುದಿಲ್ಲ ಎಂದು ಸ್ಪಷ್ಟಪಡಿಸಿ ಜಿಲ್ಲಾ ಜೆಡಿಎಸ್ ಘಟಕದ ಅಧ್ಯಕ್ಷರಿಗೆ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿರುವುದಾಗಿ ತಿಳಿಸಿದ್ದಾರೆ.

ಸರ್ಕಾರಿ ಶಾಲೆಯಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ

- ಶಾಲೆ ಮುಂದೆ ಜಮಾಯಿಸಿದ ಪೋಷಕರು, ಗ್ರಾಮಸ್ಥರಿಂದ ಕ್ರಮಕ್ಕೆ ಆಗ್ರಹ
- ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲು



ಹುಣಸೂರು, ಡಿ.19– ತಾಲೂಕಿನ ಹೊಸವಾರಂಚಿ ಗ್ರಾಮದ ಸರ್ಕಾರಿ ಶಾಲೆಯ ಪುಟ್ಟ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಮುಖ್ಯ ಶಿಕ್ಷಕನನ್ನು ಸ್ಥಳಕ್ಕೆ ಕರೆಸಬೇಕು. ಆತನ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಗ್ರಾಮಸ್ಥರು, ಪೋಷಕರು ಆಗ್ರಹಿಸಿದ ಘಟನೆ ಸಂಭವಿಸಿದೆ.

ಹೊಸವಾರಂಚಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ 58 ವರ್ಷದ ಎಸ್.ಕೃಷ್ಣಮೂರ್ತಿಯೇ ಈ ಆರೋಪಿಯಾಗಿದ್ದು, ಈತನ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಈತ ತಲೆಮರೆಸಿಕೊಂಡಿದ್ದಾನೆ.

ಘಟನೆಯಿಂದ ಆಕ್ರೋಶಭರಿತರಾದ ಪೋಷಕರು ಹಾಗೂ ಗ್ರಾಮಸ್ಥರು ಮಂಗಳವಾರ ಶಾಲೆ ಬಳಿ ಜಮಾಯಿಸಿ ಮುಖ್ಯ ಶಿಕ್ಷಕನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈತ ಹಲವಾರು ದಿನಗಳಿಂದ ಶಾಲೆಯ ಹೆಣ್ಣು ಮಕ್ಕಳೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದ. ಅಲ್ಲದೆ ಯಾರಿಗೂ ಹೇಳದಂತೆ ಬೆದರಿಕೆ ಹಾಕುತ್ತಿದ್ದ.

> ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಆರೋಪಿ ವಿರುದ್ಧ ಕ್ರಮವಹಿಸುವಂತೆ ಡಿಡಿಪಿಐಯವರಿಗೆ ವರದಿ ನೀಡಿದ್ದೇನೆ. ಗ್ರಾಮಾಂತರ ಪೊಲೀಸ್ ಠಾಣೆಗೂ ಸಹ ಕ್ರಮಕ್ಕೆ ದೂರು ನೀಡಲಾಗಿದೆ. -ರೇವಣ್ಣ, ಬಿಇಓ

ಕಳೆದ ಶನಿವಾರ ಶಾಲೆಗೆ ಗೈರುಹಾಜರಾಗಿದ್ದನ್ನು ಕಂಡ ಮಕ್ಕಳು ಸಹ ಶಿಕ್ಷಕರ ಮುಂದೆ ತಮ್ಮ ಗೋಳನ್ನು ಹೇಳಿಕೊಂಡಿದ್ದಾರೆ. ಪೋಷಕರಿಗೂ ಮಾಹಿತಿ ನೀಡಿದ್ದಾರೆ. ಈ ವಿಷಯವನ್ನು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಮುಟ್ಟಿಸಿದ್ದಾರೆ.

ವಿಷಯ ತಿಳಿದ ಬಿಇಓ ರೇವಣ್ಣ ಮತ್ತಿತರ ಅಧಿಕಾರಿಗಳ ತಂಡ ಮಂಗಳವಾರದಂದು ಶಾಲೆಗೆ ಭೇಟಿ ನೀಡಿತ್ತು. ವಿದ್ಯಾರ್ಥಿಗಳಿಂದ ಮಾಹಿತಿ ಪಡೆದುಕೊಂಡರು. ಈ ವೇಳೆ ಮಕ್ಕಳು ಮುಖ್ಯ ಶಿಕ್ಷಕ ಕೃಷ್ಣಮೂರ್ತಿಯಿಂದ ಆಗುತ್ತಿರುವ ಕಿರುಕುಳವನ್ನು ತಿಳಿಸಿದ್ದಾರೆ. ಮಕ್ಕಳೊಂದಿಗೆ ಅನುಚಿತವಾಗಿ ವರ್ತಿಸಿರುವ ಮುಖ್ಯ ಶಿಕ್ಷಕನನ್ನು ಕೆಲಸದಿಂದಲೇ ವಜಾ ಮಾಡಬೇಕೆಂದು ಪೋಷಕರು, ಗ್ರಾಮದ ಮುಖಂಡರು ಆಗ್ರಹಿಸಿದರು.

ಈ ಬಗ್ಗೆ ಬಿಇಓ ರೇವಣ್ಣರಿಗೆ ಗ್ರಾಮದ ಯಜಮಾನರಾದ ಮಹೇಶ್, ಶಿವಕುಮಾರ್, ಎಸ್.ಡಿ.ಎಂ.ಸಿ.ಅಧ್ಯಕ್ಷೆ ರಜನಿ, ಮುಖಂಡರಾದ ಮಹೇಶ್, ಎಚ್.ಕೆ.ರಮೇಶ್, ಚಂದ್ರೇಗೌಡ ದೂರು ನೀಡಿ ಕ್ರಮಕ್ಕೆ ಆಗ್ರಹಿಸಿದರು.

ಸಾಮಾಜಿಕ ಜಾಲತಾಣದಲ್ಲಿ ಫೋಟೋ ವೈರಲ್

ಗೃಹಿಣಿ ನೇಣಿಗೆ ಶರಣು, ಯುವಕ ಆತ್ಮಹತ್ಯೆ

ಹುಣಸೂರು, ಡಿ.19–ಸಾಮಾಜಿಕ ಜಾಲತಾಣದಲ್ಲಿ ತಾನು ಯುವಕನ ಜೊತೆ ಇರುವ ಭಾವಚಿತ್ರವನ್ನು ಹರಿಬಿಟ್ಟಿದ್ದರಿಂದ ಮನ ನೊಂದ ಗೃಹಿಣಿಯೊಬ್ಬರು ನೇಣಿಗೆ ಶರಣಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ಫೋಟೋ ಶೇರ್ ಮಾಡಿದ್ದ ಯುವಕನೂ ಸಹ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವರದಿಯಾಗಿದೆ.

ಕಲ್ಕುಣಿಕೆಯ ರಂಗನಾಥ ಬಡಾವಣೆಯ ನಿವಾಸಿ ರಘು ಅವರ ಪತ್ನಿ ಶೃತಿ (28) ನೇಣಿಗೆ ಶರಣಾದ ಗೃಹಿಣಿಯಾಗಿದ್ದು, ಕಲ್ಕುಣಿಕೆಯ ನಿವಾಸಿ ಮಹದೇವ ನಾಯಕ ಅವರ ಪುತ್ರ ಮುರುಳಿ(20) ಎಂಬಾತನೂ ಕೂಡ ಕೆ.ಆರ್.ನಗರದ ಬಳಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಪಿರಿಯಾಪಟ್ಟಣ ತಾಲೂಕು ಸೂಳೆಕೋಟೆ ನಿವಾಸಿಯಾದ ಮೂರ್ತಿ ಅವರ ಪುತ್ರಿ ಶೃತಿಯನ್ನು ಈಗ್ಗೆ 7 ವರ್ಷಗಳ ಹಿಂದೆ ರಂಗನಾಥ ಬಡಾವಣೆಯ ನಿವಾಸಿ ನೀಲಕಂಠಾಚಾರಿ ಅವರ ಪುತ್ರ ರಘು ಅವರೊಂದಿಗೆ ವಿವಾಹ ಮಾಡಿಕೊಡಲಾಗಿದ್ದು, ದಂಪತಿಗೆ ಐದು ಮತ್ತು ಎರಡು ವರ್ಷದ ಇಬ್ಬರು ಮಕ್ಕಳಿದ್ದಾರೆ. ದಂಪತಿ ಅನ್ಯೋನ್ಯವಾಗಿದ್ದರು ಎನ್ನಲಾಗಿದೆ.

ಕಲ್ಕುಣಿಕೆಯ ನಿವಾಸಿ ಮಹದೇವ ನಾಯಕ ಅವರ ಪುತ್ರ ಮುರಳಿ ಮತ್ತು ಶೃತಿ ನಡುವೆ ಪರಿಚಯವಿದ್ದು, ಇವರಿಬ್ಬರು ಜೊತೆ ಇರುವ ಫೋಟೋಗಳನ್ನು ಮೊಬೈಲ್‌ನಲ್ಲಿ ತೆಗೆದುಕೊಂಡು ವೈರಲ್ ಮಾಡಿದ್ದನಂತೆ. ಈ ಫೋಟೋವನ್ನು ಮುರಳಿ ತನ್ನ ವಾಟ್ಸಾಪ್ ಡೀಪಿಗೆ ಹಾಕಿಕೊಂಡಿದ್ದನಂತೆ. ಇದು ರಘು ಅವರ ಅಣ್ಣನ ಮಗ ಸೇರಿದಂತೆ ಕುಟುಂಬದವರಿಗೆಲ್ಲಾ ಈ ವಿಷಯ ತಿಳಿದು ಚರ್ಚೆಯಾಗಲಾರಂಭಿಸಿದೆ. ಇದು ಎಲ್ಲರಿಗೂ ಗೊತ್ತಾಗಿ ನನ್ನ ಮಾನ–ಮರ್ಯಾದೆ ಹೋಯಿತು ಎಂದು ಶೃತಿ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾದಳು ಎಂದು ಹೇಳಲಾಗಿದೆ

ವಿಷಯ ತಿಳಿದು ಆಗಮಿಸಿದ ಶೃತಿಯ ತಂದೆ ಮೂರ್ತಿ ಅವರು, ನನ್ನ ಮಗಳ ಸಾವಿಗೆ ಮಹದೇವನಾಯಕ ಅವರ ಪುತ್ರ ಮುರಳಿ ಕಾರಣ. ಆತನ ಮೇಲೆ ಕ್ರಮ ಜರುಗಿಸುವಂತೆ ಹುಣಸೂರು ಟೌನ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ದೂರಿನ ಮೇರೆಗೆ ಐಪಿಸಿ 306 ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶೃತಿ ಆತ್ಮಹತ್ಯೆ ವಿಚಾರ ತಿಳಿಯುತ್ತಿದ್ದಂತೆ ಹುಣಸೂರಿನಿಂದ ಜಾಗ ಖಾಲಿ ಮಾಡಿದ ಮುರಳಿ ತನ್ನ ಮೇಲೆ ಪ್ರಕರಣ ದಾಖಲಾದ್ದರಿಂದ ಭಯಗೊಂಡು ಕೆ.ಆರ್. ನಗರಕ್ಕೆ ತೆರಳಿ, ಅಲ್ಲಿನ ರೈಲ್ವೆ ನಿಲ್ದಾಣದ ಬಳಿ ಇರುವ ಪಾಳು ಬಿದ್ದ ಕಟ್ಟಡದ ಮರದ ಜಂತಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಕುರಿತು ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರು ಮತ್ತು ಕೆ.ಆರ್.ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಇವರಿಬ್ಬರ ಆತ್ಮಹತ್ಯೆಗೆ ಕಾರಣವೇನೆಂದು ಮಾಹಿತಿ ಕಲೆ ಹಾಕುತ್ತಿದ್ದಾರೆ.

ಜಾತಿ ನಿಂದನೆ ಪ್ರಕರಣ ದಾಖಲು: ಶೃತಿ ಆತ್ಮಹತ್ಯೆಗೆ ಶರಣಾಗುತ್ತಿದ್ದಂತೆ ಆಕೆಯ ಕುಟುಂಬದ ಕೆಲವರು ಕಲ್ಕುಣಿಕೆಯ ತಮ್ಮ ನಿವಾಸಕ್ಕೆ ಆಗಮಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜಾತಿ ನಿಂದನೆ ಮಾಡಿದ್ದಾರೆ ಎಂದು ಮಹದೇವ ನಾಯಕ ಕುಟುಂಬದವರು ದೂರು ನೀಡಿದ್ದು, ಜಾತಿ ನಿಂದನೆ ಕೇಸು ದಾಖಲಾಗಿದೆ.

ಡಿ.23ರಿಂದ ದಾವಣಗೆರೆಯಲ್ಲಿ ವೀರಶೈವ ಮಹಾಸಭಾದ 24ನೇ ಮಹಾ ಅಧಿವೇಶನ

ತಾಲೂಕಿನ ಜನ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ



ನಂಜನಗೂಡು, ಡಿ.19– ದಾವಣಗೆರೆಯಲ್ಲಿ ಡಿ. 23 ಮತ್ತು 24ರಂದು ಅಖಿಲ ಭಾರತ ವೀರಶೈವ ಮಹಾಸಭಾದ 24ನೇ ಮಹಾ ಅಧಿವೇಶನ ನಡೆಯಲಿದ್ದು. ಸಮಾಜದ ಬಂಧುಗಳು ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಧಿವೇಶನವನ್ನು ಯಶಸ್ವಿಗೊಳಿಸಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹಾದೇವಪ್ಪ ಮನವಿ ಮಾಡಿದರು.

ನಗರದ ಜೆಎಸ್‌ಎಸ್ ಮಂಗಳಮಂಟಪದಲ್ಲಿ ಪೂರ್ವಭಾವಿ ಸಭೆಯನ್ನು ನಡೆಸಿ ಮಾತನಾಡಿದರು. ಚಿತ್ರದುರ್ಗ, ಬಳ್ಳಾರಿ, ಹಾವೇರಿ ಮತ್ತು ಚಿಕ್ಕಮಗಳೂರು ಜಿಲ್ಲಾ ಘಟಕಗಳ ಸಹಕಾರದೊಂದಿಗೆ ದಾವಣಗೆರೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ 24 ನೇ ಮಹಾ ಅಧಿವೇಶನವು ಅದ್ಧೂರಿಯಾಗಿ ನಡೆಯಲಿದೆ ಎಂದರು.

ಅಧಿವೇಶನದಲ್ಲಿ ನಾಡಿನ ಹಿರಿಯ ಮಠಾಧೀಶರು, ಪ್ರಮುಖ ರಾಜಕೀಯ ನಾಯಕರು, ಸಮಾಜದ ಪ್ರಮುಖ ಮುಖಂಡರುಗಳು, ಸಾಹಿತಿಗಳು, ಕಲಾವಿದರು ಭಾಗವಹಿಸಲಿದ್ದಾರೆ. ಸಮಾರಂಭದಲ್ಲಿ ಧಾರ್ಮಿಕ, ಸಾಮಾಜಿಕ, ಕೈಗಾರಿಕೆ, ಕೃಷಿ, ಮಹಿಳಾ ಮತ್ತು ಯುವ ಅಧಿವೇಶನಗಳು ಪ್ರತ್ಯೇಕ ವೇದಿಕೆಯಲ್ಲಿ ನಡೆಯಲಿವೆ ಎಂದು ಅವರು ವಿವರಿಸಿದರು.

ಬದನವಾಳು ಮಂಜುನಾಥ್, ತಾಂಡವಪುರ ಮಾದು, ಎಂ.ಕೆ. ಬಸವಣ್ಣ, ಶಿವಬಸಪ್ಪ, ಶಿವಪ್ರಕಾಶ್, ಮಲ್ಲೇಶ್, ಗುರುಮಲ್ಲಪ್ಪ, ವೀರೇಶ್ ಕುಮಾರ್, ಅಣ್ಣ ಬಸವಣ್ಣ, ಅಕ್ಕ ಮಹಾದೇವಮ್ಮ, ಸುಧಾ ಚಿಕ್ಕಮಾದಪ್ಪ, ಹೇಮಾ ಸೇರಿದಂತೆ ವೀರಶೈವ ಮುಖಂಡರು ಇದ್ದರು.

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾರಿ ಗೋಲ್‌ಮಾಲ್

- ಕಾಮಗಾರಿ ನಡೆಸದೇ ಸುಳ್ಳು ಬಿಲ್ ಸೃಷ್ಟಿಸಿ ಹಣ ಗುಳುಂ
- ಸಾಮಾಜಿಕ ಲೆಕ್ಕ ಪರಿಶೋಧನಾ ಗ್ರಾಮಸಭೆಯಲ್ಲಿ ಗ್ರಾಮಸ್ಥರ ಆರೋಪ



ಹಿರೀಕ್ಯಾತನಹಳ್ಳಿ, ಡಿ.19– ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾರಿ ಗೋಲ್‌ಮಾಲ್ ನಡೆದಿದ್ದು, ಕಾಮಗಾರಿಗಳನ್ನು ಮಾಡದೆ ಸುಳ್ಳು ಬಿಲ್ಲು ಸೃಷ್ಟಿಸಿ 30ಕ್ಕೂ ಹೆಚ್ಚು ಕಾಮಗಾರಿ ಹಣವನ್ನು ಗುಳುಂ ಮಾಡಲಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ನಡೆದ ಸಾಮಾಜಿಕ ಲೆಕ್ಕ ಪರಿಶೋಧನಾ ಗ್ರಾಮಸಭೆಯಲ್ಲಿ ಸಾರ್ವಜನಿಕರು ಈ ಗಂಭೀರ ಆರೋಪ ಮಾಡಿದರು.

ನರೇಗಾ ಯೋಜನೆಯಲ್ಲಿ ಮಾಡಿದ ಕಾಮಗಾರಿಗಳನ್ನು 14 ಮತ್ತು 15ನೇ ಹಣಕಾಸಿನ ಯೋಜನೆಯಲ್ಲಿ ಸೇರಿಸಿ ಒಂದೇ ಕೆಲಸಕ್ಕೆ ಎರಡು ಮಾದರಿಯ ಬಿಲ್ ಸೃಷ್ಟಿಸಿ ಕಾಮಗಾರಿ ಮಾಡಿದಂತೆ ತೋರಿಸಿದ್ದಾರೆ ಎಂದು ಸಭೆಯಲ್ಲಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಹಿರೀಕ್ಯಾತನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ನರೇಗಾ ಮತ್ತು 14ನೇ ಹಣಕಾಸಿನ ಯೋಜನೆಯಲ್ಲಿ ಎರಡೆರಡು ಬಿಲ್ ಮಾಡಿ ನಾಲ್ಕು ಕೊಠಡಿಗಳಿಗೆ ಬಣ್ಣ ಸುಣ್ಣ ಹೊಡೆಯುವ ಬದಲು ಕೇವಲ ಎರಡು ಕೊಠಡಿಗಳಿಗೆ ಸುಣ್ಣ ಬಳಿದು ಎರಡು ಬಿಲ್ ಮಾಡಲಾಗಿದೆ. ಇದೇ ಶಾಲೆಯ ಅಂಗವಿಕಲರ ಶೌಚಾಲಯ ಕೆಲಸ ಪೂರ್ಣಗೊಳ್ಳದೆ ಇದ್ದರೂ ಬಿಲ್ ಪಾವತಿ ಮಾಡಲಾಗಿದೆ. ಪಂಚಾಯಿತಿ ವ್ಯಾಪ್ತಿಯ ಹಲವು ಕೆರೆ ಕಟ್ಟೆಗಳಲ್ಲಿ ಒಂದಿಷ್ಟು ಕೆಲಸ ಮಾಡದೆ ನರೇಗಾದಲ್ಲಿ ಬಿಲ್ ಪಾವತಿಸಲಾಗಿದೆ. ಶಿರೇನಹಳ್ಳಿ ಗ್ರಾಮದ ನೀರಿನ ತೊಂಬೆ ರಿಪೇರಿ ಮಾಡದೆ ಹಣ ಪಾವತಿಯಾಗಿದೆ. ಇನ್ನು ಹಲವು ರಸ್ತೆಗಳಿಗೆ ಮೆಟ್ಲಿಂಗ್ ಕೆಲಸವಾಗಿದೆ ಎಂದು ಹಣ ದುರುಪಯೋಗವಾಗಿದೆ. ಹೀಗೆ 30ಕ್ಕೂ ಹೆಚ್ಚು ಕಾಮಗಾರಿ ಮಾಡದೆ ಹಣ ದುರುಪಯೋಗಪಡಿಸಿಕೊಂಡಿರುವ ಸಂಬಂಧ ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಕಾಮಗಾರಿಗಳ ಹಣ ಮರುಪಾವತಿ ಮಾಡಿಸುವಂತೆ ಸಾರ್ವಜನಿಕರು ಒತ್ತಾಯಿಸಿದರು .

> ಈ ಕಾಮಗಾರಿಗಳ ಬಗ್ಗೆ ಸಾರ್ವಜನಿಕರು ಒಪ್ಪಿಗೆ ನೀಡಿಲ್ಲ. ಈ ಕಾಮಗಾರಿಗಳನ್ನು ಮಾಡಿಲ್ಲ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಮಾಹಿತಿಯನ್ನು ಸಭೆಯ ನಡಾವಳಿಯ ಪುಸ್ತಕದಲ್ಲಿ ಬರೆಯಲಾಗಿದೆ. ಇದನ್ನು ಸಂಬಂಧಪಟ್ಟ ಮೇಲಾಧಿಕಾರಿಗಳಾದ ತಾಲೂಕು ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಿಕಾರಿಗಳಿಗೆ ಮಾಹಿತಿ ನೀಡಲಾಗುವುದು.
> - ಅಶ್ವಿನಿ, ಸಾಮಾಜಿಕ ಲೆಕ್ಕ ಪರಿಶೋಧನಾ ಸಮಿತಿಯ ನೋಡಲ್ ಅಧಿಕಾರಿ

ಸಭೆಯಲ್ಲಿ ತಾಲೂಕು ಸಮನ್ವಯಾಧಿಕಾರಿ ಗೌರೀಶ್, ಗ್ರಾ.ಪಂ.ಅಧ್ಯಕ್ಷೆ ಕು. ರುಕ್ಮಿಣಿ ಪಿಡಿಒ ಶಿಲ್ಪಶ್ರೀ, ಲೆಕ್ಕ ಸಹಾಯಕ ಮಹದೇವ್ ಹಾಗೂ ಸದಸ್ಯರು, ಸಾರ್ವಜನಿಕರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಫೈಟ್ ಕ್ಲಬ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾಯಾ ನಗರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಜರುಗಾ ಹುಷಾರುಗಾ(ತೆ)	4 ಪ್ರದರ್ಶನಗಳು
ಸಂಗಂ	
ಸ್ನೇಹರ್ಷಿ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಪ್ತಸಾಗರದಾಚೆ ಎಲ್ಲೋ–ಸೈಡ್ ಬಿ(ಕ)	4 ಪ್ರದರ್ಶನಗಳು
ಪ್ರಭಾ	
ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ,
ಸ್ಕ್ರೀನ್ 3	ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು

4ನೇ ದಿನ, ಬುಧವಾರ 20-12-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಚಿತ್ರದುರ್ಗ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ದಿ ಏಂಜಲ್ ಪವರ್ 2. ಮಿನಿ ಮೂನ್ಸ್ 3. ಆರ್‌ಮೂಮೆಂಟ್

II. ಬಿಜಾಪುರ್ ಪ್ಲೇಟ್ ಡಿ2–1100 ಮೀ. ರೇಟೆಡ್ 20 ರಿಂದ 45. (ನೋ ವಿಘ್) ಮ.2.30ಕ್ಕೆ
1 ರನ್ನಿಂಗ್ ಬೋಲ್ಟ್ 2. ಸಿಯೋಲ್ 3. ಕೇಸರಿ ಕ್ವೀನ್

III. ಲಾಲ್‌ಬಾಗ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ವೆನ್ ಚೆಂಗ್ 2. ಡಿ ಲಾರ್ಡ್ 3 ಮೈ ಲೈಫ್ ಮೈ ರೂಲ್ಸ್

IV. ಬಿಜಾಪುರ್ ಪ್ಲೇಟ್ ಡಿ1–1100 ಮೀ. ರೇಟೆಡ್ 20 ರಿಂದ 45. (ನೋ ವಿಘ್) ಮ.3.30ಕ್ಕೆ
1. ಸಿಯೋಲ್ ಫಾರ್ ಬುಲೆಟ್ 2. ಮೇ ಬರ್ರಿ 3. ಪೋಲಾರ್ ಕ್ವೀನ್

V. ಡಾ. ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ಶೀಬಾ 2. ಬ್ರೇವ್ ಟ್ರೂಪರ್ 3. ಗೋಲ್ಡ್ ಕೈಟ್

VI. ಕ್ರೌನ್ ಟ್ರೆಷರ್ ಪ್ಲೇಟ್– 1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1 ವಿಜಯ ಬ್ರೇವ್ 2. ಡಿ ರೋಮನ್ ರೀಜನ್ಸ್ 3. ಫ್ಲಾಷ್ ಬಾಂಡ್

VII. ದಾಂಡೇಲಿ ಪ್ಲೇಟ್–1600 ಮೀ. ಸಂ.5.00ಕ್ಕೆ
1 ಮಿಸ್ಟಿಕ್ ಬಾಂಡ್ 2. ಡಿ ಗೋಲ್ಡ್ ಸ್ಟಾರ್ 3. ಬೆಂಗಾಜಿ

ದಿನದ ಅತ್ಯುತ್ತಮ	: ಮಿಸ್ಟಿಕ್ ಬಾಂಡ್
ಡಬ್ಬಲ್	: ರನ್ನಿಂಗ್ ಬೋಲ್ಟ್, ಶೀಬಾ
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಹಸಿರು ನಮ್ಮ ಉಸಿರು

ರಾಜ್ಯದಲ್ಲಿ ಒಂದೇ ದಿನ 44 ಕೋವಿಡ್ ಕೇಸ್ ಪತ್ತೆ

ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆ

ಬೆಂಗಳೂರು, ಡಿ.19– ದೇಶದಲ್ಲಿ ಕೋವಿಡ್ ಉಪತಳಿ ಜೆಎನ್ 1 (Covid JN 1) ಮೊದಲ ಪ್ರಕರಣ ಪತ್ತೆಯಾಗಿರುವುದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಮುಂಜಾಗ್ರತೆ ವಹಿಸುವಂತೆ ಎಲ್ಲ ರಾಜ್ಯ ಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಆರೋಗ್ಯ ಇಲಾಖೆ ಅಲರ್ಟ್ ಆಗಿದ್ದು, ಟೆಸ್ಟಿಂಗ್ ಹೆಚ್ಚಿಸಲು ತೀರ್ಮಾನಿಸಿದೆ. ಅದಕ್ಕೂ ಮೊದಲು ಕರ್ನಾಟಕದಲ್ಲಿ ಇಂದು (ಡಿ.19) ಒಂದೇ ದಿನ 44 ಕೊರೊನಾ ಪ್ರಕರಣಗಳು ಪತ್ತೆಯಾಗಿವೆ. ಇದರೊಂದಿಗೆ ಕೊರೊನಾ ಸಕ್ರಿಯ ಪ್ರಕರಣಗಳ ಸಂಖ್ಯೆ 79ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಇಂದು ಪತ್ತೆಯಾದ ಕೋರೊನಾ ಕೇಸ್ ಸಂಖ್ಯೆ 44, ಇಂದು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದವರ ಸಂಖ್ಯೆ 35. ಇನ್ನು ರಾಜ್ಯದಲ್ಲಿ ಒಟ್ಟು ಸಕ್ರಿಯ ಕೊರೋನಾ ಕೇಸ್‌ಗಳು 79 ಇವೆ. ಇದರೊಂದಿಗೆ ಕರ್ನಾಟಕದಲ್ಲಿ ಪಾಸಿಟಿವಿಟಿ ಪ್ರಮಾಣ ಶೇ.6.09ರಷ್ಟಿದೆ.

ನೆರೆಯ ಕೇರಳ ರಾಜ್ಯದಲ್ಲಿ ಕೊರೊನಾ ವೈರಸ್‌ನ ಜೆಎನ್1 ರೂಪಾಂತರಿ ತಳಿಯಿಂದಾಗಿ ಸೋಂಕು ಹರಡುತ್ತಿದೆ. ಈ ಹಿನ್ನೆಲೆಯಲ್ಲಿ ಇತ್ತ ಕರ್ನಾಟಕದಲ್ಲಿ ಆತಂಕ ಸೃಷ್ಟಿಯಾಗಿದ್ದು, ಈ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಕೊವಿಡ್ ತಾಂತ್ರಿಕ ಸಲಹಾ ಸಮಿತಿ ಸಭೆ ನಡೆಸಿದ್ದು, ಕೆಲ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

ಔಷಧ, ಆಕ್ಸಿಜನ್, ಬೆಡ್ ವ್ಯವಸ್ಥೆ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ. ಅಲ್ಲದೇ ಕೋವಿಡ್ ಟೆಸ್ಟ್ ಹೆಚ್ಚಿಸಲು ಅಧಿಕಾರಿಗಳು, ಸಿಬ್ಬಂದಿಗೆ ಸೂಚಿಸಲಾಗಿದೆ. ನಾಳೆಯಿಂದ ಕೊವಿಡ್ ಟೆಸ್ಟಿಂಗ್ ಹೆಚ್ಚಿಸಲಾಗುವುದು. ಆರಂಭದಲ್ಲಿ 500 ರಿಂದ 1000 ಕೊವಿಡ್ ಟೆಸ್ಟಿಂಗ್ ಮಾಡಲಾಗುತ್ತದೆ. ಒಂದು ವಾರದ ಬಳಿಕ 5000 ಕೊವಿಡ್ ಟೆಸ್ಟಿಂಗ್ ಮಾಡಲಾಗುತ್ತದೆ. ವಿಶ್ವದಲ್ಲಿ ಜೆಎನ್1 ವೈರಸ್ ನವೆಂಬರ್‌ನಲ್ಲಿ 10% ಹರಡುವಿಕೆ ಇತ್ತು ಈಗ ಡಿಸೆಂಬರ್ ವೇಳಗೆ 30% ಆಗಿದೆ ಎಂದು ಆರೋಗ್ಯ ಇಲಾಖೆ ಆಯುಕ್ತ ರಂದೀಪ್ ಮಾಹಿತಿ ನೀಡಿದ್ದಾರೆ.



ರೈಲ್ವೆ ಸಲಹಾ ಸಮಿತಿ ಸದಸ್ಯ

ಮೈಸೂರು, ಡಿ. 19– ನೈರುತ್ಯ ರೈಲ್ವೆಯ, ರೈಲ್ವೆ ಮಂಡಳಿಯ ಆದೇಶದಂತೆ ಮೈಸೂರು ವಿಭಾಗದ ಮೈಸೂರು ರೈಲ್ವೆ ಸಲಹಾ ಸಮಿತಿಯ ಸದಸ್ಯರಾಗಿ ಸರಸ್ವತಿಪುರಂ ನಿವಾಸಿ ಗೋಪಾಲ್. ಜಿ ಅವರನ್ನು ನೇಮಿಸಲಾಗಿದೆ ಎಂದು ಹಿರಿಯ ವಿಭಾಗದ ವಾಣಿಜ್ಯ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯಗಳು
ನಾಗರಾಜು ವಿ
ಕಾಂಗ್ರೆಸ್ ಮುಖಂಡರು
ಹಂಚ್ಯಾ ಗ್ರಾಮ
ಶುಭಕೋರುವವರು
ಹಂಚ್ಯಾ ಗ್ರಾಮಸ್ಥರು

ಮೈಸೂರು ಮಿತ್ರ
ಬೇಕಾಗಿದ್ದಾರೆ
ಡಿಟಿಪಿ ಆಪರೇಟರ್
ಪೇಜ್‌ಮೇಕರ್ 7, ಫೋಟೋಶಾಪ್, ಕೋರಲ್‌ಡ್ರಾ,
ನುಡಿ ಮತ್ತು ಬರಹ ಲಿಪಿ ಗೊತ್ತಿರಬೇಕು.
ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವುಳ್ಳ ಸ್ವವಿವರದೊಂದಿಗೆ
ಕೂಡಲೇ ಸಂಪರ್ಕಿಸಿ. ಸಮಯ: ಮಧ್ಯಾಹ್ನ 3 ರಿಂದ 5
ವ್ಯವಸ್ಥಾಪಕ ಸಂಪಾದಕರು 'ಮೈಸೂರು ಮಿತ್ರ'
ಪ್ರಾದೇಶಿಕ ಬೆಳಗಿನ ಪತ್ರಿಕೆ, ಬನ್ನಿಮಂಟಪ, ಮೈಸೂರು-570015

ವಾಣಿಜ್ಯ ಪದವೀಧರರೇ ಗಮನಿಸಿ
ಟ್ಯಾಲಿ ಮತ್ತು ಆದಾಯ ತೆರಿಗೆ ಮತ್ತು ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವುದನ್ನು ಕಲಿಯಿರಿ
ನಿಮ್ಮ ಕಛೇರಿಯನ್ನು ತೆರೆಯಲು ಸಹಾಯ ಮಾಡುತ್ತೇವೆ
ಅಥವಾ ಉದ್ಯೋಗ ಅವಕಾಶ ಖಚಿತ
ಮುಂದಿನ ಬ್ಯಾಚ್ 1-1-2024 ರಿಂದ ಪ್ರಾರಂಭ
* H.O: GLOBAL ACCOUNTS, Gokulam, Mysore
* CORPORATE OFFICE: 5th Cross, Malleshwaram, B'Lore
* BRANCH 1: CSCE Edn. Pvt. Ltd., Lakshmi Vilas Road, Mysore
* BRANCH 2: Vivekananda Nagara Circle, Mysore
* BRANCH 3: 9th Main, Saraswathipuram
* BRANCH 4: Near Chamarajeshwara Temple, Ch'nagar.
ವ್ಯಾಪಾರಿಗಳೇ ಗಮನಿಸಿ
ನಮ್ಮಲ್ಲಿರುವ ಅನುಭವವುಳ್ಳ ವಾಣಿಜ್ಯ ಪದವೀಧರರು ನಿಮ್ಮ ಮನೆ ಬಾಗಿಲಿಗೆ ಬಂದು ನಿಮ್ಮ ಲೆಕ್ಕ ಪತ್ರಗಳ ನಿರ್ವಹಣೆ ಮಾಡಿಕೊಡುತ್ತಾರೆ.
ವಯಸ್ಸಿನ ಮಿತಿ ಇಲ್ಲ. ಗೃಹಿಣಿಯರಿಗೆ ಅವಕಾಶ
ಪಾರ್ಟ್ ಟೈಮ್ ಅಥವಾ ಫುಲ್ ಟೈಮ್
ಕರೆಮಾಡಿ: 8951525007, 9448022967

SAVENSA
BUSINESS SOLUTIONS PRIVATE LIMITED
LOOKING FOR A JOB?
WANTED
SALES MANAGER - 24 NO'S
Contact : 9141622666
Candidates Required & Work Location at Below Cities
Districts : Mysore, Mandya, Chamarajanagar, Hassan & Madikeri
Sub Locations : Kollegala, Malavalli, K.R. Pete, K.R.Nagar, H.D.Kote, Hunsur, Kushal Nagar, Kanakapura Maddur, Nagamangala, Hannur & Gundlupete
Email : info@savensa.co.in Web : www.savensa.co.in

ಮೈಸೂರಿನಲ್ಲಿ
AVIS HOSPITALS
ಉಬ್ಬಿದ ರಕ್ತನಾಳಗಳಿಗೆ ಚಿಕಿತ್ಸೆ ನೀಡದೆ ಇದ್ದರೆ ಅದು ಹುಣ್ಣು, ರಕ್ತಸ್ರಾವ, ಕಲೆಯಾಗಿ ಪರಿವರ್ತನೆ ಆಗಬಹುದು ಆದರಿಂದ ಇಂದೆ ಏವಿಸ್ ಅಸ್ಪತೆಯ ತಜ್ಞ ವೈದ್ಯರಾದ ವ್ಯಾಸ್ಕ್ಯುಲಾರ್ ಸರ್ಜನ್ ಅವರನ್ನು ಬೇಟಿ ಮಾಡಿ.
ಡಾ ಮಣಿಮಾರನ್
21 ನವೆಂಬರ್ ಗುರುವಾರ 2023
8088 837 000

50% ರಿಯಾಯಿತಿ
ಕಾಂಚೀಪುರಂ ರೇಷ್ಮೆ ಸೀರೆಗಳು
ಮಾರಾಟ ಮತ್ತು
ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಈ ಅವಕಾಶ 7 ದಿನಗಳು ಮಾತ್ರ
ಹೋಟೆಲ್
ಮಯೂರ ಯಾತ್ರಿನಿವಾಸ್
ಜೆ.ಎಲ್.ಬಿ. ರಸ್ತೆ, ಮೈಸೂರು - 5
ಮೊ. : 9481820079

8ನೇ ವರ್ಷದ ಸವಿನೆನಪು
ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖಿತಪ್ತ
ಶ್ರೀಮತಿ ನಿಂಗಮ್ಮ, ಲೇಟ್ ಗೌಡ ನಿಂಗೇಗೌಡರ ಕುಟುಂಬವರ್ಗ, ಶ್ರೀಮತಿ ಅನಸೂಯ ಮೃತರ ಪತ್ನಿ, ಮತ್ತು ಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಹೊಟಗಳ್ಳಿ
ಶ್ರೀ ನಾಗರಾಜು
ನಿಧನ: 20.12.2015

6ನೇ ವರ್ಷದ ಸವಿನೆನಪು
ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತರು ಪತ್ನಿ ಹೇಮಾ ಹಾಗೂ ಕುಟುಂಬವರ್ಗದವರು
P. ಸತೀಶ್
(ಗ್ರಾಮ ಪಂಚಾಯತಿ S.D.A.)

ಶ್ರದ್ಧಾಂಜಲಿ
ನಗರದ ಶ್ರೀರಾಂಪುರದ ನಿವಾಸಿ ನಿವೃತ್ತ ಕೆ.ಎಸ್.ಆರ್.ಟಿ.ಸಿ ನಿರ್ವಾಹಕ ಕೆ.ಹೆಚ್. ಶಂಭುಲಿಂಗು (72) ಅವರು ಡಿಸೆಂಬರ್ 9 ರಂದು ತಮ್ಮ ನಿವಾಸದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಅಂತ್ಯಕ್ರಿಯೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಭಾನುವಾರ ನೆರವೇರಿತು. ದುಃಖತಪ್ತರು: ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು ಮತ್ತು ಮೊಮ್ಮಕ್ಕಳು
ಕೆ.ಹೆಚ್.ಶಂಭುಲಿಂಗು

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

Wanted Teachers for CBSE English Medium School in Nanjangud
Qualification: Any Degree
Requirement: Good communication in English language. Preference will be given to candidates from Nanjangud.
Interested candidates may contact :
7676110063 / 8150857937

ಹಸಿರು ನಮ್ಮ ಉಸಿರು

ಸಂತಸ ಐವಿಎಫ್ ಆಸ್ಪತ್ರೆ ವತಿಯಿಂದ ಮಕ್ಕಳಿಲ್ಲದ ದಂಪತಿಗಳಿಗೆ ಉಚಿತ ತಪಾಸಣೆ ಶಿಬಿರ ನಡೆಸಲಾಗುವುದು.
ಮಹಿಳೆಯರಿಗೆ ಉಚಿತ ಸ್ಕ್ಯಾನಿಂಗ್ ಮಾಡಲಾಗುವುದು
ಪುರುಷರಿಗೆ ಉಚಿತ ವಿರ್ಯಾಣು ಪರೀಕ್ಷೆ
ಐವಿಎಫ್ ಮತ್ತು ಸ್ತ್ರೀರೋಗ ಸಮಸ್ಯೆಗೆ ಉಚಿತ ಸಮಾಲೋಚನೆ
ವಿಶೇಷ ಸೂಚನೆ: ಮಕ್ಕಳಿಲ್ಲದ ಐದು ದಂಪತಿಗಳಿಗೆ ಉಚಿತ ಐವಿಎಫ್ ಪ್ಯಾಕೇಜ್ ನೀಡಲಾಗುವುದು (ಷರತ್ತುಗಳು ಅನ್ವಯ)
Santasa Spreading Happiness
ಸಂತಸ ಐವಿಎಫ್ & ಎಂಡೋಸರ್ಜರಿ ಸಂಸ್ಥೆ
ಉಚಿತ ಶಿಬಿರವನ್ನು ದಿನಾಂಕ: 27.12.2023 ಬುಧವಾರ ಮತ್ತು 28.12.2023 ಗುರುವಾರ ನಡೆಸಲಾಗುವುದು. ಸಮಯ ಬೆಳಗ್ಗೆ 10.00 ರಿಂದ ಮಧ್ಯಾಹ್ನ 3.00 ರವರೆಗೆ
ಸಂತಸ ಐವಿಎಫ್ ಆಸ್ಪತ್ರೆ
ಸ್ಥಳ: ಹೊಸ ಕಾಂತರಾಜ ಅರಸ್ ರಸ್ತೆ, ಪಂಚವಟಿ ಹೋಟೆಲ್ ಎದುರು, ವೇದಾಂತ ಹೆಮ್ಮಿಗೆ ವೃತ್ತದ ಹತ್ತಿರ, ಲಕ್ಷ್ಮೀಪುರಂ, ಮೈಸೂರು
ಹೆಚ್ಚಿನ ಮಾಹಿತಿಗಾಗಿ ಮತ್ತು ಉಚಿತ ಶಿಬಿರಕ್ಕೆ ನಿಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಸಂಪರ್ಕಿಸಿ
9620099936

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ ವಿಶ್ವಾಸಾರ್ಹತೆ, ಅದರ ಅಭ್ಯಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

neem BOND PLATINUM
PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

ಗಾಂಧಿ ಶಿಲ್ಪ ಬಜಾರ್
ಕರಕುಶಲ - ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ
15 – 24 ಡಿಸೆಂಬರ್ 2023
ಬೆಳಗ್ಗೆ 10.00 ರಿಂದ ಸಂಜೆ 9.00
ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್
ಹೆಬ್ಬಾಳು ಕೈಗಾರಿಕಾ ಪ್ರದೇಶ, ವರುಣ ರಸ್ತೆ, ಮೈಸೂರು-570 016
ಪಾರ್ಕಿಂಗ್ ಹಾಗೂ ಪ್ರವೇಶ ಉಚಿತ
9686677232, 9844550845, 8197583261

MUDA LIMITS
ಹೆರಿಟೇಜ್ ಹೋಮ್ಸ್
ಮೈಸೂರು - ಬೂಕನಕೆರೆ ಮುಖ್ಯರಸ್ತೆ, ಮೈಸೂರು
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
MEGA RESIDENTIAL TOWNSHIP
30x40 30x50
40x60 50x80
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹550/- ಪ್ರತಿ ಚದರ ಅಡಿ
ಅತಿಯೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿರ ನಿವೇಶನಗಳು
ಕಲವೇ ಸೈಟ್‌ಗಳು ಮಾತ್ರ ಲಭ್ಯ
ಅದ್ವಿಕಾ ವೆಂಚರ್ಸ್
95133 01854
90713 86615

ಸೈಟು ಮಾರಾಟಕ್ಕಿದೆ
ದಟ್ಟಗಳ್ಳಿ ರಿಂಗ್ ರಸ್ತೆ
ಬಿಜಾಸ ಬಡಾವಣೆಯಲ್ಲಿ
ಪೂರ್ವಕ್ಕಿರು 30x40
ಸೈಟು ಮಾರಾಟಕ್ಕಿದೆ. (Near)
ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ
8431254155

ಬೇಕಾಗಿದ್ದಾರೆ
ಫ್ಯಾಷನ್ ಜ್ಯುವೆಲರಿ ಶೋರೂಂನಲ್ಲಿ ಕೆಲಸ ಮಾಡಲು
ಸೇಲ್ಸ್ ಗರ್ಲ್ಸ್
ಕನ್ನಡ ಮತ್ತು ಇಂಗ್ಲೀಷ್ ವಾಕ್‌ಚಾತುರ್ಯ ವಿರಬೇಕು. ಉತ್ತಮ ಸಂಬಳ + ಇನ್‌ಸೆಂಟಿವ್ಸ್
NPG Lucky Stones
Ashoka Road, Mysore
ಫೋನ್ : 93 42 42 42 41

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ನಗರ, ರಾಜರಾಜೇಶ್ವರಿನಗರ, 2ನೇ ಕ್ರಾಸ್, ಮನೆ ನಂ. 640ರಲ್ಲಿ ವಾಸವಾಗಿರುವ ಲೇಟ್ ನಾಗಣ್ಣರವರ ಮಗನಾದ ಶ್ರೀ ಮಹೇಶ್, ಎ.ಎನ್. ರವರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಸದರಿ ಸ್ವತ್ತಿನ ಮಾಲೀಕರಾದ ಶ್ರೀಮತಿ. ಕೆ.ವಿ. ವೀಣಾ ಕೋಂ ಲೇಟ್ ವೆಂಕಟೇಶ ಮೂರ್ತಿ ರವರಿಂದ ಶುದ್ಧ ಕ್ರಯಕ್ಕೆ ಪಡೆದುಕೊಳ್ಳುವ ಸಂಬಂಧ ಈಗಾಗಲೇ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಈ ಸಂಬಂಧ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ಸಂಘ ಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಹತ್ತು (10) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆಂತಲೂ ಮತ್ತು ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲ. ಬೇರೆ ಯಾವುದೇ ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ ವ್ಯವಹರಿಸಿದಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ನಗರ, ಸರಸ್ವತಿಪುರಂ ಟಿ. ಕೆ. ಬಡಾವಣೆ 16ನೇ ಮೇನ್‌ನಲ್ಲಿರುವ ಮನೆ ನಂ. 766 ರ ವಿಸ್ತೀರ್ಣ ಪೂರ್ವ ಪಶ್ಚಿಮ: (59+65)/2 ಅಡಿಗಳು ಮತ್ತು ಉತ್ತರ ದಕ್ಷಿಣ: 40.00 ಅಡಿಗಳು, ಒಟ್ಟು 2480.00 ಚದರ ಅಡಿಗಳುಳ್ಳ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ. 769 ಮತ್ತು 781, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ. 767, ದಕ್ಷಿಣಕ್ಕೆ: ನಿವೇಶನ ಸಂಖ್ಯೆ. 765

Sd/- JAYAKUMAR,BA, LLB., Advocate
Office: No. 565/A, 20th Cross, 4th Main, 1st Stage, Vidyaranyapuram, Mysore -08
Mob. No. 9844539729

ದಿನಾಂಕ: 19-12-2023, ಸ್ಥಳ: ಮೈಸೂರು

ಶ್ರದ್ಧಾಂಜಲಿ
ಲಕ್ಷ್ಮಮ್ಮ (ನಾಚನಹಳ್ಳಿ ಪಾಳ್ಯ)
ಇವರು ದಿ: 19.12.2023 ಮಂಗಳವಾರದಂದು ದೈವಾಧೀನರಾಗಿದ್ದು, ಮೃತರ ಅಂತ್ಯಕ್ರಿಯೆಯನ್ನು ದಿ: 20.12.2023 ಬುಧವಾರ ಬೆಳಗ್ಗೆ 11ಕ್ಕೆ ಜೆ.ಪಿ.ನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು: ಕುಟುಂಬವರ್ಗದವರು

11ನೇ ವರ್ಷದ ಸವಿನೆನಪು
ವಿ ಬಾಲಕೃಷ್ಣ (ಬಾಲಣ್ಣ) ಉದ್ಯಮಿ
(ನಂದಿನಿ ಉತ್ಪನ್ನಗಳ ಅಧಿಕೃತ ಮಾರಾಟಗಾರರು)
ನೀವು ನಮ್ಮನ್ನಗಲಿ 11 ವರ್ಷ ಕಳೆದರೂ ಸದಾ ನಮ್ಮ ನೆನಪಿನಲ್ಲಿ ನಿಮ್ಮ ಮಾರ್ಗದರ್ಶನದಂತೆ ನಡೆಯುತ್ತಿರುವೆವು.
ದುಃಖತಪ್ತರು : ಪತ್ನಿ, ಮಕ್ಕಳು, ಸೊಸೆ, ಅಳಿಯ ಹಾಗೂ ಮೊಮ್ಮಕ್ಕಳು, ವಿ.ಪಾರ್ಥ ಅಂಡ್ ಬ್ರದರ್ಸ್ ಸಿಬ್ಬಂದಿ ವರ್ಗ, ಹಾಗೂ ಸ್ನೇಹ ಅಸೋಸಿಯೇಟ್ಸ್, ಬೆಂಗಳೂರು

